ಶ್ರೀ ಹೆಚ್. ಡಿ. ಚೌಡಯ್ಯ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳ, ...

ಅಧ್ಯಕ್ಷರು.—ಶ್ರೀಮಾನ್ ಚೌಡಯ್ಯನವರೇ ; ಸ್ವಲ್ಪ ನೆನ್ನೆಯ ದಿವಸ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಗಂಗಾಧರನ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳ ಬಗ್ಗೆ ಒಂದು ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಅದು ರೆಕಾರ್ಡ್ಸ್‌ಗೆ ಹೋಗಿದೆ. ಆದರೆ ಅವರು ಈ ಮನೆಯ ಸದಸ್ಯರಲ್ಲವಾದ್ದರಿಂದ ಅವರನ್ನು ತಾವು ಆ ಮಾತು ಕೇಳತಕ್ಕಂತಹ ಅಧಿಕಾರ ಬರುವುದಿಲ್ಲ. ಆದ್ದರಿಂದ ಆ ಪದಗಳನ್ನು ಕಡಿತದಿಂದ ತೆಗೆದು ಹಾಕಲಾಗಿದೆ.

ಶ್ರೀ ಹೆಚ್. ಗಂಗಾಧರನ್.—ತಮ್ಮ ಇಚ್ಛೆಯಂತೆ ಆಗಬಹುದು. ನನ್ನದೇನು ಅಭ್ಯಂತರವಿಲ್ಲ.

FINANCIAL BUSINESS

Discussion on Voting of Demands for Grant for 1982—83

Demand Nos. 12, 24 etc.,

† ಶ್ರೀ ಹೆಚ್. ಡಿ. ಚೌಡಯ್ಯ (ಕೆರೆಗೋಡು).— ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಹಾಗೂ ಅವರ ಸಹಾಯಕ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸಮರ್ಥಿಸುವುದರ ಜೊತೆಗೆ ಕೆಲವಾರು ಸಮಸ್ಯೆಗಳನ್ನು ತಿಳಿಸಿ ಅವುಗಳಿಗೆ ಸೂಕ್ತವಾದ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರಥಮವಾಗಿ ನೀರಾವರಿ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಕೃಷ್ಣರಾಜ ಸಾಗರ ತಮಗೆ ಗೊತ್ತಿದೆ ತಮಿಳುನಾಡಿನ ಮುಖ್ಯಮಂತ್ರಿಗಳು ನಮ್ಮ ರಾಜ್ಯಸರ್ಕಾರಕ್ಕೆ ಅಲ್ಲಿಂದ ನೀರು ಕೊಡಬೇಕೆಂದು ತಂತಿ ಕಳಿಸಿದ್ದಾರೆ. ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಈಗ ಕೃಷ್ಣರಾಜಸಾಗರ ಜಲಾಶಯದಲ್ಲಿ ನೀರು ಸುಮಾರು ೯೨ ಅಡಿ ಮಾತ್ರ ಇದೆ. ಬಹುಶಃ ಇನ್ನು ೪ ಅಡಿ ಅಥವಾ ೫ ಅಡಿ ಕೆಳಗಡೆ ನೀರು ಬಂದರೆ ಮೈಸೂರಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ. ಕೃಷ್ಣರಾಜಸಾಗರದ ಕೆಳಗಡೆ ಇರತಕ್ಕಂಥ ಸಾವಿರಾರು ಎಕರೆಯಲ್ಲಿ ಬಿತ್ತಿದ ಬೆಳೆಗೆ ತುಂಬಾ ತೊಂದರೆಯಾಗುತ್ತದೆ. ಈ ಒಂದು ಪರಿಸ್ಥಿತಿ ಸರಿಹೋಗುವವರೆಗೆ ಯಾವ ಕಾರಣಕ್ಕೂ ಕೂಡ ದಯಮಾಡಿ ಕೃಷ್ಣರಾಜ ಸಾಗರದಿಂದ ನೀರನ್ನು ತಮಿಳುನಾಡಿಗೆ ಬಿಡಬಾರದಾಗಿ ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ,

ಸ್ವಾಮಿ, ಈ ಕೃಷ್ಣರಾಜಸಾಗರ ಎಡದಂಡೆ ನಾಲೆ, ವಿಶ್ವೇಶ್ವರಯ್ಯ ನಾಲೆ ಈ ಒಂದು ಪ್ರದೇಶದಲ್ಲಿ ರೈತರು ೧೯೭೭ರಲ್ಲಿ ವರುಣಾ ನಾಲೆ ವಿರುದ್ಧ ಒಂದು ದೊಡ್ಡ ಚಳುವಳಿಯನ್ನು ಮೂರು ತಿಂಗಳ ಕಾಲ ನಡೆಸಿದ್ದನ್ನು ತಮಗೆ ಮತ್ತು ಇಡೀ ಸದನಕ್ಕೆ, ರಾಜ್ಯಕ್ಕೆ, ಗೊತ್ತಿರಬಹುದು. ೧೯೭೭ರಲ್ಲಿ ರೈತರು ಚಳುವಳಿಯನ್ನು ನಡೆಸಿ ವರುಣಾನಾಲೆ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇ ಆದರೆ ಅಚ್ಚುಕಟ್ಟಿನ ಎರಡು ಲಕ್ಷ ಎಕರೆ ಭೂಮಿಗೆ ಬಹಳ ತೊಂದರೆಯಾಗುತ್ತದೆ. ಆ ಪ್ರದೇಶದ ಜನರ ಜೀವನ್ಮರಣದ ಪ್ರಶ್ನೆ ಎನ್ನತಕ್ಕಂಥ ದೃಷ್ಟಿಯಿಂದ ಈ ಚಳುವಳಿ ನಡೆಯಿತು. ಸಾವಿರಾರು ಜನರು ಬೆಂಗಳೂರಿಗೆ ಬಂದು ಅಂದಿನ ಮುಖ್ಯಮಂತ್ರಿಗಳನ್ನು, ರಾಜ್ಯಪಾಲರನ್ನು ಭೇಟಿಮಾಡಿದರು. ತದನಂತರ ಅಂದಿನ ಮುಖ್ಯಮಂತ್ರಿಗಳು ಆ ಪ್ರದೇಶದ ರೈತ ಮುಖಂಡರ ಜೊತೆಯಲ್ಲಿ ಅನೇಕ ಸಾರಿ ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ಬಂದರು. ಆ ಒಪ್ಪಂದದ ಸಲುವಾಗಿಯೇ ಏನೋ ವಿಶ್ವೇಶ್ವರಯ್ಯ ನಾಲಾ ಪ್ರದೇಶಕ್ಕೆ ೨೨ ಲಕ್ಷ ಎಕರೆ ಭೂಮಿಗೆ ನೀರನ್ನು ಕೊಡಬೇಕು, ಅದಕ್ಕೋಸ್ಕರವಾಗಿ ಕೃಷ್ಣರಾಜಸಾಗರ ಎಡದಂಡೆ ನಾಲೆಗೆ ಆಧುನೀಕರಣ ಯೋಜನೆಯನ್ನು ಕೈಗೊಳ್ಳಬೇಕೆಂದು—ವರುಣಾ ನಾಲೆ ಚಳುವಳಿ ಸಂಬಂಧವಲ್ಲಿ ಒಂದು ಒಪ್ಪಂದ ಆಯಿತು. ಮತ್ತು ೧೯೭೮ರಲ್ಲಿ ಸರ್ಕಾರದಿಂದ ಒಂದು ಹುಕುಂ ಕೂಡ ಹೋಯಿತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ದೇವರಾಜ ಅರಸುರವರು ಈ ಒಂದು ಆಧುನೀಕರಣ ಯೋಜನೆ ಹಾಗೂ ವರುಣಾ ನಾಲೆ ಕೆಲಸವನ್ನು ಒಂದೇ ದಿವಸದಲ್ಲಿ ಪ್ರಾರಂಭಮಾಡುತ್ತೇವೆಂದು ಭರವಸೆ ಕೊಟ್ಟರು, ಮತ್ತು ಏಕಪ್ರಕಾರವಾಗಿ ಈ ಎರಡೂ ಕಾಮಗಾರಿಗಳನ್ನು ನಾಲ್ಕೈದು ವರ್ಷಗಳ ಅವಧಿಯೊಳಗೆ ಮುಗಿಸಬೇಕೆಂದು ಈ ಸದನದಲ್ಲಿ ವಾಗ್ದಾನವನ್ನು ಮಾಡಿದ್ದರು. ಆದರೆ ಕಳೆದ ಮೂರು-ಮೂರುವರೆ ವರ್ಷದಿಂದ ಆಗಿರುವ ಕೆಲಸವನ್ನು ನೋಡಿದರೆ, ಒದಗಿಸಿರುವ ಹಣ, ವೆಚ್ಚ

ಮಾಡಿರತಕ್ಕಂಥ ಹಣವನ್ನು ನೋಡಿದ್ದೇ ಆದರೆ ೧೯೮೨ನೇ ಮಾರ್ಚ್-ಏಪ್ರಿಲ್‌ವರೆಗೆ ವರುಣಾ ನಾಲೆಗೆ ಕಾಮಗಾರಿಗಾಗಿ ಸುಮಾರು ಮೂರು ಕೋಟಿ ರೂಪಾಯಿ ಹಣವನ್ನು ಸರ್ಕಾರ ವೆಚ್ಚಮಾಡಿದೆ. ಆದರೆ ಅದೇ ಆಧುನೀಕರಣ ಯೋಜನೆಯು ಕೃಷ್ಣರಾಜ ಸಾಗರ ಎಡದಂಡೆ ಯೋಜನೆಗೆ ೯೪ ಲಕ್ಷ ರೂಪಾಯಿ ಖರ್ಚುಮಾಡಿದೆ. ಈ ವರ್ಷದ ಆಯುವ್ಯಯ ಪಟ್ಟಿಯಲ್ಲಿ ವರುಣಾ ನಾಲೆಗೆ ಎರಡು ಕೋಟಿಯನ್ನು ಒದಗಿಸಿದ್ದಾರೆ. ಆಧುನೀಕರಣ ಯೋಜನೆಗೆ ೨೦ ಲಕ್ಷ ಒದಗಿಸಿದ್ದಾರೆ. ಅಂದಮೇಲೆ ಈ ಒಂದು ತಾರತಮ್ಯ ಏನಿದೆ ಎನ್ನತಕ್ಕಂಥಾದ್ದು ಈ ಸದನದಲ್ಲಿ ಗೊತ್ತಾಗುತ್ತದೆ. ಈ ಒಂದು ಕಾರಣದಿಂದ ಈ ವಿಷಯವನ್ನು ಅನೇಕಬಾರಿ ಈ ಪ್ರದೇಶದ ರೈತ ಪ್ರತಿನಿಧಿಗಳು ಆಗಾಗ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅರ್ಥಮಂತ್ರಿಗಳು ಕೂಡ ಒಂದಲ್ಲ, ಎರಡು ಬಾರಿ ಎಲ್ಲರನ್ನೂ ಕರೆಸಿ ಮಾತನಾಡುತ್ತೇನೆ ಎಂದು ಹೇಳಿ ಹೆಚ್ಚು ಹಣ ಒದಗಿಸಲಾಗುವುದೆಂದು ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ನನಗೆ ಗೊತ್ತಿರುವ ಮಟ್ಟಿಗೆ ಇದುವರೆಗೂ ಅಲ್ಲಿ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ನನಗೆ ತಿಳಿದ ಪ್ರಕಾರ ಆಧುನೀಕರಣ ಯೋಜನೆಗೆ ೫೦ ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ಕಾಮಗಾರಿಗಳಿಂದ ತೆಗೆದುಕೊಂಡು ಬಂದು ಈ ಒಂದು ಕಾಮಗಾರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಇನ್ನು, ಆಧುನೀಕರಣ ಯೋಜನೆಯು ಒಟ್ಟು ವೆಚ್ಚ ೬೩ ಕೋಟಿ ವರುಣಾನಾಲೆಗೆ ಕಾರ್ಯಕ್ರಮಕ್ಕೆ ವೆಚ್ಚವಾದರೋ ೨೫ ಕೋಟಿ ರೂಪಾಯಿ. ಅಂದಮೇಲೆ ನಾಲ್ಕೈದು ವರ್ಷಗಳಲ್ಲಿ ಈ ಕಾಮಗಾರಿಯನ್ನು ಮುಗಿಸಬೇಕಾದರೆ ಪ್ರತಿವರ್ಷವೂ ಎಷ್ಟು ಹಣವನ್ನು ಕೊಡಬೇಕಾಗುತ್ತದೆ ಎಂದರೆ ಏಳೆಂಟು ಕೋಟಿ ರೂಪಾಯಿಗಳಾದರೂ ಕೊಡಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಆಡಳಿತ ಪಕ್ಷದಲ್ಲಿದ್ದರೂ ಕೂಡ ಮೊನ್ನೆ ದಿವಸ ಶ್ರೀಮಾನ್ ಶೀರ್ನಾಳಿ ಚಂದಶೇಖರ್ ಅವರು ಒಂದು ಸಲಹೆಯನ್ನು ಕೊಟ್ಟರು. ಯಾವುದೇ ರೈತರ ಸಮಸ್ಯೆಗಳನ್ನು ನಮ್ಮ ಸರ್ಕಾರ ಬಗೆಹರಿಸಬೇಕಾದಂತಹ ಕಾಲದಲ್ಲಿ ರೈತರನ್ನು ಚಳುವಳಿಗೆ ಉದ್ಯುಕ್ತರಾಗುವಂತೆ ಅಪ್ರತ್ಯಕ್ಷವಾಗಿ ಪ್ರೇರಣೆ ಮಾಡಿ ನಂತರ ಒಂದು ಪರಿಹಾರ ಕೊಡುವುದಾದರೆ ಅದು ಸರಿಯಾದುದಲ್ಲ ಎಂದು ಅವರ ಹೇಳಿಕೆಗೆ ನಾನೂ ಕೂಡ ಧ್ವನಿಗೂಡಿಸಿ ಇದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇದು ಯಾರ ಪ್ರಯತ್ನವೂ ಇಲ್ಲದೆ ಸ್ವಯಂ ಪ್ರೇರಣೆಯಿಂದ ಆಗತಕ್ಕಂಥ ಕೆಲಸ. ಲಕ್ಷಾಂತರ ಜನ ರೈತರಿಗೆ ಇದು ವಿಳಂಬವಾದರೆ ಸಂಕಟವಾಗುತ್ತದೆ. ಅವರ ಮೂಲಕ ರೋಧನವನ್ನು ಯಾವ ಮಂತ್ರಿಗಳೂ, ಶಾಸಕರು ಯಾರೂ ಕೂಡ ಕೇಳುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ಮಾನ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ ಈ ಒಂದು ತಾರತಮ್ಯ ಏನಿದೆ ಅದನ್ನು ಮೊದಲು ಸರಿಪಡಿಸಬೇಕು. ಹಿಂದೆ ಏನು ಈ ಸದನದಲ್ಲಿ ಹಿಂದಿನ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಏನು ಒಪ್ಪಂದ ಆಗಿತ್ತು ಅದಕ್ಕೆ ಚ್ಯುತಿ ಬರದಂತೆ ಈ ಕಾಮಗಾರಿಗೆ ಹಣವನ್ನು ಈ ವರ್ಷ ಕನಿಷ್ಟಪಕ್ಷ ಮೂರು ಕೋಟಿಯಾದರೂ ಒದಗಿಸಿಕೊಡಬೇಕು. ಮುಂದಿನ ವರ್ಷ ಐದಾರು ಕೋಟಿ ಹೆಚ್ಚು ಹಣ ಒದಗಿಸಿ ಈ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಪೂರೈಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ತಮಗೆ ತಿಳಿಸುವುದೇನೆಂದರೆ ಹೇಮಾವತಿ ಯೋಜನೆಗೆ ಸಂಬಂಧಿಸಿದ ಹಾಗೆ ಸರ್ಕಾರದವರು ಕೊಟ್ಟಿರತಕ್ಕಂತಹ ಅಂಕಿ-ಅಂಶಗಳ ಪ್ರಕಾರ ಮಂಡ್ಯದಲ್ಲಿ ನಾಲ್ಕು ತಾಲೂಕುಗಳು ಕೃಷ್ಣರಾಜಪೇಟೆ, ಪಾಂಡವಪುರ. ಮಂಡ್ಯ ಮತ್ತು ನಾಗಮಂಗಲ ತಾಲೂಕಿನ ೧ ಲಕ್ಷ ೯೫ ಸಾವಿರ ಎಕರೆಗೆ ಸಂಪೂರ್ಣವಾಗಿ ನೀರಾವರಿಗೆ ಒಳಪಡಿಸಲು ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಅದಕ್ಕೆ ಅನುಗುಣವಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು, ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಕಾರಣ, ಕಳೆದ ನವೆಂಬರ್ ತಿಂಗಳಿನಲ್ಲಿ ನಡೆದಂತಹ ಮೈಸೂರು ವಿಭಾಗ ಮಂತ್ರಿಮಂಡಲ ಸಭೆಯಲ್ಲಿ ನೀವೆಲ್ಲರೂ ಒಪ್ಪುವುದಾದರೆ ಬೇರೆ ಕೆಲಸಗಳಿಗೆ ಕೊರತೆಯಾದರೂ ಕೂಡ ಈ ನೀರಾವರಿ ಕಾಮಗಾರಿಯನ್ನು-ಕಾವೇರಿ ಜಲಾಯನ ಪ್ರದೇಶಗಳ ಕಾಮಗಾರಿಯನ್ನು ೧೯೮೫ರೊಳಗೆ ಹೇಗಾದರೂ ಮಾಡಿ ಮುಗಿಸುವ ಸಂಕಲ್ಪ ಸರ್ಕಾರಕ್ಕಿದೆಯೆಂದು ಹೇಳಿದ್ದರು. ಅದರಂತೆ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಆಯುವ್ಯಯದಲ್ಲಿ ನಲ್ವತ್ತು ಕೋಟಿ ರೂಪಾಯಿಗಳನ್ನು ಯೋಜನೇತರ ವೆಚ್ಚದಿಂದ ಒದಗಿಸಿದ್ದಾರೆ. ಸನ್ಮಾನ್ಯ ಅರ್ಥಮಂತ್ರಿಗಳು ಇನ್ನೂ ಹತ್ತುಕೋಟಿ ರೂಪಾಯಿಗಳನ್ನು ಕಾವೇರಿ ಜಲಾಯನ ಪ್ರದೇಶಕ್ಕೆ ಕೊಡುತ್ತೇವೆ ಎಂದು ಕೂಡ ಹೇಳಿದರು. ಇದಕ್ಕಾಗಿ ಕೃತಜ್ಞತೆಗಳನ್ನು ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಆದರೆ, ಏನಾಗಿದೆ ಸ್ವಾಮಿ ? ಸರ್ಕಾರ ಹಣ

ಒದಗಿಸಿದೆ. ಆದರೆ ಕಾಮಗಾರಿಯ ಕೆಲಸದಲ್ಲಿ ವಿಳಂಬವಾಗಿದೆ, ನಾಲ್ಕು ತಿಂಗಳಾಯಿತು. ಈ ಅವಧಿಯಲ್ಲಿ ಸರ್ಕಾರ ಬೇಕಾದ ಹಣ ಕೊಡಬೇಕಾದರೆ, ಯೋಜನೆ ಕಾರ್ಯಗತವಾಗಲು ಬೇಕಾದ ಸಿಬ್ಬಂದಿ ವರ್ಗಕ್ಕೆ ಮಂಜೂರಾತಿ ಕೊಡಬೇಕಾದರೆ ಮೂರು ತಿಂಗಳೇ ಕಳೆಯಿತು. ಈ ಯೋಜನೆಗೆ ನಾಲ್ಕು ವಿಭಾಗಗಳನ್ನು ಮಾಡಿದ್ದರೂ ಯಾವ ಕ್ರಮಗಳನ್ನೂ ಕೈಗೊಂಡಿಲ್ಲ. ಜನರ ಅಭೀಷ್ಟೆ ಈಡೇರಬೇಕಾದರೆ ಹಣ ಖರ್ಚು ಮಾಡುವುದಕ್ಕೆ ಪ್ರತಿಯೊಂದು ತಿಂಗಳೂ ಕೂಡ ಲೆಕ್ಕಾಚಾರ ಪ್ರಕಾರ ಕಾರ್ಯಕ್ರಮ ತೆಗೆದುಕೊಂಡು ಹಣ ಖರ್ಚು ಮಾಡಬೇಕಾಗುತ್ತದೆ. ಇಲ್ಲದೆಹೋದರೆ ವರ್ಷದ ಕೊನೆಯಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ಹೊರಟರೆ ಇದು ಸಾಧ್ಯವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

೧೧–೦೦ ಎ. ಎಂ.

ಆದುದರಿಂದ ದಯಮಾಡಿ ಈ ಒಂದು ಹೊಸ ಪೋಸ್ಟ್‌ಗಳನ್ನು ಏನು ಕ್ರಿಯೇಟ್ ಮಾಡಿದ್ದಿರೋ ಪೋಸ್ಟ್‌ಗಳ ನೇಮಕಾತಿಯನ್ನು ಹೇಮಾವತಿ ಎಡದಂಡೆ ನಾಲೆಗೆ ಈ ಅಧಿವೇಶನ ಮುಗಿಯುವುದರೊಳಗಾಗಿ ಮಾಡಬೇಕು, ಆ ಒಂದು ಭರವಸೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಣ್ಣ ನೀರಾವರಿ ಬಗ್ಗೆ ನಮ್ಮ ಕಳೆದ ನಾಲ್ಕೈದು ವರ್ಷದ ಅನುಭವದಲ್ಲಿ ಹೇಳುವುದಾದರೆ, ಈ ಒಂದು ಮೈನರ್ ಇರಿಗೇಷನ್ ಏನಿದೆ ಇದು ತಬ್ಬಲಿ ಶಿಶುವಂತೆ ಇದೆ – ಎಂದು ನಾನು ಮನಸ್ಸು ಬಿಚ್ಚಿ ಹೇಳಬೇಕಾಗಿದೆ. ಇದಕ್ಕೆ ಕಾರಣ, ಈ ಒಂದು ಖಾತೆಯು ಹೊಣೆಗಾರಿಕೆಯನ್ನು ಹೊತ್ತಿರತಕ್ಕ ಸನ್ಮಾನ್ಯ ಮಂತ್ರಿಗಳಾದ ಸದ್ಯೋಜಾತಪ್ಪನವರನ್ನು ನನ್ನ ದೃಷ್ಟಿಯಲ್ಲಿ ನಾನು ಅವರನ್ನು ದೇವರಿಗೆ ಹೋಲಿಸುತ್ತೇನೆ, ಅವರು ಬಹಳ ದೊಡ್ಡ ಮನುಷ್ಯರು ಆದರೆ ಅವರು ಹೋರಾಟ ಮಾಡಿ, ಹಣವನ್ನು ಪಡೆದು, ಇವತ್ತು ಸಣ್ಣ ನೀರಾವರಿ ಕಾಮಗಾರಿಗಳು ಪ್ರಗತಿಯಲ್ಲಿ ಕೆಲಸ ಮಾಡುವುದರಲ್ಲಿ ಅವರು ವಿಫಲರಾಗಿದ್ದಾರೆ ಎಂದು ನಾನು ಹೇಳುವುದಿಲ್ಲ, ಸಫಲರಾಗಿಲ್ಲ ಎಂದು ನೊಂದಮನಸ್ಸಿನಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ನಾನು ಅಂಕಿಅಂಶಗಳ ಸಮೇತ ಉದಾಹರಣೆ ಕೊಡುತ್ತೇನೆ. ಕಳೆದ ಮೂರು ವರ್ಷಗಳಿಂದ ಅಂದರೆ ೧೯೮೦–೮೧, ೧೯೮೧–೮೨, ಮತ್ತು ೧೯೮೨–೮೩ ರಿಂದ ಕೆಲವು ಕಾಮಗಾರಿಗಳನ್ನು 'ಸಿ' ಲಿಸ್ಟ್‌ನಲ್ಲಿ ಸೇರಿಸಿಕೊಂಡು ಬಂದಿದ್ದಾರೆ. ನಾವು ಈ ಸದನದಲ್ಲಿ ಮಂಜೂರಾತಿ ಕೊಟ್ಟಿದ್ದೇವೆ ಒಪ್ಪಿಗೆ ಕೊಟ್ಟಿದ್ದೇ. ಆದರೆ 'ಸಿ' ಲಿಸ್ಟ್‌ನಲ್ಲಿರತಕ್ಕ ಕೆಲಸಗಳನ್ನು ನಾವು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಹೋದರೆ ಅವರೂ ಹಾಗೇ ಹೇಳುತ್ತಾರೆ, ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಅವರೂ ಕೂಡ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ನಾನೂ ಅವರಿಗೆ ಹೇಳಿದೆ, ಇದು ನಾಳೆ ಪ್ರಿವಿಲೇಜ್ ಆಗುತ್ತದೆ, ನಾವು ಸದನದಲ್ಲಿ ಓಟ್ ಮಾಡಿದ್ದೇವೆ. ನೀವು ತೆಗೆದುಕೊಳ್ಳದೇ ಹೋದರೆ ನಾಳೆ ನಿಮ್ಮ ಮೇಲೆ ಪ್ರಿವಿಲೇಜ್ ಮೂವ್ ಮಾಡಬೇಕಾಗುತ್ತದೆ, ಏಕೆ ತೆಗೆದುಕೊಳ್ಳುವುದಿಲ್ಲ ಎಂದು ಕೇಳಿದರೆ, ನಮಗೆ ಇದು ಇನ್‌ಸ್ಟ್ರಕ್ಷನ್ ಎಂದು ಹೇಳುತ್ತಾರೆ. ಹತ್ತಾರು ಬಾರಿ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೂ ಕೂಡ ಇದನ್ನು ತಂದಿದ್ದೇವೆ. ಇವತ್ತಿನದಿವಸ ನಾವು ಈ ಸದನದಲ್ಲಿ ಬಂದು ಕುಳಿತು ಕೆಲಸಮಾಡಬೇಕಾದರೆ ನಾವು ಜನಗಳಿಗೆ ಹೇಳಿರುತ್ತೇವೆ ಏಕೆಂದರೆ, ಈ ಕಾಮಗಾರಿಗಳು ಇಂದಿನದಲ್ಲ, ಹತ್ತಾರು ವರ್ಷಗಳಿಂದ ಜನರ ಬೇಡಿಕೆ ಇದೆ. ತಮಗೂ ಕೂಡ ಗೊತ್ತಿದೆ. ತಮ್ಮ ಕ್ಷೇತ್ರದಲ್ಲೂ ಕೂಡ ಈ ಒಂದು ಸಂದರ್ಭವಿದೆ. ಈ ಕಾಮಗಾರಿಗಳು ಬಡ್ಜೆಟ್‌ನಲ್ಲಿ ಸೇರಿವೆ. ನಾವೂ ಕೂಡ ಸದನದಲ್ಲಿ ಓಟ್ ಮಾಡಿದ್ದೇವೆ, ಇನ್ನು ೩ ತಿಂಗಳು, ೬ ತಿಂಗಳಲ್ಲಿ ಕೆಲಸ ಆಗುತ್ತದೆ ಎಂದು ಭರವಸೆ ಕೊಟ್ಟಿರುತ್ತೇವೆ. ಕಳೆದ ಮೂರು ವರ್ಷಗಳಿಂದ ಏಕಪ್ರಕಾರವಾಗಿ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಸೇರಿದ್ದರೂ ಕೂಡ 'ಸಿ' ಲಿಸ್ಟ್‌ನಲ್ಲಿರತಕ್ಕ ಕೆಲಸಗಳನ್ನು ನಾವು ತೆಗೆದುಕೊಳ್ಳುವುದಿಲ್ಲ ಎಂದು ಹೇಳುವುದಾದರೆ ಬಹುಶಃ ಇದಕ್ಕಿಂತ ಅನ್ಯಾಯ ಮತ್ತೊಂದು ಇಲ್ಲ ಎಂಬ ಮಾತನ್ನು ಬಹಳ ಸಂಕಟದಿಂದ ನಿವೇದನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಈ ಒಂದು ಅನಾಥ ಶಿಶು ಏನಿದೆಯೋ ಇದನ್ನು ದಷ್ಟಪುಷ್ಟವಾಗಿ ಮಾಡಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳು ಅವರ ಸಹಾಯಕ್ಕೆ ಬರಬೇಕು. 'ಸಿ' ಲಿಸ್ಟ್‌ನಲ್ಲಿರತಕ್ಕ ಕೆಲಸಗಳು ಏನಾಗಿದೆಯೆಂದರೆ, ವರ್ಲ್ಡ್ ಬ್ಯಾಂಕ್ ಪ್ರೋಗ್ರಾಮಿನಲ್ಲಿ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ. ಒಂದು ಸಾರಿ ಮಾನ್ಯ ಅರ್ಥ ಮಂತ್ರಿಗಳು ಹೇಳಿದರು. ಏನೆಂದರೆ, ಎಲ್ಲಿ ಸಣ್ಣ ನೀರಾವರಿಯಲ್ಲಿ ವರ್ಲ್ಡ್

ಬ್ಯಾಂಕಿನ ಕಾಮಗಾರಿಗಳು ಇಲ್ಲವೋ ಅಂಥಾ ತಾಲ್ಲೂಕುಗಳಲ್ಲಿ, ಅಂಥಾ ವಿಧಾನಸಭಾ ಕ್ಷೇತ್ರಗಳಲ್ಲಿ ನಾವು ೨-೩ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡುತ್ತೇವೆ, ಅದಕ್ಕೆ ಅವಕಾಶ ಮಾಡುತ್ತೇನೆ ಎಂದು ಕಳೆದ ಅಧಿವೇಶನದಲ್ಲಿ ಕೂಡ ಹೇಳಿದರು. ಅದು ಒಂದಿಷ್ಟೂ ಕೂಡ ಕಾರ್ಯಗತವಾಗಿಲ್ಲ. ಈಗ ನಮ್ಮ ಮುಂದಿರತಕ್ಕಂಥಾದ್ದು ಕೇವಲ ೫-೬ ತಿಂಗಳು. ಆದುದರಿಂದ ದಯಮಾಡಿ, ತಾವು ಉತ್ತರ ಕೊಡತಕ್ಕ ಕಾಲದಲ್ಲಿ, ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಈ ಒಂದು ಸಣ್ಣ ನೀರಾವರಿ ಕಾಮಗಾರಿಗಳ ವಿಷಯದಲ್ಲಿ ಏನು 'ಸಿ' ಲಿಸ್ಟ್‌ನಲ್ಲಿ ಕೆಲಸಗಳಿವೆಯೋ ಮತ್ತು ಕಳೆದ ೨-೩ ವರ್ಷಗಳಿಂದ ಬಡ್ಜೆಟ್‌ನಲ್ಲಿ ಸೇರಿಕೊಂಡಿವೆಯೋ ಆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ತಾವು ಭರವಸೆಯನ್ನು ಕೊಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಪೋಲೀಸ್ ಮತ್ತು ಫೈರ್ ಸರ್ವೀಸಸ್ ಬಗ್ಗೆ ಹೇಳುವುದಾದರೆ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ೧೯ ಜಿಲ್ಲೆಗಳಲ್ಲಿ ಕೇವಲ ೩ ಜಿಲ್ಲೆಗಳಲ್ಲಿ ಫೈರ್ ಸರ್ವೀಸಸ್ ಸ್ಟೇಷನ್‌ಗಳು ಇರಲಿಲ್ಲ. ಅದರಲ್ಲಿ ಮಂಡ್ಯ ಜಿಲ್ಲೆಯೂ ಕೂಡ ಒಂದು. ಕೇವಲ ೧೫ ದಿವಸಗಳಲ್ಲಿ ನಾನು ಮತ್ತು ನನ್ನ ಮಿತ್ರರಾದಂಥ ಆತ್ಮಾನಂದ ಅವರು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಕೊಟ್ಟಾಗ ಕೂಡಲೇ ಅದಕ್ಕೆ ಮಂಜೂರಾತಿಯನ್ನು ಕೊಟ್ಟರು, ಅದು ಪತ್ರಿಕೆಗಳಲ್ಲೂ ಕೂಡ ಬಂತು. ಆದುದರಿಂದ ಈ ಸಂದರ್ಭದಲ್ಲಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಮತ್ತು ೫-೬ ಎಕರೆ ಜಮೀನು ಕೊಟ್ಟಿದೆ, ಕೂಡಲೇ ಕೆಲಸವನ್ನು ಪ್ರಾರಂಭ ಮಾಡುವಂತೆ ಆದೇಶ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕೆ ಇಷ್ಟಪಡುತ್ತೇನೆ. ಇನ್ನೂ ಪೋಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ ಪೋಲೀಸ್ ಇಲಾಖೆ ಇರುವಂಥಾದ್ದು ಸಾರ್ವಜನಿಕರ ರಕ್ಷಣೆಗೋಸ್ಕರ. ಈ ಪೋಲೀಸ್ ಇಲಾಖೆ ಸಮರ್ಪಕವಾಗಿ ಕೆಲಸ ಮಾಡಬೇಕಾದರೆ, ಸಮಾಜದ ನೆರವಿಗೆ ಬರಬೇಕಾದರೆ, ಸಾರ್ವಜನಿಕರ ಹಾಗೂ ಈ ಇಲಾಖೆಯ ಮಧ್ಯ ಒಂದು ಸಹಕಾರ ಮತ್ತು ಸಮನ್ವಯ ಅಗತ್ಯ. ಇದರಲ್ಲಿ ನಾವು ಹೆಚ್ಚು, ತಾವು ಹೆಚ್ಚು ಎನ್ನತಕ್ಕ ಪ್ರಶ್ನೆ ಇಲ್ಲ. ಈ ಸಹಕಾರ ಮತ್ತು ಸಮನ್ವಯ ಎನ್ನತಕ್ಕ ಮಾತು ಬಂದಾಗ ಇದು ಒಂದು ಗೀವ್ ಅಂಡ್ ಟೇಕ್ ಪಾಲಿಸಿ ಇದ್ದ ಹಾಗೆ. ಇಲ್ಲದೇ ಹೋದರೆ, ನಾವು ಬೆಳಿಗ್ಗೆ ಎದ್ದ ಕೂಡಲೇ ಪೋಲೀಸರಿಗೆ ಬೈಯತಕ್ಕಂಥಾದ್ದು ಅಥವಾ ಪೋಲೀಸರು ಬೆಳಿಗ್ಗೆ ಎದ್ದ ಕೂಡಲೇ ಜನಗಳನ್ನು ನಿಂದಿಸತಕ್ಕಂಥಾದ್ದು, ತೊಂದರೆ ಕೊಡತಕ್ಕಂಥಾದ್ದು, ಇವೆಲ್ಲವೂ ಕೂಡ ಸರಿಯಾದ್ದಲ್ಲ. ಆದ್ದರಿಂದ ಇವರಲ್ಲಿ ಸಹಕಾರ ಮತ್ತು ಸಮನ್ವಯ ಅತ್ಯಗತ್ಯ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಕಳೆದ ೨೫-೩೦ ವರ್ಷಗಳ ಅನುಭವವನ್ನು ಹೇಳುವುದಾದರೆ, ಇವತ್ತೂ ಕೂಡ ನಡೆಯುತ್ತಾ ಇರತಕ್ಕಂಥಾದ್ದನ್ನು ಹೇಳುವುದಾದರೆ, ಬೇರೆಡೆ ನಮಗೆ ಗೊತ್ತಿಲ್ಲ, ನಮ್ಮ ಮಂಡ್ಯವನ್ನೇ ತೆಗೆದುಕೊಳ್ಳುವುದಾದರೆ ಮಂಡ್ಯದಲ್ಲಿ ನಮಗೆ ಕಿತ್ತಾಟ ಕಚ್ಚಾಟ ಇಲ್ಲ. ಆದರೆ ಒಂದು ಮಾತನ್ನು ಹೇಳುವುದಾದರೆ, ಇವತ್ತು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಆಫೀಸ್ ಅಥವಾ ಪೋಲೀಸ್ ಸ್ಟೇಷನ್‌ನಲ್ಲಿ ಯಾವ ರೀತಿ ಕೆಲಸ ನಡೆಯುತ್ತಾ ಇದೆ ಎಂದರೆ, ಯಾರಾದರೂ ಒಂದು ಕಂಪ್ಲೈಂಟ್ ಮಾಡಿದರೆ ಅವನನ್ನು ಕರೆಸುವುದು ಮತ್ತು ಎದುರು ಪಕ್ಷದವರನ್ನು ಕರೆಸುವುದು, ಇಬ್ಬರನ್ನೂ ೪-೫ ದಿವಸ ತಿರುಗಿಸುತ್ತಾ ಇರತಕ್ಕಂಥಾದ್ದು, ವಸೂಲಿ ಬಾಜಿ ಕೆಲಸ ಎಂದು ಹೇಳುತ್ತಾರೆ, ಆ ರೀತಿ ವಸೂಲಿ ಬಾಜಿ ಕೆಲಸ ನಡೆಯುತ್ತಾ ಇದೆ, ಕೊಟ್ಟವರು ಅಥವಾ ತೆಗೆದುಕೊಳ್ಳುವವರು ನಮಗೆ ಏನೂ ಹೇಳುವುದಿಲ್ಲ. ಹಲವಾರು ವರ್ಷಗಳ ಹಿಂದೆ, ನಾನು ಸಣ್ಣ ಹುಡುಗನಾಗಿದ್ದಾಗ ಪೋಲೀಸರು ನೈಟ್ ಬೀಟ್ ಬರುತ್ತಿದ್ದರು, ಹಳ್ಳಿಗಳಿಗೆ ರಾತ್ರಿ ೧೨-೧ ಗಂಟೆಯಲ್ಲಿ ಬಂದು ಊರು ಸುತ್ತ ಗಸ್ತು ಹಾಕಿ ಹೋಗುತ್ತಿದ್ದರು. ಆ ಒಂದು ಭೀತಿ ಇರುತ್ತಿತ್ತು. ಯಾರಾದರೂ ಕಳ್ಳತನ ಮಾಡತಕ್ಕವರಿಗೆ ಆ ಒಂದು ಭೀತಿ ಇರುತ್ತಿತ್ತು. ಇವತ್ತಿನ ದಿವಸ ರಾತ್ರಿ ವೇಳೆ ಗಸ್ತು ತಿರುಗುವುದಕ್ಕೆ ಯಾರೂ ಕೂಡಾ ಬರುತ್ತಾ ಇಲ್ಲ, ಯಾವ ಒಬ ಪೋಲೀಸ್ ಪೇದೆ ಕೂಡ ಬರುತ್ತಾ ಇಲ್ಲ. ಮಂಡ್ಯದಲ್ಲಿ ಹೊಳಲು ಸರ್ಕಲ್ ಇದೆ. ಆ ಸರ್ಕಲ್‌ನಲ್ಲಿ ಬಂದು ಹಳ್ಳಿಯವರ ಹತ್ತಿರ ರುಜು ತೆಗೆದುಕೊಂಡು ನಾನು ಅಲ್ಲಿ ಹೋಗಿದ್ದೆ ಎಂದು ಹೇಳುತ್ತಾರೆ. ಇದು ನಿಮ್ಮ ಇಲಾಖೆಯ ಕೆಲಸ. ಇದನ್ನು ಸದನದಲ್ಲಿ ಹೇಳತಕ್ಕಂಥಾದ್ದು ಅಲ್ಲ, ಇದನ್ನು ಅನೇಕ ಬಾರಿ ಸಂಬಂಧಪಟ್ಟ ಎಸ್.ಪಿ.ಯವರಿಗೆ, ಡಿ.ಎಸ್.ಪಿ.ಯವರಿಗೆ ಹೇಳಿದ್ದೇನೆ. ಸಬ್-ಇನ್ ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ಸ್ ಮೀಟಿಂಗ್ ಕರೆದು ಈ ಒಂದು ವಿಷಯವನ್ನು ಹೇಳಿದ್ದೇನೆ. ಇದರ ಬಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಇದೂ ಅಲ್ಲದೆ, ಹಳ್ಳಿಗಳಲ್ಲಿ ಕದ್ದು ಇಸ್ಪೀಟ್ ಆಡತಕ್ಕಂಥಾದ್ದು ಮಟಕಾ

ಆಡತಕ್ಕಂಥಾದ್ದು ಲೈಸನ್ಸ್ ಇಲ್ಲದೇ ಹೋದರೂ ಕೂಡ ಅರಕ್ ಷಾಪ್ ಓಪನ್ ಮಾಡತಕ್ಕಂಥಾದ್ದು, ಶೇಂದಿ ಅಂಗಡಿಗಳನ್ನು ಓಪನ್ ಮಾಡತಕ್ಕಂಥಾದ್ದು, ಕಳ್ಳತನ ಮಾಡತಕ್ಕಂಥಾದ್ದು ನಡೆಯುತ್ತಿದೆ. ನಿನ್ನೆ ನಮ್ಮ ಸ್ನೇಹಿತರು ಹೇಳುತ್ತಿದ್ದರು. ಏನೆಂದರೆ, ತೆಂಗಿನ ಮರ ಹತ್ತಿ ಕಾಯಿಗಳನ್ನು ಕೀಳುತ್ತಿದ್ದರು ಎಂದು, ಈ ರೀತಿ ಬೇಕಾದಷ್ಟು ಕಳ್ಳತನಗಳು ಆಗುತ್ತಿವೆ. ಆದುದರಿಂದ ಪೋಲೀಸ್ ಸಿಬ್ಬಂದಿ ಜಾಸ್ತಿ ಮಾಡಬೇಕಾಗಿದೆ. ಇವತ್ತಿನ ದಿವಸ ಪೋಲೀಸ್ ಸಿಬ್ಬಂದಿ ಇರುವಂಥಾದ್ದು ಬಹಳ ಕಡಿಮೆ. ಮಂಡ್ಯ ನಗರ ಒಂದು ಲಕ್ಷ ಜನಸಂಖ್ಯೆಯನ್ನು ಮೀರಿದ್ದರೂ ಕೂಡ ಎರಡು ಪೋಲೀಸ್ ಸ್ಟೇಷನ್‌ಗಳಿವೆ, ಅದೂ ಕೂಡ ರೂರಲ್ ಏರಿಯಾ ಪೋಲೀಸ್ ಸ್ಟೇಷನ್ ಸೇರಿ ಎರಡು ಪೋಲೀಸ್ ಸ್ಟೇಷನ್‌ಗಳಿವೆ. ಈಗ ಮಂಡ್ಯ ನಗರ ಮತ್ತು ಮಂಡ್ಯ ರೂರಲ್ ಪ್ರದೇಶ ಏನಿದೆ ಅದನ್ನು ಪ್ರತ್ಯೇಕ ಮಾಡತಕ್ಕಂಥಾದ್ದು ಬಹಳ ಅತ್ಯಗತ್ಯ. ಮತ್ತು ಮಂಡ್ಯ ಸಿಟಿಯಲ್ಲಿ ಸರಿಯಾಗಿ ಟ್ರಾಫಿಕ್ ಕಂಟ್ರೋಲ್ ವ್ಯವಸ್ಥೆಯಾಗಿಲ್ಲ. ಆದುದರಿಂದ ಪ್ರತ್ಯೇಕವಾದಂಥ ಒಂದು ವ್ಯವಸ್ಥೆಯನ್ನು ಟ್ರಾಫಿಕ್ ಕಂಟ್ರೋಲ್‌ಗೆ ಮಾಡತಕ್ಕಂಥಾದ್ದು ಅತ್ಯಗತ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ ನವೆಂಬರ್ ತಿಂಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದಿದ್ದ ಕಾಲದಲ್ಲಿ ಬಿನ್ನವತ್ತಳೆ ಕೊಟ್ಟೆವು. ಕೆರೆಗೋಡು ಎಂಬತಕ್ಕಂಥಾದ್ದು ನನ್ನ ಕ್ಷೇತ್ರದ ಕೇಂದ್ರ ಸ್ಥಳ. ಅಲ್ಲಿ ಟೌನ್ ಪಂಚಾಯಿತಿ ಇದೆ ; ಹೋಬಳಿ ಕೇಂದ್ರ. ಅಲ್ಲಿ ಸಾರ್ವಜನಿಕರು ಮಾನ್ಯ ಮುಖ್ಯ ಮಂತ್ರಿಗಳಿಗೆ ಬಿನ್ನವತ್ತಳೆ ಕೊಟ್ಟಂಥ ಕಾಲದಲ್ಲಿ ಆ ಊರಿಗೆ ಒಂದು ಪೋಲೀಸ್ ಸ್ಟೇಷನ್ ಕೊಡಬೇಕು ಎಂದು ಮನವಿ ಮಾಡಿದರು ಸನ್ಮಾನ್ಯ ಮುಖ್ಯ ಮಂತ್ರಿಗಳು ಉದಾರ ಮನಸ್ಸಿನಿಂದ ಕೂಡಲೇ ಅದನ್ನು ಮಂಜೂರು ಮಾಡುತ್ತೇವೆ ಎಂದು ಹೇಳಿದರು. ಅಂದು ಜನ ಬಹಳ ಸಂತೋಷವನ್ನು ವ್ಯಕ್ತಪಡಿಸಿದರು. ಅವರು ಜನವರಿ ತಿಂಗಳಲ್ಲಿ ಫೈಲ್ ಕಾಲ್‌ಫಾರು ಮಾಡಿದರು, ನಾನು ಮನವಿ ಕೊಟ್ಟಂಥ ಕಾಲದಲ್ಲಿ ಫೈಲ್ ಕಾಲ್‌ಫಾರ್ ಮಾಡಿದರೆ ಅವರ ಹತ್ತಿರ ಫೈಲ್ ಹೋಗಿಲ್ಲ, ಹಿಂದೆ ಮುಂದೆ ಜಗ್ಗಾಡುತ್ತಾ ಇದೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಚೌಡಯ್ಯನವರ ಕ್ಷೇತ್ರದವರೆಲ್ಲಾ ಒಳ್ಳೆಯವರು ಎಂದು.

ಶ್ರೀ ಹೆಚ್. ಡಿ. ಚೌಡಯ್ಯ.—ಅದು ಹಿಂದೆ ಮುಂದೆ ಜಗ್ಗಾಡುತ್ತಾ ಇದೆ. ಇದು ಮಂಡ್ಯಕ್ಕೆ ೧೧–೧೨ ಮೈಲಿ ಆಗುತ್ತದೆ. ಅದು ವಿಧಾನಸಭಾ ಕ್ಷೇತ್ರದ ಒಂದು ಕೇಂದ್ರ ಸ್ಥಳ, ಹೋಬಳಿ ಕೇಂದ್ರ ಮತ್ತು ಟೌನ್ ಪಂಚಾಯಿತಿ ಕೇಂದ್ರವಾಗಿದೆ. ಅದು ಹಿಂದೆ ಒಂದಾನೊಂದು ಕಾಲದಲ್ಲಿ ಕೆರೆಗೋಡು ಮಹನಾಡು ಎಂದು ಇತ್ತು. ಆದುದರಿಂದ ಅಲ್ಲಿ ಅತಿ ಅವಶ್ಯವಾಗಿ ಪೋಲೀಸ್ ಸ್ಟೇಷನ್ ಕೊಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ದಯಮಾಡಿ ತಮ್ಮ ಉತ್ತರದಲ್ಲಿ ಭರವಸೆಯನ್ನು ಕೊಡಬೇಕು ಎಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ಜಿಲ್ಲಾಡಳಿತವನ್ನು ತೆಗೆದುಕೊಳ್ಳುವುದಾದರೆ ನನಗೆ ಕಳೆದ ೨೫–೩೦ ವರ್ಷಗಳಿಂದ ಈ ಬಗ್ಗೆ ನನಗೆ ಅನುಭವ ಇದೆ. ನಾನು ೮ ವರ್ಷಗಳ ಕಾಲ ಜಿಲ್ಲಾ ಬೋರ್ಡ್ ಮತ್ತು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈಗ ಶಾಸಕನಾಗಿದ್ದೇನೆ. ಇದನ್ನು ಅನೇಕ ಸಾರಿ ಜಿಲ್ಲಾಭಿವೃದ್ಧಿ ಸಮಿತಿಯ ಸಭೆಗಳಲ್ಲಿ ಮತ್ತು ಇತ್ತೀಚೆಗೆ ಜಿಲ್ಲಾ ಮಟ್ಟದ ೨೦ ಅಂಶಗಳ ಕಾರ್ಯಕ್ರಮದ ಸಭೆಗಳಲ್ಲಿ ಜಿಲ್ಲಾಧಿಕಾರಿಗಳ ಹಾಗೂ ವಿವಿಧ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ದುರಾದೃಷ್ಟವಶಾತ್ ಏನಾಗಿದೆ ಎಂದರೆ ಜಿಲ್ಲಾ ಮಟ್ಟದಲ್ಲಿರತಕ್ಕ ಯಾವುದೇ ಇಲಾಖೆಯ ಅಧಿಕಾರಿಗಳಾಗಲಿ ತಿಂಗಳಲ್ಲಿ ೨೦ ದಿವಸ ಪ್ರವಾಸದಲ್ಲಿರುತ್ತಾರೆ. ಯಾರು ಎಂದು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಶಾಸಕರಾದ ನಾವು ನಮ್ಮ ಕ್ಷೇತ್ರಗಳಲ್ಲಿದಾಗ ತಮ್ಮ ಕೆಲಸಕಾರ್ಯಗಳ ನಿಮಿತ್ತ ಜನರು ನಮ್ಮ ಕಡೆ ತಂಡೋಪತಂಡವಾಗಿ ಬರುತ್ತಾರೆ. ಯಾವುದಾದರೂ ಒಂದು ಕೆಲಸದ ಸಲುವಾಗಿ ಇಲಾಖೆಯ ಅಧಿಕಾರಿಗಳು ಇದ್ದಾರೆಯೇ ಎಂದು ಫೋನ್ ಮಾಡಿ ಕೇಳಿದಾಗ ಟೂರ್ ಹೋಗಿದ್ದಾರೆಂದು ಹೇಳುತ್ತಾರೆ. ಸಾಮಾನ್ಯವಾಗಿ, ಮುಖ್ಯಾಧಿಕಾರಿಗಳ ನಂತರದ ಅಧಿಕಾರಿಗಳು ಎಂದರೆ ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್ ಮತ್ತಿತರ ಬೇರೆ ಬೇರೆ ಅಧಿಕಾರಿಗಳು ಇರುತ್ತಾರೆ. ಅವರಾದರೂ ಇದ್ದಾರೆಯೇ ಎಂದು ಕೇಳಿದರೆ, ಇಲ್ಲ ಈಗತಾನೇ ಹೊರಗಡೆ ಹೋದರು ಎನ್ನುತ್ತಾರೆ. ನಾವು ಕೇಳಿದಾಗ ವೇಳೆ ೧೨$\frac{1}{4}$ ಗಂಟೆಯಾಗಿರುತ್ತದೆ. ೧$\frac{1}{4}$ ಗಂಟೆಯಾದರೂ ಆಗಿದ್ದರೆ, ಸ್ವಲ್ಪ ಹೆಚ್ಚು ಕಡಿಮೆ ಊಟದ ವೇಳೆ ಯಾಗಿರುವುದರಿಂದ ಊಟಕ್ಕೆ ಹೋಗಿದ್ದಾರೆ ಅಂದುಕೊಳ್ಳಬಹುದು. ೧೧–೧೨ ಗಂಟೆಯಲ್ಲಿ ಅಧಿಕಾರಿಗಳನ್ನು ಕೇಳಿದಾಗ ಅಧಿಕಾರಿಗಳು ಇಲ್ಲವುದಿಲ್ಲ ವೆಂಬುದು ನಮಗೆ ಪ್ರತಿನಿತ್ಯದ ಅನುಭವವಾಗಿದೆ. ಇದನ್ನು ೨೦ ಅಂಶದ ಕಾರ್ಯಕ್ರಮದ ಮೀಟಿಂಗ್‌ನಲ್ಲಿ

ಗಲಾಟೆ ಮಾಡಿ ಜಿಲ್ಲಾಧಿಕಾರಿಗಳ ಗಮನಕ್ಕೆ ಮಂತ್ರಿಗಳ ಸಮ್ಮುಖದಲ್ಲಿ ತಂದಾಗ ಒಂದು ಸ್ಪೆಷಲ್ ಸ್ಕ್ವಾಡ್ ಎಂದು ಮಾಡಿದರು. ಆದರೆ ಜಿಲ್ಲೆಯ ಹಿರಿಯ ಅಧಿಕಾರಿಗಳ ಕಮಿಟಿ ಮಾಡಿ ಅವರು ಯಾವ ಕಛೇರಿಗೆ ಬೇಕಾದರೂ ಅನಿರೀಕ್ಷಿತ ಭೇಟಿ ನೀಡಿ ಪರೀಕ್ಷಿಸಬಹುದು ಎಂದು. ಅವರು ಒಂದೆರಡು ದಿವಸ ಆ ರೀತಿ ಹೋದರು ಎಂದು ಕಾಣುತ್ತದೆ. ಈಗ ಅದರ ಸದ್ದು ಇಲ್ಲ. ಯಾವುದೇ ಒಂದು ಇಲಾಖೆಯ ಅಧಿಕಾರಿಗಳನ್ನು ತೆಗೆದುಕೊಂಡರೂ ಅವರು ಜಿಲ್ಲಾ ಮಟ್ಟದಲ್ಲಾಗಲೀ ಅಥವಾ ತಾಲ್ಲೂಕು ಮಟ್ಟದಲ್ಲಾಗಲೀ ಸರಿಯಾಗಿ ಕಛೇರಿಯಲ್ಲಿದ್ದು ಕೊಂಡು ಕೆಲಸ ಮಾಡಲು ನಿಜವಾಗಿ ಹೊರತಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ಲಘುವಾಗಿ ಕಾಣಬಹುದು. ಸರ್ಕಾರೀ ಕಛೇರಿಗಳು ಇರುವ ಕಟ್ಟಡಗಳು ಸರ್ಕಾರದ ಆಸ್ತಿ. ಇದನ್ನೆಲ್ಲ ಜಿಲ್ಲಾಧಿಕಾರಿಗಳಿಗೆ ಹೇಳುತ್ತಿದ್ದೇನೆ. ಉದಾಹರಣೆಗೆ, ಮಂಡ್ಯ ಜಿಲ್ಲಾ ಕಛೇರಿಯನ್ನು ನೋಡಿ. ಅಲ್ಲಿ ಕಸಗುಡಿಸಿ ಎಷ್ಟೋ ದಿನಗಳು ಆಗಿರುವ ಹಾಗೆ ಇದೆ. ನಿಮ್ಮ ಮನೆಯಾಗಲಿ ಅಥವಾ ನಮ್ಮ ಮನೆಯಾಗಲಿ ಆ ರೀತಿ ಇದ್ದರೆ ಮನೆಯ ಹೆಂಗಸರನ್ನು ಸುಮ್ಮನೆ ಬಿಡುತ್ತೇವೆಯೇ? ನೀವು ಜಿಲ್ಲಾಧಿಕಾರಿಗಳಾಗಿ, ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಿ, ಜಿಲ್ಲಾ ವೈದ್ಯಾಧಿಕಾರಿಗಳಾಗಿ, ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಆಗಿ ಬೇರೆ ಬೇರೆ ಕಛೇರಿಗಳಲ್ಲಿ ಇದನ್ನು ನೋಡತಕ್ಕದ್ದು ನಿಮ್ಮ ಕರ್ತವ್ಯವಲ್ಲವೆ? ಮೂರು ವರ್ಷಕ್ಕೋ ಐದು ವರ್ಷಕ್ಕೋ ವೈಟ್ ವಾಷ್ ಮಾಡತಕ್ಕ ಕಾಲದಲ್ಲಿ ಕಂಟ್ರಾಕ್ಟರ್ ಕ್ಲೀನ್ ಮಾಡಿಸುತ್ತಾನೆಂದು ಬಿಟ್ಟರೆ ಆಗುತ್ತದೆಯೆ? ಅದನ್ನೆಲ್ಲ ನೋಡಿ ಮಾಡಿಸತಕ್ಕದ್ದು ನಿಮ್ಮ ಜವಾಬ್ದಾರಿಯಲ್ಲವೆ? ಇದನ್ನೆಲ್ಲ ನೋಡಿದರೆ ಸರ್ಕಾರಿ ಆಸ್ತಿ, ಸರ್ಕಾರಿ ಕೆಲಸ, ಸಾರ್ವಜನಿಕರ ಕೆಲಸದ ಬಗ್ಗೆ ಅಧಿಕಾರಿಗಳಿಗೆ ಎಷ್ಟರ ಮಟ್ಟಿಗೆ ನಿಗ ಇದೆ ಎಂಬುದನ್ನು ಎತ್ತಿ ತೋರಿಸುತ್ತದೆಂಬ ವಿಷಯವನ್ನು ಬಹಳ ನೋವಿನಿಂದ ಹೇಳುತ್ತೇನೆ. ಮಂಡ್ಯದಲ್ಲಿ ಒಂದು ತಹಶೀಲ್ದಾರರ ಕಛೇರಿ ಇದೆ. ಅದಕ್ಕೆ ೧೫೦ ವರ್ಷವಾಗಿದೆ. ಬರುಬರುತ್ತಾ ಸುತ್ತೆಲ್ಲ ಷಾಪಿಂಗ್ ಕಾಂಪ್ಲೆಕ್ಸ್ ಆಗಿದೆ. ರೈತರು ಕಛೇರಿಗೆ ಹೋಗುವುದಕ್ಕೆ—ಬರುವುದಕ್ಕೆ ಬಹಳ ತೊಂದರೆಯಾಗಿದೆ. ಇದನ್ನು ನಾನು ಬಹಳ ವರ್ಷಗಳಿಂದ ಹೇಳುತ್ತಿದ್ದೇನೆ. ಜಿಲ್ಲಾಧಿಕಾರಿಗಳ ಕಛೇರಿ ಇರುವ ಕಡೆ ತಾಲ್ಲೂಕು ಕಛೇರಿಯನ್ನು ಸ್ಥಳಾಂತರಿಸಬೇಕೆಂದು ಕೇಳುತ್ತಿದ್ದೇನೆ ಅದು ಇದವರೆಗೆ ಕಾರ್ಯಗತವಾಗಿಲ್ಲ. ಅದನ್ನು ಜಾಗ್ರತೆ ಕಾರ್ಯಗತ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕನ್ನಡದ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ಕನ್ನಡ ಏಕೈಕ ಪ್ರಥಮ ಭಾಷೆಯಾಗಬೇಕೆಂದು ೨–೩ ತಿಂಗಳುಗಳ ಕಾಲ ಚಳುವಳಿ ನಡೆದರೂ ಮುಖ್ಯ ಮಂತ್ರಿಗಳ ಒಂದು ಸಮಯಾವರಿತ ಬುದ್ಧಿವಂತಿಕೆಯಿಂದ ಮತ್ತು ವಿಶಾಲವಾದ ಮನಸ್ಸಿನಿಂದ ಆ ಒಂದು ಸಮಸ್ಯೆ ಬಗೆಹರಿಯುವುದಕ್ಕೆ ಸಾಧ್ಯವಾಯಿತು, ಸಂತೋಷ. ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ, ಅಧಿಕಾರಿಗಳಾಗಲಿ, ಸಾರ್ವಜನಿಕರಾಗಲಿ, ಜನತಾ ಪ್ರತಿನಿಧಿಗಳಾಗಲಿ ಕನ್ನಡ ನಮ್ಮ ಮಾತೆ, ಅದನ್ನು ನಾವು ಬೆಳಸಬೇಕೆಂಬ ಮನಸ್ಸು ಇಲ್ಲದಿದ್ದರೆ ಕನ್ನಡ ತನವನ್ನು, ಕನ್ನಡ ಭಾಷೆಯನ್ನು ಬೆಳೆಸುವುದಕ್ಕೆ ಕಷ್ಟವಾಗುತ್ತದೆಂದು ಹೇಳುತ್ತೇನೆ. ಆ ದಿಕ್ಕಿನಲ್ಲಿ ನಾವೆಲ್ಲರೂ ಕೆಲಸ ಮಾಡೋಣ ಎಂದು ಹೇಳಬಯಸುತ್ತೇನೆ. ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ವಿವಿಧ ಖಾತೆಗಳ ಮೇಲೆ ಮಾತನಾಡತಕ್ಕ ಕಾಲದಲ್ಲಿ ಅವರೇ ಹಾಜರಿದ್ದು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಅವರೆ ಉತ್ತರಿಸುವುದಕ್ಕೆ ಸಾಧ್ಯವಾಗುತ್ತದೋ ಇಲ್ಲವೋ ಗೊತ್ತಿಲ್ಲ, ಅವರ ಪರವಾಗಿ ಬೇರೆ ಮಂತ್ರಿಗಳು ಉತ್ತರಿಸಬಹುದು. ಏನೇ ಆಗಲಿ, ಒಂದು ಪ್ರಮುಖವಾದ ವಿಚಾರವನ್ನು ಪ್ರಸ್ತಾಪಿಸ ಬಯಸುತ್ತೇನೆ. ಕಳೆದ ೭–೮ ದಿವಸಗಳಿಂದ ವ್ಯವಸಾಯ ಪದವೀಧರರು ಅಮರಣಾಂತ ಉಪವಾಸ ನಡೆಸುತ್ತಿದ್ದಾರೆ. ನಾನೂ ಕೂಡ ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ಓದಿ ೧೯೫೩ರಲ್ಲಿ ಕೃಷಿ ಪದವೀಧರನಾದವನು. ವ್ಯವಸಾಯ ಪದವಿಯನ್ನು ಪಡೆಯಬೇಕಾದರೆ ಹಿಂದೆ ಏನು ಪಾಠಪ್ರವಚನಗಳನ್ನು ಅಭ್ಯಾಸ ಮಾಡಬೇಕಾಗಿತ್ತೋ ಅದರಲ್ಲಿ ಕೂಡ ಇತ್ತೀಚೆಗೆ ಬದಲಾವಣೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ವ್ಯವಸಾಯ ಪದವೀಧರರ ಬೇಡಿಕೆ ಏನೆಂದರೆ ಅದು ಬಹಳ ಕನಿಷ್ಟ ಬೇಡಿಕೆ. ವೆಟರ್ನರಿ, ಮೆಡಿಕಲ್, ಇಂಜಿನಿಯರಿಂಗ್ ಪದವೀಧರರೇನಿದ್ದಾರೆ ಅವರಿಗೆ ಸರಿಸಮಾನವಾಗಿ ನಮ್ಮ ವೇತನ ಶ್ರೇಣಿಯನ್ನು ಹೆಚ್ಚಿಸಬೇಕೆಂಬುದು ಅವರ ಮುಖ್ಯವಾದ ಬೇಡಿಕೆ. ಅವರು ಕೇಳತಕ್ಕದ್ದು ನ್ಯಾಯಬದ್ಧವಾಗಿದೆ. ಇಂಜಿನಿಯರಿಂಗ್, ಮತ್ತು ವೆಟರಿನರಿ ಪದವೀಧರರು ರೈತರೊಡನೆ ಕೆಲಸ ಮಾಡುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಹೆಚ್ಚು ಸಮಯ ರೈತರೊಡನೆ ಮಾಡತಕ್ಕ ಕೆಲಸ ಇವರದ್ದು. ಆ ಒಂದು ಕಾರಣದಿಂದ ಮುಖ್ಯ ಮಂತ್ರಿಗಳು ಈ ಒಂದು ವಿಷಯದಲ್ಲಿ ಉದಾರ ಮನಸ್ಸನ್ನು ತಾಳಿ ಈ ಅಧಿವೇಶನದಲ್ಲಿ ಒಂದು ತೀರ್ಮಾನ ಕೈಗೊಳ್ಳತಕ್ಕದ್ದು ಅತಿ ಸೂಕ್ತವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಅವರು ಉತ್ತರ

ಕೊಡತಕ್ಕ ಕಾಲದಲ್ಲಿ ಭರವಸೆ ನೀಡುತ್ತಾರೆಂಬ ಪೂರ್ಣ ನಂಬಿಕೆ ಇಟ್ಟುಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಜೆ. ಹೆಚ್. ಪಟೇಲ್ (ಚನ್ನಗಿರಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ, ಪೋಲೀಸ್ ಇಲಾಖೆಯ ಬಗ್ಗೆ ವಿಶೇಷವಾಗಿ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಎಲ್ಲ ವಿಷಯಗಳನ್ನು ಎಲ್ಲರೂ ಮಾತನಾಡಿ ಸದನದ ವೇಳೆಯನ್ನು ಕಳೆಯುವುದಕ್ಕೆ ಬದಲಾಗಿ ಪೋಲೀಸ್ ಇಲಾಖೆ ಮತ್ತು ಅದಕ್ಕೆ ಸಂಬಂಧಪಟ್ಟ ಆಡಳಿತ ಕ್ರಮದ ಬಗ್ಗೆ ಮಾತ್ರ ಮಾತನಾಡುತ್ತೇನೆ. ಈ ಇಲಾಖೆಯ ವಾರ್ಷಿಕ ವರದಿಯಲ್ಲಿ ಕೊಟ್ಟಿರುವ ಪ್ರಕಾರ ನಮ್ಮ ರಾಜ್ಯದಲ್ಲಿ ಪೋಲೀಸ್ ಬಹಳ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ ; ಯಾವ ಗೊಂದಲವೂ ಇಲ್ಲ, ರಾಜ್ಯವೆಲ್ಲ ಶಾಂತಿಮಯವಾಗಿದೆ ಮತ್ತು ರಾಜ್ಯದಲ್ಲಿ ಬರತಕ್ಕ ರೈತರ ಸಮಸ್ಯೆಯಾಗಲಿ. ವಿದ್ಯಾರ್ಥಿಗಳ ಸಮಸ್ಯೆಯಾಗಲಿ, ಕಾರ್ಮಿಕರ ಸಮಸ್ಯೆಯಾಗಲಿ ಎಲ್ಲವನ್ನು ನಾವು ಹೇಗೆ ಪೋಲೀಸರನ್ನು ಉಪಯೋಗಿಸಿ ಬಗೆಹರಿಸಿದ್ದೇವೆ ಎಂಬುದನ್ನು ಹೇಳಿದ್ದಾರೆ. ಇಲ್ಲಿ ಪೋಲೀಸ್ ಒಂದನ್ನೇ ನಾವು ವಿಶಿಷ್ಟವಾದ ಅಂಗವಾಗಿ ಪರಿಗಣಿಸುವುದಿಲ್ಲ. ಪೋಲೀಸ್ ನಮ್ಮ ಸಮಾಜದ ವ್ಯವಸ್ಥೆಯನ್ನು, ಕುಂದುಕೊರತೆಗಳನ್ನು, ಲೋಪದೋಷಗಳನ್ನು ತೋರಿಸತಕ್ಕ ಒಂದು ಭಾಗ ಮಾತ್ರ. ಯಾವ ದೇಶದಲ್ಲಿ ಅತಿ ಕಡಿಮೆ ಪೋಲೀಸ್ ಇರುತ್ತದೋ ಆ ದೇಶ ಸುಭಿಕ್ಷವಾದ ದೇಶವೆಂದು ಹೇಳುತ್ತೇನೆ. ಆದರೆ ಅದು ನಮ್ಮ ದೇಶದಲ್ಲಿ ಸಾಧ್ಯವಿಲ್ಲ. ಕೇಂದ್ರ ಸರ್ಕಾರದ ಬಡ್ಜೆಟ್ಟಿನಲ್ಲಿ ಈ ವರ್ಷ ೫೯೩ ಕೋಟಿಯಿಂದ ೬೬೭ ಕೋಟಿ ರೂಪಾಯಿಗಳಿಗೆ ಪೋಲೀಸ್ ಬಡ್ಜೆಟ್ಟನ್ನು ಹೆಚ್ಚಿಸಿದ್ದಾರೆ. ನಮ್ಮ ರಾಜ್ಯದಲ್ಲಿ ೪೨ ಕೋಟಿಯಿಂದ ೫೨ ಕೋಟಿ ರೂಪಾಯಿಗಳಿಗೆ ಈ ಬಡ್ಜೆಟ್ ಅಂದಾಜು ಹೆಚ್ಚಾಗಿದೆ.

ಇಲ್ಲಿ ನಾವು ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಕೇವಲ ಪೋಲೀಸನ್ನು ಗಣನೆಗೆ ತೆಗೆದುಕೊಂಡರೆ ಸಾಧ್ಯವಾಗುವುದಿಲ್ಲ. ಯಾವ ಸಮಾಜದಲ್ಲಿ ಆರ್ಥಿಕ ಮತ್ತು ಸಾಮಾಜಿಕ ದುರ್ಬಲತೆ ಹೆಚ್ಚುತ್ತಾ ಹೋಗುತ್ತದೆ ಆ ಸಮಾಜದಲ್ಲಿ ಅಪರಾಧಗಳು, ಕೊಲೆ, ಸುಲಿಗೆ, ಲೂಟಿ, ಮುಂತಾದುವು ಸ್ವಾಭಾವಿಕವಾಗಿ ಜಾಸ್ತಿಯಾಗುತ್ತಾ ಹೋಗುತ್ತವೆ. ಹಾಗಾದರೆ ಒಳ್ಳೆಯ ಸಮೃದ್ಧವಾದ ದೇಶದಲ್ಲಿ, ಸಮಾಜದಲ್ಲಿ ಅಪರಾಧಗಳು ಆಗುತ್ತಿಲ್ಲವೆಂದು ಅಲ್ಲ. ಅಲ್ಲೂ ಕೂಡ ಆಗುತ್ತವೆ. ಆದರೆ ಅವು ಮಾನಸಿಕ ಕಾರಣಗಳಿಂದ ಆಗುತ್ತವೆ. ನಮ್ಮ ಸಮಾಜದಲ್ಲಿ ಆಗುತ್ತಿರತಕ್ಕ ಕ್ರೌರ್ಯಗಳು ಏನಿವೆ ಅವು ಆರ್ಥಿಕ ಕಾರಣಗಳಿಗಾಗಿ ಅಥವಾ ಸಾಮಾಜಿಕ ಕಾರಣಗಳಿಗಾಗಿ ಆಗುತ್ತಿವೆ. ಅದನ್ನು ನಾವು ಎದುರಿಸಲು ಪೋಲೀಸರ ಸಂಖ್ಯೆಯನ್ನು ಜಾಸ್ತಿ ಮಾಡಿದರೆ ಅಥವಾ ಪೋಲೀಸ್ ಆಫೀಸರ್‌ಗಳನ್ನು ಜಾಸ್ತಿ ಮಾಡಿದರೆ ಸಮಸ್ಯೆ ಪರಿಹಾರ ಆಗುವುದಿಲ್ಲ. ಈಗ್ಗೆ ೧೫ ವರ್ಷಗಳ ಹಿಂದೆ ಪೋಲೀಸ್ ಸಂಖ್ಯೆ ಎಷ್ಟಿತ್ತು ಅದರ ಎರಡುಪಟ್ಟು ಜಾಸ್ತಿ ಇದ್ದರೂ ಕೂಡ ಕೊಲೆಗಳು, ಡಕಾಯಿತತನಗಳು ಎಲ್ಲರೀತಿಯ ಅಪರಾಧಗಳೂ ಜಾಸ್ತಿಯಾಗುತ್ತಲೇ ಇವೆ. ೧೯೮೦ರಲ್ಲಿ ಒಟ್ಟು ಅಪರಾಧಗಳು ೭೮ ಸಾವಿರ ಆಗಿದ್ದರೆ, ಈ ವರ್ಷ ೭೯,೬೦೫ ಅಪರಾಧಗಳಾಗಿವೆ. ೧೯೮೧ನೇ ಸಾಲಿನದು ಇನ್ನೂ ಬಂದಿಲ್ಲ. ಇವತ್ತು ನಾವು ಪೋಲೀಸ್ ಸ್ಟೇಷನ್‌ನ್ನು ಅಥವಾ ನಮ್ಮ ಪೋಲೀಸ್ ಆಡಳಿತ ವ್ಯವಸ್ಥೆಯನ್ನು ಕೇಂದ್ರ ಬಿಂದುವಾಗಿ ಇಟ್ಟುಕೊಂಡು ನೋಡುವುದಾದರೆ ಇವತ್ತು ಪೋಲೀಸ್ ಸ್ಟೇಷನ್‌ಗಳಿಗೆ ಜನರು ಹೋಗುವುದಕ್ಕೆ ಬಹಳ ಹೆದರುತ್ತಾರೆ. ಎಷ್ಟೇ ಕಷ್ಟ ಬಂದರೂ ಸುಮ್ಮನೆ ಅನುಭವಿಸಬೇಕಾಗಿದೆ. ಪೋಲೀಸ್ ಸ್ಟೇಷನ್‌ಗೆ ದೂರು ಕೊಡಲು ಹೋದರೆ ಇವರನ್ನೇ ಪೋಲೀಸರು ಹೆದರಿಸುತ್ತಾರೆ. ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಡುವುದರಿಂದ ನಮ್ಮ ಕಷ್ಟಗಳು ಪರಿಹಾರವಾಗುತ್ತವೆ ಎಂಬ ವಿಶ್ವಾಸ ಇವತ್ತು ಜನರಿಗೆ ಹೋಗಿಬಿಟ್ಟಿದೆ ಸಾಮಾನ್ಯವಾಗಿ ಸಾರ್ವಜನಿಕರು ತಮ್ಮ ವಸ್ತುಗಳನ್ನು ಕಳೆದುಕೊಂಡಾಗಲಿ ಅಥವಾ ಬೇರೆಯವರಿಂದ ತೊಂದರೆಯಾಗುತ್ತಿದೆ ಎಂದಾಗಲಿ ಪೋಲೀಸ್ ಸ್ಟೇಷನ್‌ಗೆ ದೂರು ಕೊಡಲು ಹೋಗಿ ಪೋಲೀಸರಿಂದಲೇ ತಾವು ಹೊಡೆತವನ್ನು ತಿಂದು ಬಂದಿರುವ ನಿದರ್ಶನಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಇವೆ. ಇದಕ್ಕೆ ಕಾರಣ ಏನೆಂದರೆ, ಕಳ್ಳತನ ಮಾಡುವಂಥ ವ್ಯಕ್ತಿಗಳು ಸಾಮಾನ್ಯವಾಗಿ ಪ್ರಭಾವಿ ವ್ಯಕ್ತಿಗಳು. ಇಲ್ಲಿ ಏನಾಗುತ್ತದೆ ಎಂದರೆ ಪೋಲೀಸ್ ಇಲಾಖೆಯಲ್ಲಿರುವವರೂ ಮನುಷ್ಯರೇ,

---

* Indicates that remarks or speeches have not been revised by the member concerned.

ಪೋಲೀಸರಿಗೆ ದೂರು ಕೊಡುವುದಕ್ಕೆ ಹೋಗುವವರೂ ಮನುಷ್ಯರೇ, ಇವರಿಬ್ಬರೂ ಕರ್ನಾಟಕದವರೇ ಆದರೂ ಪೋಲೀಸ್ ಅಂದತಕ್ಷಣ. ಪೋಲೀಸ್‌ರ ಖಾಕಿ ಬಟ್ಟೆ ಮೈಮೇಲೆ ಬಂದತಕ್ಷಣವೇ ಅವರಲ್ಲಿ ಮಾನವೀಯತೆಯೇ ಕಳೆದುಹೋಗುತ್ತದೆ. ಅವರಲ್ಲಿದ್ದಂಥ ಎಲ್ಲ ಒಳ್ಳೆಯ ಗುಣಗಳೂ ಬದಲಾವಣೆಯಾಗಿಬಿಡುತ್ತವೆ ಯಾರಾದರೂ ಒಂದು ಆಭರಣವನ್ನೋ ಅಥವಾ ವಸ್ತುವನ್ನೋ ಕಳೆದುಕೊಂಡಿದ್ದು ಅದು ಪೋಲೀಸರ ಕೈಗೆ ಸಿಕ್ಕಿದರೆ ಅದು ಸುರಕ್ಷಿತ ರೀತಿಯಿಂದ ಕಳೆದುಕೊಂಡವರಿಗೆ ತಲುಪುತ್ತದೆ ಎನ್ನುವ ಭರವಸೆಯೇ ಇಲ್ಲ. ಹಾಗಾದರೆ ನೀವು ಆತನನ್ನು ಸರಿಯಾಗಿ ತರಬೇತು ಮಾಡಿರುವುದಿಲ್ಲವೆ ? ಹಿಂದೆ ಬ್ರಿಟಿಷರು ಪೋಲೀಸರನ್ನು ಇಟ್ಟುಕೊಂಡಿದ್ದುದು ಜನರನ್ನು ಕಂಡಕೂಡಲೇ ಕಚ್ಚುವುದಕ್ಕೆ. ಆದರೆ ನೀವು ಪೋಲೀಸರನ್ನು ಇಟ್ಟುಕೊಂಡಿರುವುದು ಜನರ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ. ಸ್ವಾಮಿ, ನಾನು ಇಂಗ್ಲೆಂಡ್‌ಗೆ ಒಮ್ಮೆ ಹೋಗಿದ್ದಾಗ ಅಲ್ಲಿ ಕಂಡಿದ್ದು ಏನೆಂದರೆ, ಇಂಗ್ಲೆಂಡಿನ ಜನರು ಪೋಲೀಸರ ಬಗ್ಗೆ ಇಟ್ಟುಕೊಂಡಿರತಕ್ಕ ಅಭಿಮಾನ, ಪ್ರೀತಿ, ಅವರ ಎಂ.ಎಲ್.ಎ.ಗಳ ಬಗ್ಗೆ ಆಗಲಿ, ಅಥವಾ ಪಾರ್ಲಿಮೆಂಟ್ ಸದಸ್ಯರ ಬಗ್ಗೆ ಆಗಲಿ, ಅಥವಾ ಮಂತ್ರಿಗಳ ಬಗ್ಗೆ ಆಗಲಿ ಇಟ್ಟುಕೊಂಡಿಲ್ಲ. ಪೋಲೀಸರ ಕೈಗೆ ಒಂದು ವಸ್ತು ಹೋಯಿತು, ಅಥವಾ ಸಿಕ್ಕಿತು ಎಂದರೆ ಅದು ಅತ್ಯಂತ ಸುರಕ್ಷಿತವಾಗಿದೆ ಎಂದು ಆ ಜನರು ತಿಳಿದುಕೊಳ್ಳುತ್ತಾರೆ. ಆದರೆ ನಮ್ಮ ದೇಶದಲ್ಲಿ ಪೋಲೀಸರ ಕೈಗೆ ಹೋದ ಯಾವುದೇ ವಸ್ತು ವಾಗಲಿ ಮತ್ತೆ ನಮಗೆ ವಾಪಸು ಬರುತ್ತದೆ ಎಂಬ ಭರವಸೆಯೇ ಇಲ್ಲ. ಪೋಲೀಸರು ಎಂದರೆ ಜನರು ಬೆಚ್ಚಿಬೀಳುವಂತೆ ಮಾಡಿರುವವರು ಯಾರು ? ಪ್ರತಿ ಹಂತದಲ್ಲೂ ರಾಜಕೀಯ ಶಕ್ತಿಗಳು, ಆಳುವ ಪಕ್ಷದವರು ಈ ಪೋಲೀಸರನ್ನು ತಮ್ಮ ಉದ್ದೇಶ ಸಾಧನೆಗೋಸ್ಕರ ಬಳಸಿಕೊಳ್ಳುವ ದುಷ್ಟ ಪದ್ಧತಿ ಏನಿದೆ ಇದು ಹೋಗಿ ಡಿ.ಐ.ಜಿ.ಯಿಂದ ಹಿಡಿದು ಒಬ್ಬ ಸಾಮಾನ್ಯ ಪೋಲೀಸ್ ಕಾನ್‌ಸ್ಟೇಬಲ್ ಕೂಡ ನಿರ್ಭೀತಿಯಿಂದ, ಯಾವುದೇ ಒತ್ತಡಕ್ಕೂ ಮಣಿಯದೆ ನಿಷ್ಠಾವಂತನಾಗಿ ಕೆಲಸಮಾಡುವಂತಿರಬೇಕು. ಆದರೆ ನನಗೆ ತಿಳಿದಮಟ್ಟಿಗೆ ನಮ್ಮ ದೇಶದಲ್ಲಿ ಯಾವ ರಾಜ್ಯದಲ್ಲೂ ಕೂಡ ಈ ರೀತಿ ನಡೆಯುತ್ತಿಲ್ಲ. ಇವತ್ತು ಮಾನ್ಯ ಗುಂಡೂರಾಯರು ಇರಬಹುದು, ನಾಳೆ ಇನ್ನೊಬ್ಬರು ಬರಬಹುದು. ಆದರೆ ಸಮಾಜದಲ್ಲಿರತಕ್ಕ ತೀರಾ ಕೆಳಮಟ್ಟದ ಮನುಷ್ಯನಿಗೂ ರಕ್ಷಣೆ ಸಿಗುವಂತಿರಬೇಕು. ಆದರೆ ಈ ರಕ್ಷಣೆ ಯಾರಿಗೆ ಸಿಕ್ಕುತ್ತಿದೆ ಎಂದರೆ ಮಂತ್ರಿಗಳಿಗೆ. ಏಕೆಂದರೆ ಮಂತ್ರಿಗಳು ಕಾರ್‌ನಲ್ಲಿ ಹೊರಟರೆ ಅವರ ಕಾರಿನ ಹಿಂದೆ, ಮುಂದೆ ಒಂದೊಂದು ಕಾರ್‌ಗಳಲ್ಲಿ ಪೋಲೀಸರು ಇವರ ರಕ್ಷಣೆಗಾಗಿ ಹೋಗುತ್ತಿದ್ದಾರೆ. ಇದನ್ನು ನೋಡಿದರೆ ಪೋಲೀಸರಿಂದ ಮಂತ್ರಿಗಳ ರಕ್ಷಣೆಯೋ ? ಅಥವಾ ಮಂತ್ರಿಗಳಿಂದ ಪೋಲೀಸರ ರಕ್ಷಣೆಯೋ ? ಒಂದೂ ಗೊತ್ತಾಗುತ್ತಿಲ್ಲ. ಇವತ್ತು ಇವರಿಬ್ಬರನ್ನೂ ಕಂಡು ಜನರು ಹೆದರುತ್ತಿದ್ದಾರೆ. ಸಮಾಜ ವಿರೋಧೀ ಶಕ್ತಿಗಳಿಗೆ, ಗೂಂಡಾಗಳಿಗೆ ರಕ್ಷಣೆ ಕೊಡತಕ್ಕ ಪ್ರಯತ್ನ ಭ್ರಷ್ಟ ರಾಜಕಾರಣಿಗಳಿಂದ ನಡೆದಿದೆ. ನಿನ್ನೆಯ ದಿವಸ ಮಾನ್ಯ ಸದಸ್ಯರಾದ ಗಟ್ಟಿ ಚಂದ್ರಶೇಖರ್‌ರವರು ಮಾತನಾಡುತ್ತಾ ಸಾರ್ವಜನಿಕರು ಚಳುವಳಿ ಮಾಡಿದಾಗ ಪೋಲೀಸರು ಗುಂಡು ಹೊಡೆದದ್ದು ತಪ್ಪಲ್ಲ ಗುಂಡು ಇರುವುದು ಹೊಡೆಯುವುದಕ್ಕೇ ಹೊರತು ಉಪ್ಪಿಟ್ಟು ಮಾಡಿಕೊಂಡು ತಿನ್ನುವುದಕ್ಕಲ್ಲ ಎಂದು ಹೇಳಿದರು. ನನ್ನ ಮಟ್ಟಿಗೆ ಹೇಳುವುದಾದರೆ ಯಾವ ದೇಶದಲ್ಲಿ ಜನತೆಯ ಮೇಲೆ ಪೋಲೀಸರು ಗುಂಡು ಹಾರಿಸುವಂಥ ರೀತಿಯಲ್ಲಿ ಆಡಳಿತ ನಡೆಯುತ್ತಿರುತ್ತದೆ ಆ ದೇಶದಲ್ಲಿ ಜನರಿಗೆ ಉಪ್ಪಿಟ್ಟೂ ಇರುವುದಿಲ್ಲ, ಕಾಫಿಯೂ ಇರುವುದಿಲ್ಲ. ಆದರೆ ಪೋಲೀಸರು ಈ ಗುಂಡುಗಳನ್ನು ಕಲ್ಲು, ಮಣ್ಣು ತೂರಿದಂತೆ ಅಷ್ಟೊಂದು ಸರಾಗವಾಗಿ ಜನರಮೇಲೆ ತೂರುವುದಕ್ಕೂ ಬರುವುದಿಲ್ಲ. ಹಿಂದೆಯೂ ಕೂಡ ಫೈರಿಂಗ್ ಆಗುತ್ತಿತ್ತು. ಅಂದರೆ ಅಪರೂಪದ ಪ್ರಸಂಗದಲ್ಲಿ ಆಗುತ್ತಿತ್ತು. ಯಾರಾದರೂ ಹದ್ದುಮೀರಿ ಕೊಲೆ ಸುಲಿಗೆಗಳಲ್ಲಿ ತೊಡಗಿದ್ದರೆ ಅದನ್ನು ಹತೋಟಿಗೆ ತರಲು ಮಾಡುತ್ತಿದ್ದರು. ಕಳೆದ ಸಾರಿ ನರಗುಂದ, ನವಲಗುಂದಗಳಲ್ಲೂ ಗೋಲಿಬಾರ್ ಆಯಿತು, ಅನಂತರ ಶಿವಮೊಗ್ಗಾ ಜಿಲ್ಲೆಯಲ್ಲಿ ನಾಗಸಮುದ್ರದಲ್ಲಿ, ಇತ್ತೀಚೆಗೆ ಕೆ.ಜಿ.ಎಫ್.ನಲ್ಲಿ ಗುಂಡು ಹಾರಿಸಿದರು. ಆದರೆ ಇಲ್ಲೆಲ್ಲಾ ಗುಂಡನ್ನು ಹಾರಿಸುವ ಪರಿಸ್ಥಿತಿ ಬಂದಿರಲಿಲ್ಲ.

ಸ್ವಾಮಿ, ಕೆ ಜಿ.ಎಫ್.ನಲ್ಲಿ ಒಂದು ಕಾಲೋನಿಗೆ ಪೋಲೀಸರು ನುಗ್ಗಿ ಒಂದು ಮನೆಯ ಕಿಟಿಕಿಗೆ ಗುಂಡು ಹೊಡೆದಿದ್ದಾರೆ, ಎಂದರೆ ಇದರಲ್ಲಿ ಏನಾದರೂ ಅರ್ಥ ಇದೆಯೆ ? ಇಂಥ ವಿಚಿತ್ರ ವರ್ತನೆಯನ್ನು ಹಿಂದೆ ನಾವು ಎಲ್ಲಿಯೂ ನೋಡಿರಲಿಲ್ಲ. ಕಳೆದ ಮೇ ೨೨ನೇ ತಾರೀಖು ತಿಪಟೂರಿನಲ್ಲಿ ಒಂದು ಘಟನೆ ನಡೆಯಿತು. ಎಲ್ಲೋ ಸ್ವಲ್ಪ ಗಲಾಟೆ ಆಯಿತು ಎಂದು ಮನೆಯಲ್ಲಿ ರಾತ್ರಿ ಸುಮಾರು ೧ ಗಂಟೆ ಸಮಯದಲ್ಲಿ ಶ್ರೀಧರ ಮತ್ತು ಮಂಜುನಾಥ ಎನ್ನುವವರು ಮನೆಯಲ್ಲಿ ಮಲಗಿದ್ದಾಗ ಪೋಲೀಸರು ಜೀಪಿನಲ್ಲಿ ಹೋಗಿ ಅವರ ಮನೆಗೆ ನುಗ್ಗಿದರು. ಅದನ್ನು ಕಂಡು ಶ್ರೀಧರ ಎನ್ನುವವನು ಆ ನಡುರಾತ್ರಿ

ಯಲ್ಲಿ ಭಯದಿಂದ ಎದ್ದು ಓಡಿಹೋಗುತ್ತಿದ್ದಾಗ ಪೋಲೀಸರು ಹಿಂದಿನಿಂದ ಅವನಿಗೆ ಗುಂಡಿಕ್ಕಿ ಹೊಡೆದರು. ಅದೇರೀತಿ ಕೆ.ಜಿ.ಎಫ್.ನಲ್ಲೂ ಕೂಡ ರಾತ್ರಿ ವೇಳೆಯಲ್ಲಿ ಮನೆಯಲ್ಲಿ ಮಲಗಿದ್ದಾಗ ಪೋಲೀಸರು ಕಿಟಿಕಿಯಿಂದ ಗುಂಡನ್ನು ಹೊಡೆದಿದ್ದಾರೆ. ಆ ಗುಂಡು ಮಲಗಿದ್ದ ಒಬ್ಬ ಹೆಣ್ಣುಮಗಳ ಕೈಗೆ ತಾಕಿ ನಂತರ ಗೋಡೆಗೆ ಹೋಗಿ ತಗುಲಿದೆ. ಇವತ್ತು ಏನಾಗಿದೆ ಎಂದರೆ, ದಿನಬೆಳಗಾದರೆ ಗೋಲೀಬಾರ್ ಆಗುವುದು ಸರ್ವೇಸಾಮಾನ್ಯವಾಗಿ ಹೋಗಿದೆ. ಅಕಸ್ಮಾತ್ ಎಲ್ಲಾದರೂ ಗೋಲಿಬಾರ್ ಆಗಲಿಲ್ಲ ಎಂದರೆ ಅವತ್ತು ಏನೋ ಗ್ರಹಚಾರ ಬಂದಿದೆ ಎಂದು ಅರ್ಥ. ಗೋಲೀಬಾರ್ ಆದರೆ ಅದು ಮಾಮೂಲಿ ನಿತ್ಯ ನಡೆಯುವ ಕೆಲಸ ನಡೆಯುತ್ತಿದೆ ಎಂದು ಜನ ತಿಳಿದುಕೊಳ್ಳುತ್ತಾರೆ. ಇವತ್ತು ನಾವು ಯಾವ ಸ್ಥಿತಿಯಲ್ಲಿದ್ದೇವೆ ಎಂದರೆ, ಬಹಳಷ್ಟು ನಿಸ್ಸಹಾಯಕ ಸ್ಥಿತಿಯಲ್ಲಿದ್ದೇವೆ. ಈ ಪೋಲೀಸ್ ಇಲಾಖೆ ಏತಕ್ಕೆ ಹೀಗಾಯಿತು ? ನನಗೆ ತಿಳಿದಮಟ್ಟಿಗೆ ಅತ್ಯಂತ ಉನ್ನತ ಅಧಿಕಾರಿ ಅವರ ಮೀಟಿಂಗ್‌ನಲ್ಲಿ ಹೇಳುತ್ತಿದ್ದರು "shoot them down ; don't worry. We are the Government, behind that. Shoot them down."

೧೧–೩೦ ಎ. ಎಂ.

ಆ ಮೇಲೆ ತಮ್ಮ ಲಾಠಿಗೆ ಸ್ಟ್ರೈಕ್ ಆದಾಗ ಬೇಕಾಗುತ್ತದ್ದಲ್ಲ. ಅಂಥ ಸಂದರ್ಭದಲ್ಲಿ ಸಾಧಾರಣವಾದ ಲಾಠಿಗಳನ್ನು ಉಪಯೋಗಿಸಬೇಡಿ. ಹೊಡೆದರೆ ಒಂದೇ ಏಟಿಗೆ ತಲೆ ಬುರುಡೆ ಹೋಳಾಗಬೇಕು ಹಾಗೆ ಲಾಠಿಗೆ ಮೊಳೆಯನ್ನು ಹುದುಗಿಸಿಕೊಳ್ಳಿ ಎಂದು ಹೇಳಿದ್ದಾರಂತೆ. ಪೋಲೀಸ್ ಆಫೀಸರ್‌ಗಳು, ಪೋಲೀಸ್ ಆಫೀಸರ್ಸ್ ಮಟ್ಟದಲ್ಲಿಯೇ ಈ ರೀತಿ ಬ್ರೀಫಿಂಗ್ ಆದರೆ ಸಾಮಾನ್ಯವಾಗಿ ರಸ್ತೆಯಲ್ಲಿ ನಿಂತು ಕೊಂಡು ಹೊಡೆಯತಕ್ಕಂಥ ದಫೇದಾರ, ಕಾನ್‌ಸ್ಟೇಬಲ್. ಸಬ್‌ಇನ್ಸ್‌ಪೆಕ್ಟರನ್ನು ಛೂ ಬಿಡುವಂತೆ ಬಿಟ್ಟು ಕಳುಹಿಸಿ ಬಿಟ್ಟರೆ ಅವನು ಇನ್ನು ಹೇಗೆ ಮಾಡುತ್ತಾರೆ. ಒಂದು ಕಡೆ ಜನರು ವಿನಾಕಾರಣ ತುಂಬ ಗಲಾಟೆ, ಒಂದು ರೀತಿ ಅಭದ್ರತೆ ಇದರಿಂದ ಹುಚ್ಚು ಹಿಡಿದಿರತಕ್ಕಂಥ ಮಾಬ್ ಫ್ಯೂರಿ. ಒಂದು ಕಡೆ ಮಾಬ್ ಫ್ಯೂರಿ ಹೆಚ್ಚಾಗುತ್ತಿದ್ದರೆ ಇನ್ನೊಂದು ಕಡೆ most organised voilence of the Government, ಇದಕ್ಕೆ ಡೈರೆಕ್ಷನ್ ಇಲ್ಲ, ಪರ್ಪಸ್ ಇಲ್ಲ. ಸುಮ್ಮನೆ ಕೊಂದು ಹಾಕಿಬಿಡುವುದು, ಎಷ್ಟು ದಿವಸ ಪೋಲೀಸ್‌ರವರ ಬಲದಿಂದ ಸರ್ಕಾರವನ್ನು ನಡೆಸುತ್ತೀರಿ. ನಾನು ಒಬ್ಬನೇ ಶ್ರೀಮಾನ್ ಗೂಂಡೂರಾಯರೇ ಕಾರಣರೆಂದು ಹೇಳುವುದಿಲ್ಲ. ಸರ್ಕಾರವೇ ಎಂದು ಹೇಳುವುದಿಲ್ಲ. ಇವೆರಡು ಒಂದೇ ಅಂಶ ಮಾತ್ರ. ಇವರ ಹತೋಟಿ ಮೀರಿದೆ, ಏತಕ್ಕೆಂದರೆ ಅವರು ನಾವು ನೋಡಿದ ಹಾಗೆ ಹಿಂದೆ ಇದ್ದಂಥ ಮಂತ್ರಿಮಂಡಲಕ್ಕಿಂತಲೂ ಬಲಾಢ್ಯರಾಗಿದ್ದಾರೆ. ಅವರಿಗೆ ಪೋಲಿಸ್ ಬಲ ಇದೆ. ಆದ್ದರಿಂದ ಅವರನ್ನು ಸಾಮಾನ್ಯವಾಗಿ ಯಾರೂ ಅಟ್ಯಾಕ್ ಮಾಡುವುದಕ್ಕೆ ಆಗುವುದಿಲ್ಲ. ಹೀಗಿದ್ದರೂ ಅವರಿಗೆ ಏತಕ್ಕೆ ಹಿಂದೆ ಮೂರು ಮುಂದೆ ನಾಲ್ಕು ಪೋಲೀಸ್. ಇವರನ್ನು ನೋಡಿ ಮತ್ತೆ ಬೇರೆಯವರಿಗೂ ಹಿಂದೆ ಎರಡು ಮುಂದೆ ಎರಡು ಪೋಲೀಸ್ ಕಾರುಗಳು ಬೇಕು. ಒಬ್ಬರನ್ನು ನೋಡಿ ಒಬ್ಬರು ಕಲಿತುಕೊಳ್ಳುತ್ತಿದ್ದಾರೆ. "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ" ಇದನ್ನು ನಾನು ವೈಯುಕ್ತಿಕವಾಗಿ ಹೇಳುತ್ತಿದ್ದೇನೆ. ಇಂಥ ಒಂದು ದುಷ್ಟ ಸಂಪ್ರದಾಯವನ್ನು ನಾವು ಬೆಳಸುತ್ತಿದ್ದೇವೆ. ಪೋಲೀಸ್ ನವರ ಬಲದಿಂದ ಜನರ ಮಧ್ಯದಲ್ಲಿ ಹೋಗಬೇಕು ಎನ್ನುವ ಸ್ಥಿತಿಗೆ ಬಂದರೆ ಇರುವುದೇ ಬೇಡ, ಸರ್ಕಾರವನ್ನು ನಡೆಸುವುದೇ ಬೇಡ. ಪೋಲೀಸಿನವರೇ ನಡೆಸಲಿ ಬೇಕಾದರೆ ನಮ್ಮ ಪೋಲೀಸ್ ಡಿಪಾರ್ಟ್ ಮೆಂಟ್ ಹೇಗೆ ಇರಬೇಕು ಎನ್ನುವುದಕ್ಕೆ, ಧರ್ಮವೀರ ಕಮಿಷನ್ ರಿಪೋರ್ಟ್‌ನಲ್ಲಿ ಕೆಲವು ಅಂಶಗಳನ್ನು ಕೊಟ್ಟಿರುತ್ತಾರೆ. ನಾನು ಪೂರ್ತಿ ಓದಿಲ್ಲ. ನನಗೆ ಪೂರ್ತಿಯಾಗಿ ಸಿಕ್ಕಿಲ್ಲ. ಧರ್ಮವೀರರವರು ಮತ್ತು ಕೆಲವು ತಜ್ಞರು ಸೇರಿ, ನಮ್ಮ ದೇಶದಲ್ಲಿ ಪೋಲೀಸ್ ಯಾವ ರೀತಿ ಇರಬೇಕು ಎನ್ನುವಬಗ್ಗೆ ಹೇಳಿದ್ದಾರೆ. ಮಾನ್ಯ ಧರ್ಮವೀರರವರು ಹೇಳಿರುವುದರಲ್ಲಿ ಒಂದು ಅಂಶವನ್ನು ಮಾತ್ರ ಹೇಳುತ್ತೇನೆ. ಅದೇನೆಂದರೆ ಪೋಲೀಸ್ ಮತ್ತು ಜನತೆಯ ಮಧ್ಯದಲ್ಲಿರತಕ್ಕಂಥ ಗ್ಯಾಪ್ ಅದನ್ನು ಕಡಿಮೆ ಮಾಡಬೇಕು. ಜನ ಮತ್ತು ಪೋಲೀಸ್ ಮಧ್ಯೆ ಕಂದರ ಇರಬಾರದು. ಜನರಿಗೆ ಪೋಲೀಸ್‌ನವರನ್ನು ಕಂಡರೆ ಅಭಿಮಾನ, ಪ್ರೀತಿ ಇರಬೇಕು. ಈಗಿರತಕ್ಕಂಥ ಪೋಲೀಸಿನವರು ಜನರಿಗೆ ತದ್‌ವಿರುದ್ಧವಾಗಿದ್ದಾರೆ. ಪೋಲೀಸ್ ನವರನ್ನು ಕಂಡರೆ ಜನರಿಗೆ ಆಗುವುದಿಲ್ಲ. ಜನರಿಗೆ ಪೋಲೀಸ್‌ನವರನ್ನು ಕಂಡರೆ ಆಗುವುದಿಲ್ಲ. ಜನರನ್ನು ಕಂಡು ಪೋಲೀಸ್‌ನವರು ಕೆರಳಿ ನಿಂತುಬಿಡುತ್ತಾರೆ. ಅದನ್ನು ತೆಗೆಯಬೇಕು. ಇದನ್ನು ತೆಗೆಯುವುದಕ್ಕೋಸ್ಕರವಾಗಿ ರಾಷ್ಟ್ರ ಮಟ್ಟದಲ್ಲಿ ಪ್ರಯತ್ನ ಮಾಡಬೇಕು.

ರಾಜ್ಯ ಮಟ್ಟದಲ್ಲಿ ಪ್ರಯತ್ನ ಮಾಡಬೇಕು ಎಂದು ಹೇಳಿ ಕೆಲವು ಸುಧಾರಣೆಗಳನ್ನು ಮಾಡಿದ್ದಾರೆ, ಇದನ್ನು ಕೇಂದ್ರ ಸರ್ಕಾರದ ಮುಂದೆ ತಂದಿದ್ದಾರೆ. ಇದನ್ನು ಶಿಫಾರಸ್ಸು ಮಾಡಿ, ನಮ್ಮ ಸರ್ಕಾರಕ್ಕೂ ಕಳುಹಿಸಿಕೊಟ್ಟಿದ್ದಾರೆ. ಇದನ್ನು ತಾವು ಯೋಚನೆ ಮಾಡಬೇಕು. ಆದರೆ ಧರ್ಮವೀರರ ರಿಪೋರ್ಟ್‌ನ್ನು ಮೂಲೆಗೆ ಒತ್ತಿ ಇಟ್ಟಿದ್ದಾರೆ ಅದರೊಳಗಿನ ಯಾವ ಒಂದು ಅಂಶವನ್ನು ಜಾರಿಗೆ ತಂದಿಲ್ಲ. ಅದರೊಳಗಿನ ಅಂಶಗಳನ್ನು ಜಾರಿಗೆ ತರಲು ಒಂದು ಪೊಲಿಟಿಕಲ್ ವಿಲ್ ಬೇಕು. ಮನಸ್ಸು ಬೇಕು. ಮನಸ್ಸು ಇಲ್ಲದ ಹೊರತು ಏನೂ ಆಗುವುದಿಲ್ಲ. ನಮ್ಮ ಆರ್ಥಿಕ, ಸಾಮಾಜಿಕ ಸಮಸ್ಯೆ ಯಾವುದು ಇರುತ್ತದೆ, ಅವು ದಿನನಿತ್ಯ ಸಮಾಜದಲ್ಲಿ ಹಿಂಸೆಯನ್ನು ಮಾಡತಕ್ಕಂಥ ಸಮಾಜ ಆದರೆ ಎಲ್ಲೆಲ್ಲಿ ಹಿಂಸೆ ಇರುತ್ತದೋ ಅಲ್ಲೆಲ್ಲಾ ಶಸ್ತ್ರಗಳು ಇರುತ್ತದೆ. ಎಲ್ಲೆಲ್ಲಿ ಶಸ್ತ್ರಗಳು ಇರುತ್ತದೋ ಅಲ್ಲಿ ಹಿಂಸೆ ಇರುತ್ತದೆ. ಇದು ಸ್ವಾಭಾವಿಕವಾಗಿ ಜೊತೆ ಜೊತೆಯಲ್ಲಿಯೇ ಹೋಗುತ್ತಾ ಇರುತ್ತದೆ. ಆದುದರಿಂದ ನಾವು ಆರ್ಥಿಕವಾಗಿ ನಮ್ಮ ರಾಜ್ಯವನ್ನು, ನಮ್ಮ ರಾಷ್ಟ್ರವನ್ನು ಸುಬದ್ಧವಾಗಿ ಮಾಡುವ ಕಡೆಗೆ ಹೋಗುವುದರ ಬದಲಾಗಿ ಆರ್ಥಿಕ ಪರಾವಲಂಬನೆ ಜಾಸ್ತಿಯಾಗಿದೆ. ರಾಷ್ಟ್ರ ಮಟ್ಟದಲ್ಲಿ, ಆರ್ಥಿಕವಾಗಿ ಕುಸಿಯುತ್ತಿದ್ದೇವೆ, ನಾವು ಪರದೇಶಗಳ ಬಲದಿಂದ ಬದುಕತಕ್ಕಂಥ ಸ್ಥಿತಿಯಲ್ಲಿದ್ದೇವೆ. ನಮ್ಮ ಪೋಲೀಸ್‌ನವರ ವೆಚ್ಚ ಮತ್ತು ಸೈನ್ಯದ ವೆಚ್ಚ ಒಂದು ೧೮ ಪರ್ಸೆಂಟ್ ಇದ್ದರೆ ಇನ್ನೊಂದು ೧೨½ ಪರ್ಸೆಂಟ್ ಇದೆ. ಮೂವತ್ತು ಭಾಗ ಈ ಬಾಬಿಗೆ ಹೋಗುತ್ತಿದೆ, ನಮ್ಮ ರಾಷ್ಟ್ರದ ಆಯುವ್ಯಯದಲ್ಲಿ ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ೨೫೧ ಕೋಟಿ ಮತ್ತು ಪೆನ್‌ಷನ್‌ಗಾಗಿ ೫೦ ಕೋಟಿ, ಒಟ್ಟಿಗೆ ೩೦೦ ಕೋಟಿ ಅನುಪಯುಕ್ತ ವೆಚ್ಚಕ್ಕೆ ಹೋಗುತ್ತಿದೆ. ಇಂಥ ಅನುಪಯುಕ್ತ ವೆಚ್ಚವನ್ನು ಇಟ್ಟುಕೊಂಡು ಬಡತನದ ರೇಖೆಯಲ್ಲಿರತಕ್ಕ ಜನ ದಿನನಿತ್ಯ ಕೆಳಕ್ಕೆ ಹೋಗುತ್ತಿರುವಾಗ ನಾವು ಅವರನ್ನು ಏಕಾಏಕಿ ಸತ್ ಪ್ರಜೆಗಳಾಗಿ ನೀವು ಬಾಳಬೇಕೆಂದು ಎಷ್ಟು ವಿವೇಚನೆ ಹೇಳಿದರು ಅದು ಸಾಧ್ಯವಾಗುವುದಿಲ್ಲ. ಹೋದ ವರ್ಷ ಸ್ಟ್ರೈಕ್ ಆಯಿತು. ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ಇಂಟಲಿಜೆನ್ಸ್ ಎಂದು ಇದೆ. ಇದರಲ್ಲಿ ಅವರಿಗೆ ಇಂಥ ಕಡೆ ರಾಜ್ಯದಲ್ಲಿ ಇಂಥ ಕಾರಣಕ್ಕೋಸ್ಕರ ಗೊಂದಲವಾಗಬಹುದು ಎಂದು ತಿಳಿದುಕೊಳ್ಳುವುದಕ್ಕೆ ಇದ್ದಾರೆ. ನಮ್ಮ ಇಂಟಲಿಜೆನ್ಸ್ ಏನು ಕೆಲಸಮಾಡುತ್ತಿದಿಯೋ ಗೊತ್ತಿಲ್ಲ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಕೆಜಿಎಫ್.ನಲ್ಲಿ ನಕ್ಸಲಿಸ್ಟ್ ಕೈವಾಡವಿದೆ ಎಂದು ಹೇಳಿದರು. ಹೇಳಿದ ತಕ್ಷಣ ನಾನು ಯೋಚನೆ ಮಾಡಿದೆ. ನಕ್ಸಲಿಟ್ ಕೈವಾಡ ಇದೆ ಎನ್ನುವುದು ಮೊದಲು ಗೊತ್ತಿರಲಿಲ್ಲವೇ. ಹಾಗಾದರೆ ಈ ಇಂಟಲಿಜೆನ್ಸ್ ಏನು ಕೆಲಸ ಮಾಡುತ್ತಿದೆ. ಇಂಟಲಿಜೆನ್ಸ್ ಎಂದರೆ ರಾಮಾಯಣದಲ್ಲಿ ಒಂದು ಕಡೆ ಉಲ್ಲೇಖನ ಮಾಡಿದ್ದಾರೆ. ಹೇಗೆ ಇಂಟಲಿಜೆನ್ಸ್ ಇತ್ತು ಎಂದು. ರಾವಣ ಒಬ್ಬ ದೂತನನ್ನು ಕಳುಹಿಸಿಕೊಡುತ್ತಾರೆ. ರಾಮನ ಸೈನ್ಯ ಎಷ್ಟಿದೆ ನೋಡಿಕೊಂಡು ಬಾ ಎಂದು, ಅವನನ್ನು ಕಳುಹಿಸುವುದರ ಜೊತೆಗೆ ಅವರು ಸರಿಯಾಗಿ ನೋಡುತ್ತಾನೋ ಇಲ್ಲವೋ ಎಂದು ಇಬ್ಬರನ್ನು ಕಳುಹಿಸುತ್ತಾನೆ. ಅವನು ಬಂದು ಸರಿಯಾಗಿಯೇ ಹೇಳುತ್ತಾ. ಅವನು ಹೇಳತಕ್ಕಂಥದ್ದು ಸರಿ ಎನ್ನುವುದಕ್ಕೆ ಚಕ್ ಅಂಡ್ ಕೌಂಟರ್ ಚೆಕ್ ಇರಬೇಕು. ಯಾವನೋ ಬಂದು ಸುಳ್ಳು ಹೇಳಿದರೆ ತಲೆ ತೆಗೆಸುತ್ತಿದ್ದ. ಇಲ್ಲಿ ಏನು ಹೇಳಿದರೂ ತಲೆ ಹೋಗುವುದಿಲ್ಲ. ಏನೇನು ಡಿಸ್ಟರ್‌ಬೆನ್ಸ್ ಇಲ್ಲ. ಏನು ಚಳುವಳಿ ಇಲ್ಲವೆಂದು ಹೇಳಿರುತ್ತಾರೆ. ಶಿವಮೊಗ್ಗದಲ್ಲಿ ರೈತರು ಸರಿಯಾಗಿದ್ದಾರೆ, ಎಲ್ಲ ಸುಖವಾಗಿದ್ದಾರೆಂದರೆ, ರಥ ಮುಂದಕ್ಕೆ ನಡೆಯಲಿ, ಪ್ರಜೆಗಳು ಸುಭಿಕ್ಷವಾಗಿದ್ದಾರೆಂದು ಇಂಟಲಿಜೆನ್ಸ್‌ನವರು ನಕ್ಸಲಿಟ್ ಕೋಲಾರದಲ್ಲಿ ಇದ್ದಾರೆ ಎಂದು ಹೇಳುತ್ತಾರೆ, ಎಂದರೆ, ನಮ್ಮ ಇಂಟಲಿಜೆನ್ಸ್‌ಗೆ ಎಷ್ಟು ಬೆಲೆ ಕಟ್ಟಬಹುದು. ನಕ್ಸಲಿಟ್ ಎಂದರೆ ಅವರ ಮೂವ್‌ಮೆಂಟ್ ಗೊತ್ತಾಗುತ್ತದೆ. ಅವರು ಯಾರೂ ಇಲ್ಲ. ವಿನಾಕಾರಣ ಹುಚ್ಚಾ ಬಟ್ಟೆ ಫೈರಿಂಗ್ ಮಾಡಿರುತ್ತಾರೆ. ಅಲ್ಲಿಯ ಜನ ಪೋಲೀಸಿನವರು ನಮ್ಮ ಕೇರಿಗೆ ಬಾರದಂತೆ ತಡೆಯುವುದೇ ನಮ್ಮ ಕೆಲಸವೆಂದು ಹೇಳಿ ಕಲ್ಲುಗಳನ್ನು ಅಡ್ಡ ಹಾಕಿಕೊಂಡು ಕುಳಿತಿದ್ದಾರೆ. ಅವರು ನಕ್ಸಲಿಸ್ಟ್ ಮೂವ್‌ಮೆಂಟ್‌ನಿಂದ ಪೋಲೀಸ್‌ನವರು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದರೆ ಅವರು ಅದನ್ನು ಚೆಕ್ ಅಂಡ್ ಕೌಂಟರ್ ಚೆಕ್ ಮಾಡಿ ನಕ್ಸಲಿಸ್ಟ್ ಇದ್ದಾರೆಂದು ಹೇಳುತ್ತಾರೆಯೋ? ನರಗುಂದ ಮತ್ತು ನವಲಗುಂದ್‌ನಲ್ಲಿ ಏನು ಕಂಡಿರಿ, ನಾಗಸಮುದ್ರದಲ್ಲಿ ಏನು ಕಂಡಿರಿ. ಪೋಲೀಸ್ ಡಿಪಾರ್ಟ್‌ಮೆಂಟ್ ಅವರು ಹೇಳಿರುವ ಪ್ರಕಾರವಾಗಿ ಏನೋ ೫ ಹಂತದಲ್ಲಿ ಇದನ್ನು ಸುಧಾರಣೆ ಮಾಡಬೇಕು ಇದರಲ್ಲಿ ನಾಲ್ಕು ಹಂತಗಳು ಮುಗಿದಿದೆ ಎಂದು ಹೇಳಿದರು. ಈ ನಾಲ್ಕು ಹಂತ ಮುಗಿದ ಮೇಲೆ ಬೆಂಗಳೂರು ಇಡೀ ಭಾರತದಲ್ಲಿ ಕ್ರೈಮ್ ರೈಟ್ ಜಾಸ್ತಿಯಾಗಿ ಇರುತ್ತದೆ, ಮದ್ರಾಸ್, ಅಹಮದಾಬಾದ್, ಡೆಲ್ಲಿ, ಕೆಳಗಡೆ ಆಫೀಸ್‌ಗಳನ್ನು ಹೋಲಿಸಿ ನೋಡಿದರೆ ಇದು ನಾಲ್ಕು

ಹಂತಗಳನ್ನು ಸುಧಾರಣೆ ಮಾಡಿದ ಮೇಲೂ ಕ್ರೈಮ್ ರೈಟ್ಸ್ ಜಾಸ್ತಿಯಾಗಿದೆ. ಮದ್ರಾಸ್‌ನಲ್ಲಿ ೫೦ ಪೋಲೀಸ್ ಸ್ಟೇಷನ್‌ಗಳು ಇದ್ದರೆ ಬೆಂಗಳೂರಿನಲ್ಲಿ ೭೫ ಪೋಲೀಸ್ ಸ್ಟೇಷನ್‌ಗಳು ಇದ್ದಾವೆ. ನಮ್ಮ ಪೋಲೀಸ್ ಸಂಖ್ಯೆ ೪೧ ಸಾವಿರದ ೧೮೩ಕ್ಕೆ ಹೋಗಿದೆ. ಇಷ್ಟೊಂದು ಪೋಲೀಸ್ ಸಂಖ್ಯೆಯನ್ನು ನಮ್ಮ ರಾಜ್ಯದಲ್ಲಿ, ಬೆಂಗಳೂರು ನಗರದಲ್ಲಿ ಇಟ್ಟುಕೊಂಡಿದ್ದರೂ ಅಪರಾಧಿಗಳ ಸಂಖ್ಯೆ ಏರುತ್ತಲೇ ಇದೆ. ಇದಕ್ಕೆ ನಾವು ಬರೀ ಪೋಲೀಸ್‌ನವರು ಕಾರಣರು ಎಂದರೆ ತಪ್ಪಾಗುತ್ತದೆ. ಪೋಲೀಸ್ ಮಾಫಿಯಾ ಗೂಂಡಾಗಳ ಅಂಡರ್ ವರ್ಲ್ಡ್, ಕೆಳ ಪ್ರಪಂಚದಲ್ಲೇ ಇರತಕ್ಕಂಥ ಜನ ಮತ್ತು ರಾಜಕೀಯ ರಕ್ಷಣೆ, ಇವು ಮೂರು ಹೊಂದಿಕೊಂಡು ಹೋಗದೆ ಇರತಕ್ಕಂಥ ಯಾವ ನಾಗರೀಕನಿಗೂ ರಕ್ಷಣೆಯೇ ಇಲ್ಲ. ಕೆಲವು ಪ್ರದೇಶಗಳಲ್ಲಿ ಸಂಜೆಯಾದರೆ ತಿರುಗಾಡುವುದಕ್ಕೆ ಕಷ್ಟಪರಿಸ್ಥಿತಿ ಬಂದಿದೆ. ಅಂದರೆ ಇಷ್ಟೆಲ್ಲಾ ಹೇಳಿದ ಮೇಲೆ ನಾವು ಈವತ್ತು ಕೇಳುತ್ತಿರುವುದೇನೆಂದರೆ ಜನರಿಗೆ ಪ್ರಾಣಭಯ, ಅವರು ಅವರ ಮನೆಗಳಲ್ಲಿಯಾದರೂ ಸುಖವಾಗಿರುವುದಕ್ಕೆ ಆಗುತ್ತಿಲ್ಲ ಎನ್ನುವ ಸ್ಥಿತಿ ಬಂದರೆ ಏತಕ್ಕೆ ರಕ್ಷಣಾ ದಳ ಇರುವುದು? ತಾವು ಒಂದು ಕಡೆ ಪೋಲೀಸ್ ಸಂಖ್ಯೆಯನ್ನು ಜಾಸ್ತಿ ಮಾಡತಕ್ಕಂಥದ್ದು ಇದೆ. ಆದರೆ ಜನರಿಗೆ ರಕ್ಷಣೆ ಸಿಗುತ್ತಿಲ್ಲ ಪೋಲೀಸ್ ಎಲ್ಲಿ ಹೋಗುತ್ತಿದೆ, ಏತಕ್ಕೆ ಹೋಗುತ್ತಿದೆ ಎಂದರೆ ಬಹಳವಾಗಿ ಪೋಲೀಸಿನವರು ಅವರ ಮೇಲೆ ಅಧಿಕಾರಿಗಳ ಮನೆ ಬಟ್ಟೆ ಒಗೆಯುವುದಕ್ಕೆ, ಅವರ ಹುಡುಗರನ್ನು ಪಾಠಶಾಲೆಗಳಿಗೆ ಕರೆದುಕೊಂಡು ಹೋಗುವುದಕ್ಕೆ, ಅವರ ಕಾರನ್ನು ತೊಳೆಯುವುದಕ್ಕೆ, ಆ ಮೇಲೆ ಮಿನಿಸ್ಟರುಗಳ ಮನೆ ಬಾಗಿಲನ್ನು ಕಾಯುವುದಕ್ಕೆ ಬಳಸುತ್ತಿದ್ದಾರೆ. ಇಷ್ಟೇ ಅಲ್ಲದೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿಯೂ ಅಷ್ಟೇ, ಇದೇ ಸ್ಥಿತಿಯಲ್ಲಿ ನಡೆಯುತ್ತಿದೆ.

ಪೋಲೀಸ್ ಪೇದೆಗಳು ಬೇಕಾಗಿರುವ ಕಡೆ ಅವರ ಸೇವೆಯನ್ನು ಉಪಯೋಗಿಸಿಕೊಳ್ಳುವುದು ನ್ಯಾಯ. ಜನರಿಗೆ ಎಲ್ಲಿ ಪೋಲೀಸರು ಬೇಕು, ಅಲ್ಲಿ ಅವರು ಸಿಗುವುದಿಲ್ಲ, ಬೇಡವಾಗಿರುವ ಕಡೆಗಳಲ್ಲಿ ಪೋಲೀಸ್ ಪೇದೆಗಳು ಇರುತ್ತಾರೆ. ಈಗ ವಿಧಾನಸೌಧದ ಸುತ್ತಾ ಪೋಲೀಸ್‌ನವರನ್ನು ಇಟ್ಟಿದ್ದಾರೆ, ನಾವು ಬರಬೇಕಾದರೆ ಜೈಲಿಗೆ ಬಂದಹಾಗೆ ಬರಬೇಕು ಇಲ್ಲಿ ಪೋಲೀಸ್‌ನವರನ್ನು ಏತಕ್ಕೆ ಇಟ್ಟುಕೊಳ್ಳಬೇಕು. ಹೆಚ್ಚು ಕಡಿಮೆ ಜೈಲಿಗೆ ಹೋಗಬಹುದು ವಿಧಾನಸೌಧಕ್ಕೆ ಬರುವುದಕ್ಕಾಗುವುದಿಲ್ಲ. ಇದು ಜನಸಾಮಾನ್ಯರು ಬರತಕ್ಕ ಸ್ಥಳ ಕೆಲವು ವೇಳೆ ನಿಕಾಲ್ ಮಾಡಬೇಕು. ಇಷ್ಟೆಲ್ಲಾ ನಿಗ ಮಾಡಿದರೂ ಕೆಲಸ ಮಾಡಿರುವುದು ಎಷ್ಟು ಎನ್ನುವುದು ಗೊತ್ತಿಲ್ಲ. ಇವುಗಳಿಂದ ಜನರ ಮನಸ್ಸಿಗೆ ಒಂದು ಭಯದ ವಾತಾವರಣ ಬರುತ್ತದೆ. ವಿಧಾನಸೌಧದ್ದು ಇರಲಿ, ಶ್ರೀಕಂಠಯ್ಯನವರ ಮನೆಯ ಹತ್ತಿರ ಪೋಲೀಸು ಅವರ ಹಿಂದುಗಡೆ ಮುಂದುಗಡೆ ಪೋಲೀಸ್, ಧರ್ಮಸಿಂಗ್‌ರವರ ಮನೆಯ ಹತ್ತಿರ ಪೋಲೀಸ್ ಅವರ ಹಿಂದುಗಡೆ ಮುಂದುಗಡೆ ಪೋಲೀಸ್, ಎಲ್ಲಾ ಕಡೆ ಪೋಲೀಸ್ ಏತಕ್ಕೆ ಬೇಕು ? ನಿಮಗೆ ಯಾರು ಅಟ್ಯಾಕ್ ಮಾಡುತ್ತಾರೆ ? ಎಲ್ಲರೂ ನಿಮ್ಮ ಹತ್ತಿರವೇ ಇದ್ದಾರೆ. ಚಾಕು, ಚೂರಿ ಹಾಕುವವರು ನಿಮ್ಮ ಹತ್ತಿರ ಇದ್ದಾರೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನೀವು ಬರುತ್ತೀರಿ ಎಂದು ;

ಶ್ರೀ ಜೆ. ಎಚ್. ಪಟೇಲ್.—ನಾನು ಬರುವುದಕ್ಕಲ್ಲ ನೀವು ಎಲ್ಲೆಲ್ಲಿ ಹೋಗುತ್ತೀರೋ ಅಲ್ಲಿ ಹಿಡಿದುಕೊಳ್ಳುತ್ತಾರೆಂದು ಭಯ. ನನಗೆ ಭಯವಿಲ್ಲ. ಪೋಲೀಸ್ ಸ್ಟಾಫ್‌ನ್ನು ಏತಕ್ಕೋಸ್ಕರ ಈ ರೀತಿ ಹೆಚ್ಚಿಸಿಕೊಂಡಿದ್ದೀರಿ ? ಅವರು ಯಾರೇ ಆಗಿರಲಿ. ಹಿಂದೆ ಐ.ಜಿ. ಎಂದು ಒಬ್ಬರು ಇದ್ದರು ಅವರು ಎಲ್ಲವನ್ನು ನೋಡಿಕೊಳ್ಳುತ್ತಿದ್ದರು. ಅದೇ ರೀತಿ ನೀವೀಗ ೨೦ ಚೀಫ್ ಇಂಜಿನೀಯರ್‌ಗಳನ್ನು ಸೃಷ್ಟಿ ಮಾಡಿದ್ದೀರಿ. ನೀವು ಎಷ್ಟು ಜನ ಸೃಷ್ಟಿ ಮಾಡಿದರೂ ಅವರು ದುಡ್ಡು ಮಾಡುವುದು ಮಾಡೇ ಮಾಡುತ್ತಾರೆ. ಕೆಲಸ ಮಾತ್ರ ಮಾಡುವುದಿಲ್ಲ. ಹೊಸ ಹುದ್ದೆಗಳನ್ನು ಯಾರು ಸೃಷ್ಟಿ ಮಾಡಿದವರು ? ಅದನ್ನು ಯಾರೇ ಮಾಡಿರಲಿ ಅದು ತಪ್ಪು. ಒಬ್ಬ ಡೈರೆಕ್ಟರ್ ಜನರಲ್ ಆಫ್ ಪೋಲೀಸ್, ಏಳೆಂಟು ಅಡಿಶನಲ್ ಐ.ಜಿ. ಸ್ಪೆಷಲ್ ಐ.ಜಿ. ಮತ್ತು ಡಿ.ಐ.ಜಿ. ಇವರನ್ನು ನೋಡಿಕೊಂಡು ಹೋಗುವುದರಲ್ಲಿ ಸಾಕಾಗುತ್ತದೆ. ಇವರು ಆ ರೀತಿ ಬೋರ್ಡು ಹಾಕಿಕೊಳ್ಳುವುದಕ್ಕೆ ಏನಾಗುತ್ತದೆ ಅಂದರೆ ಯಾರಿಗೆ ಪ್ರಮೋಷನ್ ಸಿಗುವುದಿಲ್ಲ ಆತ ಯೋಗ್ಯತೆ ಇಲ್ಲದಿದ್ದರೂ ಅದಕ್ಕೆ ಒಂದು ಜಾತಿ ಕಟ್ಟುತ್ತಾನೆ. ನಾನು ಈ ಜಾತಿ ಯಾಗಿರುವುದರಿಂದ ನನಗೆ ಪ್ರಮೋಷನ್ ಕೊಟ್ಟಿಲ್ಲ, ಆತನಿಗೆ ಪ್ರಮೋಷನ್ ಕೊಡಲಿಕ್ಕೆ ಯೋಗ್ಯತೆ ಇರಲಿ ಇಲ್ಲದೆ ಇರಲಿ, ಅವನು ಆ ಜಾತಿಯಾಗಿರುವುದರಿಂದ ಪ್ರಮೋಷನ್ ಸಿಕ್ಕಿತು ಎಂದು ಇವೆಲ್ಲಾ ನಡೆಯುತ್ತಿವೆ. ಸಾಮಾನ್ಯ ಜನರ ಹಿತರಕ್ಷಣೆಯ ದೊಡ್ಡ ಅಧಿಕಾರಿಗಳು ಭ್ರಷ್ಟರು ಎಂದು ಭಾವಿಸಿಕೊಳ್ಳಬಾರದು. ಅವರಿಗೆ ನೇರವಾಗಿ ಏನೂ ಬರುವುದಿಲ್ಲ, ಒಬ್ಬ ಡಿ.ಐ.ಜಿ, ಯಾರನ್ನಾದರೂ

ದುಡ್ಡು ಕೊಡಿ ಎಂದು ಕೇಳುವುದಕ್ಕಾಗುವುದಿಲ್ಲ. ಆದುದರಿಂದ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಕಲೆಕ್ಟ್ ಮಾಡಿ ಕಳುಹಿಸಿಕೊಡುತ್ತಾರೆ. ಮಟಕ, ಸೂಳೇಗಾರಿಕೆ, ಜೂಜು, ಕಳ್ಳಭಟ್ಟಿ ಇವು ನಾಲ್ಕು ಸತತವಾಗಿ ಬೆಳೆದುಕೊಂಡು ಬರಲಿಕ್ಕೆ ಕಾರಣ ಅವರಿಂದ ತಿಂಗಳಿಗೆ ಇಷ್ಟು ಎಂದು ದುಡ್ಡು ಕಲೆಕ್ಟ್ ಮಾಡುತ್ತಾರೆ. ಇವು ಸಮಾಜದ ರೋಗಗಳು, ಯಾತಕ್ಕೆ ಬೆಳೆದುಕೊಂಡು ಬಂದಿವೆ ಅಂದರೆ ಈ ರೋಗದಿಂದ ಹುಟ್ಟತಕ್ಕ ಹಣದಿಂದ ರಾಜ್ಯಭಾರ ಅವಲಂಭಿಸಿದೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಒಬ್ಬ ಸಬ್‌ಇನ್‌ಪೆಕ್ಟರ್ ಆತನ ಹೆಸರು ಹೇಳುವುದಿಲ್ಲ, ಆತನನ್ನು ನಾನು ಕಾನ್ಫಿಡೆನ್ಸಿಲ್ಲಾಗಿ ತೆಗೆದುಕೊಂಡು ದುಡ್ಡು ಯಾವರೀತಿ ಕಲೆಕ್ಟ್ ಮಾಡುತ್ತೀರಿ ಅದನ್ನು ಯಾರಿಗೆ ಕೊಡುತ್ತೀರಿ ಎಂದು ಕೇಳಿದ್ದಕ್ಕೆ, ಆತ ಹೇಳಿದ ಮಟಕಾದಿಂದ ತಿಂಗಳಿಗೆ ೩ ಸಾವಿರ ರೂಪಾಯಿ ಬರುತ್ತದೆ ೧ ಸಾವಿರ ರೂಪಾಯಿಗಳನ್ನು ಸೂಪರ್ ಇನ್‌ಟೆಂಡೆಂಟ್ ಆಫ್ ಪೋಲೀಸ್ ಅವರಿಗೆ ಕೊಡುತ್ತೇವೆ ಉಳಿದ ೨ ಸಾವಿರ ರೂಪಾಯಿಗಳನ್ನು ನಾವು ಐದಾರು ಜನ ನಾನೂರು ಐನೂರು ಈ ರೀತಿ ಹಂಚಿಕೊಳ್ಳುತ್ತೇವೆಂದು ಹೇಳಿದ. ಪೋಲೀಸ್ ಸೂಪರ್ ಇನ್‌ಟೆಂಡೆಂಟ್ ಆಫ್ ಪೋಲೀಸ್ ಯಾರು ಇದ್ದರೂ ಎಂದು ಹೇಳುವುದು ಬೇಡ. ವಾಸ್ತವವಾಗಿ ಬಂದ ರಿಪೋರ್ಟ್. ಎಸ್.ಪಿ. ಯಾರಿದ್ದರೂ ಇದು ನಡೆಯುತ್ತದೆ. ಇನ್ನೊಬ್ಬರು ಆಪ್ತರಾದವರು ಬಂದರು ಅವರನ್ನು ಕೇಳಿದೆ ಅವರು ಒಬ್ಬ ಎಸ್.ಪಿ.ಗೆ, ನಮ್ಮ ಶಿವಮೊಗ್ಗ ಜಿಲ್ಲಾ ಎಸ್.ಪಿ.ಗೆ ತಿಂಗಳಿಗೆ ೨೫ ಸಾವಿರ ರೂಪಾಯಿ ಬರುತ್ತದೆ. ಎಲ್ಲಿಂದ ಬರುತ್ತದೆ ಎನ್ನುವ ನಿಜಾಂಶವನ್ನು ಹೇಳಲಿಲ್ಲ. ವಾಸ್ತವವಾಗಿ ಸಮಾಜದ ರೋಗಗಳಾದ ಮಟಕಾ, ಕಳ್ಳಭಟ್ಟಿ ಜೂಜು ಮತ್ತು ಸೂಳೇಗಾರಿಕೆ ಇವುಗಳಿಂದ ಹಣ ಧಾರಾಳವಾಗಿ ಇವರುಗಳಿಗೆ ಬರುತ್ತಿದೆ. ಮಟಕಾವನ್ನು ಪೋಷಿಸಿಕೊಂಡು ಬರತಕ್ಕಂತಹ ಒಂದು ಸುಭದ್ರವಾದ ವ್ಯವಸ್ಥೆಯನ್ನು ನಾವು ಇವತ್ತು ನೋಡುತ್ತಿದ್ದೇವೆ. ಅವುಗಳ ವಿರುದ್ಧ ಏನಾದರೂ ಪ್ರಯತ್ನ ಮಾಡಿದರೆ ನಮ್ಮ ಮೈಮೇಲೆ ಗೂಬೆ ಕೂರಿಸಿ ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗುತ್ತಾರೆ. ಅವರ ವಿರುದ್ಧ ಯಾರೂ ಮಾತನಾಡುವ ಹಾಗೆ ಇಲ್ಲ. ರಾಷ್ಟ್ರ ಮತ್ತು ರಾಜ್ಯದಲ್ಲಿ ಇದೊಂದು ದುರಾದೃಷ್ಟ. ಇವುಗಳನ್ನು ವಿರೋಧ ಮಾಡುವ ಹಾಗೆ ಇಲ್ಲ. ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಪೋಲೀಸ್‌ನವರೇ ಇಷ್ಟೊಂದು ಜನ ಏತಕ್ಕೆ ಬೇಕು ? ಹಳ್ಳಿಗಾಡಿನ ಪ್ರದೇಶಗಳಲ್ಲೂ ಇವರ ಧಾಳಿ ಜಾಸ್ತಿಯಾಗಿದೆ. ಪೋಲೀಸ್‌ನವರು ಅವರೇನು ಮನುಷ್ಯರಲ್ಲವೇ ಹೌದು ಅವರು ಮನುಷ್ಯರು. ಪೋಲೀಸ್ ಪೇದೆಗಳು ಬಡತನದಲ್ಲಿ ಬೆಂದು ಸಾಕಾಗಿ ಅವರ ಮೇಲಾಧಿಕಾರಿಗಳ ಹಿಂಸೆ ತಾಳಲಾರದೆ ಅವರ ಮನಸ್ಸಿನಲ್ಲಿರತಕ್ಕ ಸಿಟ್ಟು ಈ ಬಡಜನರ ಮೇಲೆ ಹರಿದುಹೋಗುತ್ತದೆ. ಯಾರ ಮೇಲಾದರೂ ಹರಿದುಹೋಗುತ್ತದೆ. ಕಾರ್ಮಿಕರ ಮೇಲೆ, ರೈತರ ಮೇಲೆ, ವಿದ್ಯಾರ್ಥಿಗಳ ಮೇಲೆ ಅವರ ಸಿಟ್ಟು ವಿಕಾರವಾಗಿ ಹರಿದುಹೋಗುತ್ತದೆ. ಇದು ಮುಖ್ಯಮಂತ್ರಿಗಳ ಇಲಾಖೆ ಅವರು ಏನೂ ತೊಂದರೆ ಇಲ್ಲವೆಂದು ಹೇಳುತ್ತಿದ್ದಾರೆ. ಪೋಲೀಸ್‌ನವರು ನಮ್ಮಲ್ಲಿ ಇಷ್ಟೊಂದು ಜನ ಇದ್ದರೂ ಬಾರ್ಡರ್ ಸೆಕ್ಯುರಿಟಿ ಮತ್ತು ಸೆಂಟ್ರಲ್ ರಿಸರ್ವ್ ಪೋಲೀಸ್ ಏತಕ್ಕೆ ಕರೆಸುತ್ತೀರಿ ? ನಿಮ್ಮ ಕೈಯ್ಯಲ್ಲಿ ಹತೋಟಿಗೆ ತರುವುದಕ್ಕಾಗುವುದಿಲ್ಲವೇ ? ಬಾರ್ಡರ್ ಸೆಕ್ಯುರಿಟಿ ಮತ್ತು ಸೆಂಟ್ರಲ್ ರಿಸರ್ವ್ ಪೋಲೀಸ್‌ನವರನ್ನು ಕರೆಸಿದರೆ ಅವರಿಗೆ ಹಣ ಕೊಡಬೇಕು. ಸಾವಿರಾರು ರೂಪಾಯಿ ಹಣ ಕೊಟ್ಟು ಹೊಡೆಲಿಯಕ್ಕೆ ಅವರನ್ನು ಕರೆಸುತ್ತೀರಾ ? ಬೇರೆ ರಾಜ್ಯದವರನ್ನು ಕರ್ನಾಟಕ ರಾಜ್ಯದಲ್ಲಿ ಹೊಡೆಯುವುದಕ್ಕೆ ದುಡ್ಡು ಕೊಟ್ಟು ಕರೆದುಕೊಂಡು ಬರುತ್ತೀರಿ. ಇಲ್ಲಿಯವರು ಆದರೆ ಗುರುತಿಸಿ ಹೊಡೆಯುವುದನ್ನು ಕಡಿಮೆ ಮಾಡುತ್ತಾರೆಂದು ಈ ರೀತಿ ಮಾಡುತ್ತೀರಾ ? ನಲ್ಲೂರಿನಲ್ಲಿ ಹೊಡೆದಿದ್ದಾರೆ ಮನುಷ್ಯರು ನೋಡುವುದಕ್ಕೆ ಆಗದ ಹಾಗೆ ಹೊಡೆದಿದ್ದಾರೆ. ಸೆಂಟ್ರಲ್ ರಿಸರ್ವ್ ಮತ್ತು ಬಾರ್ಡರ್ ಸೆಕ್ಯುರಿಟಿಯವರನ್ನು ಕರೆಸಿ ನಮ್ಮ ಜನರನ್ನು ಹೊಡಿಸಿದ್ದೀರಿ. ಹೊಡೆಯುವುದಕ್ಕೆ ದುಡ್ಡು ಕೊಟ್ಟಿದ್ದೀರಿ. ನಮ್ಮ ರಾಜ್ಯದ ಪೋಲೀಸ್‌ನವರ ಎಫಿಷಿಯೆನ್ಸಿಯ ಸಂಕೇತ. ಹಿಂಸೆಯಾಗುವ ಕಡೆ ಜನಗಳಿಗೆ ಹೊಡೆತ ಬೀಳುತ್ತದೆ, ಕೆಲವು ಕಡೆ ಪೋಲೀಸ್‌ನವರಿಗೂ ಹೊಡೆತ ಬೀಳುತ್ತದೆ. ಆದ್ದರಿಂದ ಸಾರ್ವಜನಿಕರು ಮತ್ತು ಪೋಲೀಸ್‌ನವರಲ್ಲಿ ಒಂದು ಸೌಹಾರ್ದ ಮೂಡಲಿಕ್ಕೆ ಗಲಾಟೆಯ ಮೂಲವನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ''ಸಾರ್ವಜನಿಕ ಹಿತರಕ್ಷಣಾ ಸಮಿತಿ'' ಮಾಡಲಿಕ್ಕೆ ಏರ್ಪಾಡು ಮಾಡುತ್ತೀರಾ ? ಸಮಾಲೋಚನ ಸಮಿತಿ ತರಹ ಜನಗಳ ಸಮಸ್ಯೆಗಳನ್ನು ತಿಳಿದುಕೊಳ್ಳುವುದಕ್ಕೆ ಮತ್ತು ಪೋಲೀಸ್‌ನವರ ಸಮಸ್ಯೆಗಳನ್ನು ತಿಳಿದುಕೊಂಡು ಹತೋಟಿಗೆ ತರುವುದಕ್ಕೆ ಸಾರ್ವಜನಿಕ ಪ್ರತಿನಿಧಿಗಳಿಂದ ಮತ್ತು ಪೋಲೀಸ್‌ನವರಿಂದ ಕೂಡಿದ ಒಂದು ಸಮಿತಿಯನ್ನು ಮಾಡಿದರೆ ಸಮಾಜದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಒಂದು ಸಮಿತಿಯನ್ನು ಮಾಡಿದ್ದೆ ಆದರೆ ಸಮಸ್ಯೆಗಳು ಬಗೆಹರಿಯುತ್ತವೆ. ಮಾನ್ಯ ಗಟ್ಟಿಚಂದ್ರಶೇಖರ್‌ರವರು ಮಾತನಾಡುವಾಗ ಒಂದು ಮಾತು

ಹೇಳಿದರು, ಗುಂಡು ಇರುವುದು ಏತಕ್ಕೆ ಗುಂಡು ಹೊಡೆಯಲಿಕ್ಕೆ ಎಂದು ಹೇಳಿದರು, ಎಲ್ಲಿಯತನಕ ಗುಂಡು ಹೊಡೆಯುತ್ತೀರಿ ? ನಿಮ್ಮ ಗುಂಡು ಮುಗಿಯುವ ತನಕ ಹೊಡೆಯುತ್ತೀರಿ ಆಮೇಲೆ ಜನ ಶುರು ಮಾಡುತ್ತಾರೆ. ಪೋಲೀಸ್ ಮತ್ತು ಜನರ ಮಧ್ಯೆ "ಸಾರ್ವಜನಿಕ ಹಿತರಕ್ಷಣಾ ಸಮಿತಿ'' ಮಾಡಿದರೆ ಒಳ್ಳೆಯದು. ಏಕೆಂದರೆ ಗಲಾಟೆಯಾದ ಮೇಲೆ ಕ್ರಮ ಕೈಗೊಳ್ಳುವುದಕ್ಕಿಂತ ಗಲಾಟೆಯಾಗ ದಂತೆ ಸರಿಪಡಿಸತಕ್ಕಂತಹ ಪೂರ್ವಭಾವಿ ಆಲೋಚನೆ ಮಾಡತಕ್ಕ ಸಮಿತಿ ಇದ್ದರೆ ಬರತಕ್ಕ ಸಮಸ್ಯೆ ಗಳನ್ನು ಬಗೆಹರಿಸಬಹುದು. ಆ ಸಮಿತಿಯನ್ನು ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಮಾಡ ಬೇಕೆಂದು ಹೇಳುತ್ತೇನೆ. ಮೊನ್ನೆ ಕನ್ನಡ ಚಳುವಳಿ ಗೋಕಾಕ್ ವರದಿ ಬಗ್ಗೆ ನಡೆಯಿತು. ಚಳುವಳಿ ಆಗುವ ಕಡೆಗಳಲ್ಲಿ ಪೋಲೀಸ್‌ನವರು ಮತ್ತು ಜನಗಳ ಮಧ್ಯೆ ಘರ್ಷಣೆಯಾಗದಂತೆ ನೋಡಿಕೊಳ್ಳುವು ದಕ್ಕೆ ಪ್ರಯತ್ನ ಮಾಡಬೇಕು. ಅಂತಹ ಘಟನೆ ನಡೆಯದಾಗೆ ನಿವಾರಣೆ ಮಾಡಲು ಪ್ರಯತ್ನ ಮಾಡ ಬೇಕು. ಫೈರಿಂಗ್ ಮಾಡಿ ಹೆಣ ಕೆಡಹುವುದು ಬೇಡ ನಾಗಸಮುದ್ರದಲ್ಲಿ ಬಸಪ್ಪ, ನಟರಾಜ್‌ರವರನ್ನು ಕೊಲ್ಲುವ ಅವಶ್ಯಕತೆ ಇರಲಿಲ್ಲ. ಅವರು ತಪ್ಪು ಮಾಡಿದ್ದರೆ ಶಿಕ್ಷೆಯಾಗುತ್ತದೆ. ನೀವು ಈ ರೀತಿ ಮಾಡುವುದರಿಂದ ಬೇರೆ ಲೋಕಕ್ಕೆ ಹೋಗುತ್ತೀರಿ. ಪಾಪ ಮಾಡಿದವರು ನರಕಕ್ಕೆ, ಪುಣ್ಯ ಮಾಡಿದವರು ಸ್ವರ್ಗಕ್ಕೆ ಹೋಗುತ್ತಾರೆ ಎಂದು ಹೇಳುತ್ತಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಪಾಪ ಮಾಡುವುದ ರಿಂದ ನೀವು ಬೇರೆ ಇನ್ನೊಂದು ಲೋಕಕ್ಕೆ ಹೋಗುತ್ತೀರಿ. ಅಂತಹ ಒಂದು ಸ್ಥಳ ಇರಬಹುದು. ಅದು ಮೂರನೇ ಜಗತ್ತು.

ಶ್ರೀ ಪರಪ್ಪ ಕಳ್ಳೀಗುಡ್ಡ.—ನೀವು ಅಲ್ಲಿಗೆ ಹೋಗಬಹುದೆಂದು ಕಾಣುತ್ತದೆ.

ಶ್ರೀ ಜೆ. ಎಚ್. ಪಟೇಲ್.—ನೀವು ಮೊದಲು ಅಲ್ಲಿಗೆ ಹೋದ ಮೇಲೆ ನಾವು ಬರುತ್ತೇವೆ. ಇನ್ನು ವಾರ್ಷಿಕ ವರದಿ ಮೇಲೆ ಹೆಚ್ಚು ನಾನು ಹೇಳುವುದಿಲ್ಲ. ಮುಖ್ಯ ಮಂತ್ರಿಗಳಿಗೆ ಸೇರಿದ ಬೇಡಿಕೆಗಳ ಬಗ್ಗೆ ಈಗಾಗಲೇ ನನ್ನ ಸ್ನೇಹಿತರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ರಾಜಕೀಯದ ಬಗ್ಗೆ ಇಲ್ಲಿ ಮಾತನಾಡುವುದಿಲ್ಲ. ಚುನಾವಣೆ ಸಮಯದಲ್ಲಿ ಯಾವ ಪಾರ್ಟಿ ಏನು ಮಾಡಿದೆ ಮತ್ತು ಯಾವ ಪಾರ್ಟಿ ಅಧಿಕಾರಕ್ಕೆ ಬರುತ್ತದೆಂಬುದನ್ನು ಮಾತನಾಡೋಣ. ಇಲ್ಲಿ ನಮ್ಮ ರಾಜ್ಯದ ಸರ್ವಾಂಗೀಣ ಆಡಳಿತದಲ್ಲಿ ಪೋಲೀಸ್ ಒಂದು ಅಂಗ ಮಾತ್ರ. ನಮ್ಮ ಸಾರ್ವಾಂಗೀಣ ಆಡಳಿತ ವನ್ನು ನೋಡಬೇಕಾದರೆ ಮತ್ತು ನಮ್ಮ ರಾಜ್ಯದ ಆಡಳಿತ ವೈಖರಿಯನ್ನು ನೋಡಬೇಕಾದರೆ ತಾಲ್ಲೂಕ್ ಮಟ್ಟದಲ್ಲಿರುವ ತಾಲ್ಲೂಕ್ ಕಛೇರಿಗೆ, ಒಂದು ಆಸ್ಪತ್ರೆಗೆ, ಸಬ್-ರಿಜಿಸ್ಟ್ರಾರ್ ಕಛೇರಿಗೆ ಮತ್ತು ಪೋಲೀಸ್ ಸ್ಟೇಷನ್‌ಗೆ ಹೋದರೆ ಸಾಕು. ಏಕೆಂದರೆ ಅನ್ನ ಬೆಂದಿದೆಯೋ ಅಥವಾ ಇಲ್ಲವೋ ಎಂದು ತಿಳಿಯಬೇಕಾದರೆ ಒಂದೊಂದು ಅಗಳನ್ನೂ ನೋಡಬೇಕಾಗಿಲ್ಲ; ಒಂದು ಅಗಳನ್ನು ನೋಡಿದರೆ ಸಾಕಾಗು ತ್ತದೆ. ಅದೇರೀತಿ ನಾವು ತಾಲ್ಲೂಕ್ ಮಟ್ಟದ ಆಡಳಿತವನ್ನು ಉದಾಹರಣೆಯಾಗಿ ನೋಡಿದರೆ ಸಾಕಾಗು ತ್ತದೆ. ನಾನು ವಿಧಾನಸೌಧದಲ್ಲಿರುವ ಮೂರನೆಯ ಮಹಡಿಯಲ್ಲಿ ಏರ್-ಕಂಡಿಷನ್ ಛೇಂಬರ್‌ನಲ್ಲಿ ಕೂತು ಆಳವಾಗಿ ಆಲೋಚನೆ ಮಾಡುವ ಅಧಿಕಾರಿಗಳ ಬಗ್ಗೆ ಹೇಳುವುದಿಲ್ಲ. ಏಕೆಂದರೆ, ಅವರಿಗೆ ಜವಾಬ್ದಾರಿ ಇರುತ್ತದೆ, ಅದರಂತೆ ಕೆಲಸ ಮಾಡುತ್ತಾರೆ. ಆದರೆ ಹೊಳೆನರಸೀಪುರ ಚೆನ್ನಗಿರಿ ಮುಂತಾದ ಕಡೆ ಇರುವ ಧೂಳು ತುಂಬಿರುವ ತಾಲ್ಲೂಕ್ ಕಛೇರಿಗಳು, ಹೋದ ತಕ್ಷಣವೇ ಜನರ ಜೇಬಿಗೆ ಕೈಹಾಕುವ ಸಬ್ ರಿಜಿಸ್ಟ್ರಾರ್ ಕಛೇರಿಗಳು. ದೂರು ಕೊಡಲು ಹೋದವರನ್ನೇ ಹಿಡಿದು ಹೊಡೆಯುವ ಪೋಲೀಸ್ ಸ್ಟೇಷನ್‌ಗಳನ್ನು ನೋಡಿದಾಗ ನಮ್ಮ ಆಡಳಿತ ಯಾವ ರೀತಿ ಇದೆ ಎಂಬುದನ್ನು ತಿಳಿದುಕೊಳ್ಳಬಹುದು. ಫೈಲ್ ಕ್ಲಿಯರೆನ್ಸ್ ಆಯಿತೆಂದು ಹೇಳುತ್ತಾರೆ. ಯಾವ ಫೈಲ್; ಏನು ಕಥೆ; ಜನರ ಫೈಲ್ ಇನ್ನೂ ಕ್ಲಿಯರ್ ಆಗಿಲ್ಲ. ಸರ್ಕಾರಕ್ಕೆ ಬಾರದಿರುವಂತಹ ಕೋಟಿಗಟ್ಟಲೆ ಫೈಲ್‌ಗಳಿವೆ. ವಿಧಾನಸೌಧಕ್ಕೆ ಬಂದಂಥ ಫೈಲ್‌ಗಳನ್ನು ಇವರು ಕ್ಲಿಯರ್ ಮಾಡಿರಬಹುದು. ಆದರೆ ವಿಧಾನಸೌಧಕ್ಕೆ ಬಾರದಿರುವಂತಹ ಫೈಲ್‌ಗಳನ್ನು ಸಹ ಕ್ಲಿಯರ್ ಮಾಡಬೇಕು. ತಾಲ್ಲೂಕ್ ಕಛೇರಿಯಲ್ಲಿ ಕೆಲಸವಾಗದಂಥ ಮತ್ತು ಪೋಲೀಸ್ ಸ್ಟೇಷನ್‌ನಲ್ಲಿ ಹೊಡೆತ ತಿಂದು ಅಳುತ್ತಾ ಬೇರೆ ಮಾರ್ಗವಿಲ್ಲದೆ ನಿರಾಶರಾಗಿರುವಂತಹ ಜನರ ಫೈಲ್‌ಗಳನ್ನು ಯಾವಾಗ ಕ್ಲಿಯರ್ ಮಾಡುತ್ತೀರಿ? ನೀವು ಮತ್ತು ನಿಮ್ಮ ಸಹೋದ್ಯೋಗಿಗಳು ಫೈಲ್ ಗಳನ್ನು ಕ್ಲಿಯರ್ ಮಾಡಿರಬಹುದು, ಅಥವಾ ಮಾಡದಿರಬಹುದು. ಅದರ ಕಥೆಯನ್ನೆಲ್ಲಾ ನಾನು ಹೇಳುವುದಿಲ್ಲ. ಜನತೆಗೆ ಒಳ್ಳೆಯ ಸರ್ಕಾರ ಕೊಟ್ಟಿದ್ದೇವೆಂದು ಹೇಳುತ್ತೀರಿ; ಎಲ್ಲಿ ಕೊಟ್ಟಿದ್ದೀರಿ? ತಾವು ತಮ್ಮ ಹೃದಯ ಬಿಚ್ಚಿ ಹೇಳಿ; ನಿಮ್ಮ ಪಕ್ಷ ಚುನಾವಣೆಯಲ್ಲಿ ಗೆಲ್ಲಬಹುದು; ಆದರೆ ಅದು ಬೇರೆ ಮಾತು. ಆದರೆ ಗೆಲ್ಲುತ್ತೇವೆಂಬ ಒಂದೇ ಕಾರಣಕ್ಕೋಸ್ಕರ ನೀವು ಮಾಡಿದ್ದೆಲ್ಲಾ ಸರಿಯಲ್ಲವೆನ್ನುವುದಕ್ಕೆ

ನೀವು ನಿಮ್ಮ ನಿಮ್ಮ ತಾಲ್ಲೂಕ್ ಕಛೇರಿಗೆ, ಸಬ್–ರಿಜಿಸ್ಟ್ರಾರ್ ಕಛೇರಿಗೆ, ಪೋಲೀಸ್ ಸ್ಟೇಷನ್‌ಗೆ ಹಾಗೂ ಆಸ್ಪತ್ರೆಗಳಿಗೆ ಹೋಗಿ ನೋಡಿಕೊಂಡು ಬನ್ನಿ . ಅಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದು ತಮಗೆ ತಿಳಿಯುತ್ತದೆ. It has come to a grinding halt.

ಇನ್ನು ವಿದ್ಯುಚ್ಛಕ್ತಿ ಮತ್ತು ನೀರಾವರಿ ಯೋಜನೆಗಳ ಕೆಲಸಗಳು ಹಣವಿಲ್ಲದ ಕಾರಣ ಅರ್ಧಕ್ಕೇ ನಿಂತಿವೆ. ಒಂದು ಕಡೆ ಮಾಡಿದ ಕೆಲಸಗಳಿಗೆ ಹಣ ಕೊಟ್ಟಿಲ್ಲ ಮತ್ತೊಂದು ಕಡೆ ಮಾಡಬೇಕಾದ ಕೆಲಸಕ್ಕೆ ಹಣ ಇಲ್ಲದೆ ಕೆಲಸ ನಿಂತಿದೆ. ಅಂದರೆ ನಾವು ಪಾಪರ್ ಆಗಿದ್ದೇವೆಂದು ಬಹಳ ದುಃಖದಿಂದ ಹೇಳುತ್ತೇನೆ. ತಾವು ತಮ್ಮ ಒಂದು ಆತ್ಮತೃಪ್ತಿಗೆ ಹಿಂದಿನ ಸರ್ಕಾರಕ್ಕಿಂತ ನಾವು ಹೆಚ್ಚು ಹಣ ಖರ್ಚು ಮಾಡಿದ್ದೇವೆಂದು ಹೇಳಬಹುದು. ಆದರೆ ಇದು ಜನತೆಗೆ ವಂಚನೆ ಮಾಡಿದ ಮಾತಾಗುತ್ತದೆ. ಈ ರಾಜ್ಯದ ಸ್ಥಿತಿ ಚೆನ್ನಾಗಿಲ್ಲ, ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ; ಈ ಕಾರಣದಿಂದ ನಮ್ಮ ಯೋಜನೆಗಳೆಲ್ಲಾ ಅರ್ಧಕ್ಕೆ ನಿಂತಿವೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಹೇಳಬೇಕೆಂದರೆ, ಶ್ರೀ ಭಟ್ ಅವರ ಬಗ್ಗೆ ಕೆಲವರು ಮಾತ ನಾಡಿದ್ದಾರೆ. ನಿಷ್ಠಾವಂತ ಅಧಿಕಾರಿಗಳಿಗೆ ಸ್ಥಾನವಿಲ್ಲ ಎನ್ನುವುದಕ್ಕೆ ಇದೊಂದು ಉದಾಹರಣೆ ಸಾಕು. ನಿಷ್ಠಾವಂತ ಅಧಿಕಾರಿಗಳ ಪೈಕಿ ಶ್ರೀ ಕೃಷ್ಣಭಾರ್ಗವ ಕೂಡ ಒಬ್ಬರು. ಇವರು ಹಿಂದುಳಿದ ಜಾತಿಯವರೆಂಬ ಕಾರಣದಿಂದ ನಾನು ಇಲ್ಲಿ ಹೇಳುತ್ತಿಲ್ಲ. ಆದರೆ ಇವರು meritorious ಕೆಲಸ ಮಾಡಿದ್ದಾರೆ. ಉತ್ತಮವಾದಂಥ ಇನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಈ ಸಂಸ್ಥೆಯನ್ನು ಇವರು ಚೆನ್ನಾಗಿ ಬೆಳೆಸುವುದನ್ನು ಕೆಲವರು ನೋಡಲಾರದೆ ಅವರ ಬಗ್ಗೆ ಏನು ಏನೋ ಸಂಚು ಮಾಡಿ ಮುಖ್ಯ ಮಂತ್ರಿಗಳ ಮನಸ್ಸನ್ನು ಕೆಡಿಸಿ ಅವರನ್ನು ಅಲ್ಲಿಂದ ತೆಗೆಯಲು ಹೊರಟ್ಟಿದ್ದಾರೆ. ಇತರು ಒಳ್ಳೆಯ ಕೆಲಸ ಮಾಡಿದರೆ ರಿವಾರ್ಡ್ ಸಿಗುತ್ತದೆಂಬ ಪ್ರಶ್ನೆ ಇವರಿಗೆ ಮುಖ್ಯವಲ್ಲ. ಒಟ್ಟಿನಲ್ಲಿ ಇವರ ಆಡಳಿತದಲ್ಲಿ ಕಾಕಾ ಮಾಡುವವರಿಗೆ ಮತ್ತು ಚಮಚಾಗಿರಿ ಮಾಡುವವರಿಗೆ ಮನ್ನಣೆ ಸಿಗುತ್ತದೆಯೋ ಹೊರತು ಮೆರಿಟ್‌ಗಲ್ಲ, ನಿಷ್ಠೆಗಲ್ಲ; ಸತ್ಯ ಹೇಳುವವರಿಗೆ ಬೆಲೆ ಇಲ್ಲವಾಗಿದೆ. ಭ್ರಷ್ಟಾಚಾರವನ್ನು ಹೋಗಲಾಡಿಸಿ ಎಂದು ನಾವು ಇಲ್ಲಿ ಅನೇಕ ಸಲ ಹೇಳಿದ್ದು ಅರಣ್ಯರೋದನವಾಗಿದೆ ಇವೊತ್ತು ಈ ಭ್ರಷ್ಟಾಚಾರ ಎಲ್ಲಿದೆ ಎಂದರೆ, ನಮ್ಮ ಸಮಾಜದ ಗರ್ಭದಲ್ಲಿದೆ, ನಾವು ವಾಸ ಮಾಡುವ ವ್ಯವಸ್ಥೆಯಲ್ಲಿದೆ, ನಾವು ಮಾಡಿರತಕ್ಕಂಥ ಕಟ್ಟುಪಾಡಿನಲ್ಲಿದೆ, ನಮ್ಮ ಕಾನೂನಿನಲ್ಲಿದೆ. ಕಾನೂನನ್ನು ಬರೆಯುವವರ ಮನಸ್ಸಿನಲ್ಲಿದೆ, ಕಾನೂನನ್ನು ಆಚರಣೆಯಲ್ಲಿ ತರುವವರ ಮನಸ್ಸಿನಲ್ಲಿದೆ. ಆದ್ದರಿಂದ ಇದನ್ನು ತೆಗೆಯು ವುದಕ್ಕಾಗುವುದಿಲ್ಲ ಮತ್ತು ಮುಟ್ಟುವುದಕ್ಕಾಗುವುದಿಲ್ಲ. ಮಾನ್ಯ ಸುಬ್ಬಯ್ಯನವರ ಮನೆಯಲ್ಲಿ ೬೦ ಲಕ್ಷ ರೂ. ಗಳು ಮತ್ತು ಮಾನ್ಯ ವೆಂಕಟರಮಣಪ್ಪನವರ ಮನೆಯಲ್ಲಿ ೩೦ ಲಕ್ಷ ರೂಪಾಯಿಗಳು ಸಿಕ್ಕಿತು ಎಂದು ಹೇಳುತ್ತಾರೆಯೋ ಹೊರತು ಅವರಿಗೆ ಏನು ಶಿಕ್ಷೆ ವಿಧಿಸಲಾಯಿತೆಂಬುದನ್ನು ಹೇಳುವುದಿಲ್ಲ. ಇವರಿಬ್ಬರಿಗೂ ಮರಣದಂಡನೆ ವಿಧಿಸಿ; ಆಗ ಬೇರೆಯವರಿಗೆ ಬುದ್ಧಿ ಬರುತ್ತದೆ ಶ್ರೀ ಗುಂಡೂರಾವ್ ಅವರಿಗೆ ನಿಷ್ಠೆ ತೋರಿಸಲು ಶ್ರೀಮತಿ ರೇಣುಕಾರಾಜೇಂದ್ರನ್ ಅವರು ರಾಜಿನಾಮೆ ಕೊಟ್ಟರೆಂದು ಹಾಗೂ ಇವರ ಕೇಸ್‌ನಲ್ಲಿ ಮುಖ್ಯ ಮಂತ್ರಿಗಳು ಮಧ್ಯ ಪ್ರವೇಶ ಮಾಡಲಿಲ್ಲವೆಂದು ಕೆಲವರು ಹೇಳು ತ್ತಾರೆ. ಇದು ಅವರ ಒಳ್ಳೆಯತನ ತೋರಿಸಿದರೂ ಸಹ ಇದಕ್ಕೆ ಅದೇ ರೆಮಿಡಿಯೇ? ಮುಖ್ಯ ಮಂತ್ರಿ ಗಳು ಯಾರಿಗೂ ಬೇದಭಾವ ಮಾಡುವುದಿಲ್ಲವೆನ್ನುವುದಕ್ಕೆ ಶ್ರೀ ಭಟ್ ಮತ್ತು ಶ್ರೀ ಕೃಷ್ಣಮೂರ್ತಿ ಅವರು ಬ್ರಾಹ್ಮಣರೇ ಆಗಿದ್ದರೂ ಸಹ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದು ಮತ್ತು ಶ್ರೀ ಇಬ್ರಾಹಿಂ ಅವರನ್ನು ಮತ್ತು ಶ್ರೀಮತಿ ರೇಣುಕಾರಾಜೇಂದ್ರನ್ ಅವರನ್ನು ಮಂತ್ರಿ ಮಂಡಲದಿಂದ ತೆಗೆದಿದ್ದು ಉದಾಹರಣೆಯಾಗಿದೆ ಎಂದು ಹೇಳುವುದು ಜನಸಾಮಾನ್ಯರ ಮನಸ್ಸಿಗೆ ಸರಿಯಾಗಿ ಕಂಡರೂ ಸಹ ಈ ಭ್ರಷ್ಟರ ಬಗ್ಗೆ ಏನು ಹೇಳುತ್ತೀರಿ? ಇವರಿಗೆ ಜಾತಿ ಇಲ್ಲ ಮತ್ತು ಭಾಷೆ ಇಲ್ಲ. ಇಂತಹವರಿಗೆ ಮೊದಲು ಶಿಕ್ಷೆಯಾಗಬೇಕು. Justive must not only be done, but see to be done. ನೀವು ಶ್ರೀ ಭಟ್ ಕೇಸ್‌ನಲ್ಲಿ ಮತ್ತು ಶ್ರೀ ಕೃಷ್ಣಮೂರ್ತಿ ಕೇಸ್‌ನಲ್ಲಿ ಅನ್ಯಾಯ ಮಾಡಿದ್ದೀರಿ ಎಂಬುದು ಜನರ ಮನಸ್ಸಿನಲ್ಲಿದೆ. ಇದನ್ನು ತಾವು ಹೋಗಲಾಡಿಸಬೇಕು. ತಾವು ಅಧಿಕಾರ ವಹಿಸಿಕೊಂಡಾಗ ಇನ್ನು ಒಂದು ವಾರದಲ್ಲಿ ಪತ್ರಿಕೆಗಳಲ್ಲಿ ಕಾಳಸಂತೆಕೋರರ ಫೋಟೋಗಳನ್ನು ಹಾಕಿಸುವುದಾಗಿ ಹೇಳಿದಿರಿ. ಆದರೆ ಒಂಟೊಂಟಿಯಾಗಿ ಇವರ ಫೋಟೋಗಳು ಬರಲಿಲ್ಲ. ಆದರೆ ಇವರುಗಳೆಲ್ಲಾ ಸೇರಿಕೊಂಡು ಶ್ರೀ ವೀರಪ್ಪಮೊಯ್ಲಿ ಅವರಿಗೆ, ಶ್ರೀ ಶ್ರೀಕಂಠಯ್ಯನವರಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಸನ್ಮಾನ ಮಾಡಿದ ಸಂದರ್ಭದಲ್ಲಿ ತೆಗೆದಂಥ ಫೋಟೋಗಳು ಬಂದವು. ಕಳ್ಳ ಮಾರಾಟಗಾರರು ಮತ್ತು ಸ್ಮಗಲರ್ಸ್ ಮಂತ್ರಿಗಳ ಜೊತೆಯಲ್ಲಿರುವಂತಹ ಫೋಟೋಗಳು ಪತ್ರಿಕೆಗಳಲ್ಲಿ ಬಂದರೆ ಪೋಲೀಸಿನವರು ಯಾರನ್ನು

ಹಿಡಿಯಬೇಕು? ಮಂತ್ರಿಗಳನ್ನು ಹಿಡಿಯಬೇಕೇ ಅಥವಾ ಅವರನ್ನು ಹಿಡಿಯಬೇಕೇ? ನಿಮಗೆ ಮನಸ್ಸು ನಿಜವಾಗಿಯೂ ಇದ್ದರೆ ಅದರಂತೆ ಮಾಡುವುದಕ್ಕೆ ಮಾರ್ಗವಿದೆ. ಆದರೆ ನಿಮ್ಮ ಕೈಯಲ್ಲಿ ಮಾಡಲು ಸಾಧ್ಯವಿಲ್ಲ. ಹಿಂದೆ ಇದ್ದವರ ಕೈಯಲ್ಲಿ ಸಹ ಇದನ್ನು ಮಾಡಲು ಆಗಲಿಲ್ಲ, ನಮ್ಮ ಕೈಯಲ್ಲಿಯೂ ಆಗುವುದಿಲ್ಲ ಮುಂದೆ ನೀವು ಅಧಿಕಾರಕ್ಕೆ ಬಂದರೆ ನಿಮ್ಮ ಕೈಯಲ್ಲಿಯೂ ಆಗುವುದಿಲ್ಲವೆಂದು ತಾವು ತಮ್ಮ ಉತ್ತರದಲ್ಲಿ ಹೇಳಬಹುದು. ಯಾವುದನ್ನು ನಿಮ್ಮ ಕೈಯಲ್ಲಿ ಸಂಪೂರ್ಣವಾಗಿ ನಿಲ್ಲಿಸುವುದಕ್ಕಾಗುವುದಿಲ್ಲವೋ ಅದಕ್ಕೆ ಒಂದೇ ಮಾರ್ಗ ಇರುವುದು; ಏನೆಂದರೆ, ಎರ್ರ್ಯಾಡಿಕೇಟ್ ಮಾಡಿ ಇಲ್ಲವೇ ಸ್ಪೀಡ್–ಅಪ್ ಮಾಡಿ. ಈಗ ಚುನಾವಣೆ ಹತ್ತಿರ ಬರುತ್ತಿದೆಯಾದ ಕಾರಣ ಎರಡು ಕೋಟಿ ರೂಪಾಯಿಗಳನ್ನು ತಂದು ಕೊಡಿ ಎಂದು ಮೆಡಿಕಲ್ ಕಾಲೇಜ್‌ನವರಿಗೆ ಮತ್ತು ಇಂಜಿನಿಯರಿಂಗ್ ಕಾಲೇಜ್‌ನವರಿಗೆ ತಾವು ಹೇಳಿದ್ದೀರೆಂಬ ವರ್ತಮಾನ ಬಂದಿದೆ. ಇಂಥಾದ್ದನ್ನು ತಾವು ಟೆಲಿಫೋನ್ ಮೂಲಕ ಹೇಳುವುದಕ್ಕೆ ಬದಲು ಕುಲ್ಲಂಕುಲ್ಲಾ ಹೇಳಿ. ತಾವು ಓಪನ್ ಆಗಿ ಕಲೆಕ್ಟ್ ಮಾಡಿದರೆ ನಾವೂ ಸಹ ಜನರಿಗೆ ಹೇಳಬಹುದು. ಭ್ರಷ್ಟಾಚಾರ ಎಲ್ಲ ಮಟ್ಟದಲ್ಲಿಯೂ ಇದೆ, ಇದು ವಾಸ್ತವಿಕವಾದಂಥ ಅಂಶವೆಂದು ನಾವೂ ಸಹ ಜನತೆಗೆ ಹೇಳಬಹುದು.

೧೨-೦೦ ಮಧ್ಯಾಹ್ನ

ನಾನು ತಮಗೆ ವಾಸ್ತವಿಕವಾದ ಅಂಶವನ್ನು ಹೇಳುತ್ತಾ ಇಲ್ಲ, ಏತಕ್ಕೆಂದರೆ ನನಗೆ ಗಾಬರಿಯಾಗುತ್ತಾ ಇದೆ. ಈಗ ಇದರಲ್ಲಿ ಸೂಕ್ಷ್ಮತೆ ಅನ್ನುವುದು ಹೋಗುತ್ತಾ ಇದೆಯಲ್ಲಾ ಅದಕ್ಕೆ ನನಗೆ ಗಾಬರಿಯಾಗುತ್ತಾ ಇದೆ. ಎಲ್ಲಿ ನೋಡಲಿ ಅಲ್ಲಿ ಪೋಲೀಸ್ ಫೈರಿಂಗ್, ಅಲ್ಲಿ ಅಷ್ಟು ಜನ ಸತ್ತರು, ಇಲ್ಲಿ ಇಷ್ಟು ಜನ ಸತ್ತರು ಎನ್ನುವುದು ಮತ್ತು ಅಲ್ಲಿ ಸುಬ್ಬಯ್ಯನವರನ್ನು ಹಿಡಿದಿದ್ದರಿಂದ ೬೦ ಲಕ್ಷ ರೂಪಾಯಿ ಸಿಕ್ಕಿತು. ಇಲ್ಲಿ ಇಂಥಾವರನ್ನು ಹಿಡಿದಿದ್ದರಿಂದ ಇಷ್ಟು ಲಕ್ಷ ರೂಪಾಯಿ ಸಿಕ್ಕಿತು ಅನ್ನುವುದನ್ನು ನಾವು ಈಪೊತ್ತು ಕೇಳುತ್ತಾ ಇದ್ದೇವೆ. The very conscience is dying and now it is dead. ಈ ಸೂಕ್ಷ್ಮತೆ ಸತ್ತು ಹೋದ ಮೇಲೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಆವಾಗ ಈ ಜನರಿಗೆ ಸೂಕ್ಷ್ಮತೆ ಮತ್ತೆ ಬರಬೇಕಾದರೆ. ಅದಕ್ಕೆ ಮತ್ತೆ ಜೀವ ಬರಬೇಕಾದರೆ, ಯಾವುದರ ಮೇಲಾದರೂ ಯಾರ ಮೇಲಾದರೂ ಸರಿಯಾದಂಥ ಕ್ರಮ ತೆಗೆದುಕೊಂಡು ಅವರಿಗೆ ಶಿಕ್ಷೆ ಮಾಡಿದರೆ, ಆವಾಗ ಹೀಗೆ ತಪ್ಪು ಮಾಡಿದವರಿಗೆ ಶಿಕ್ಷೆ ಉಂಟಾಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಜನರಲ್ಲಿ ಈ ಒಂದು ವಿಶೇಷವಾದ ಕಾನಷಸ್‌ನೆಸ್ ಬರದೇ ಹೋದರೆ ನೀವೂ ಏನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಗೊಮ್ಮಟೇಶ್ವರನಿಗೆ ಹಾಲು, ತುಪ್ಪ ಹಾಕಿದಂತಾಗುತ್ತದೆ.

ಇಲ್ಲಿ ವಿಶ್ವ ಕನ್ನಡ ಸಮ್ಮೇಳನ ಮಾಡುತ್ತೇವೆ ಅಂತ ಹೇಳಿ ಅದಕ್ಕೆ ೬ ಕೋಟಿ ರೂಪಾಯಿ ಖರ್ಚು ಮಾಡಿದರೂ ಜನರಿಗೆ ಗೊತ್ತಾಗುವುದಿಲ್ಲ. ಈಗ ಏಷ್ಯನ್ ಕ್ರೀಡೆಯನ್ನು ಇಲ್ಲಿ ಮಾಡುತ್ತೇವೆಂತ ಮಾಡಿದ್ದಾರಲ್ಲಾ ಅದಕ್ಕೆ ೫೦೦೦ ಕೋಟಿ ರೂಪಾಯಿಯಷ್ಟು ಏನು ಖರ್ಚಾಗುತ್ತದೆ ಅದರಲ್ಲಿ ನಮ್ಮದೂ ೧೨೦ ಕೋಟಿ ರೂಪಾಯಿ ಖರ್ಚಾಗುತ್ತದೆ ಅಲ್ಲದೆ ನಮ್ಮ ಇಂಡಿಯಾಕ್ಕೆ ಒಂದು ಏರ್‌ಕಂಡೀಷನ್ ಸ್ವಿಮ್ಮಿಂಗ್ ಪೂಲ್ ಬೇಕು ಅಂತ ಅದಕ್ಕೆ ಬೇರೆ ೩೦ ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ, ನನ್ನ ದೃಷ್ಟಿಯಲ್ಲಿ ಹೇಳಬೇಕಾದರೆ ಇವೆಲ್ಲಾ ಏತಕ್ಕೆ ಬೇಕು. ಬೇಕಾಗಿಲ್ಲ. ನಮ್ಮ ದೇಶದಲ್ಲಿ ಸುಮಾರು ೪೦ ಪರ್ಸೆಂಟ್‌ನಿಂದ ೫೦ ಪರ್ಸೆಂಟ್‌ವರೆಗೆ ಬಿಲೋ ಪಾವರ್ಟಿ ಲೈನ್ ಇರುವಾಗ ಈ ಒಂದು ಸ್ವಿಮ್ಮಿಂಗ್ ಪೂಲ್ ಏತಕ್ಕೆ ಬೇಕು, ಇಲ್ಲಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿ ಏಷ್ಯನ್ ಕ್ರೀಡೆ ತಾನೇ ಏತಕ್ಕೆ ಮಾಡಬೇಕು, ಜನರಿಗೆ ಇದರಿಂದ ಏನು ಅನುಕೂಲವಾಗುತ್ತದೆ, ಬಿಲೋ ಪಾವರ್ಟಿ ಲೈನ್‌ನಲ್ಲಿರುವ ಜನರಿಗೆ ಯಾವುದಾದರೂ ಒಂದು ಅನುಕೂಲಕರವಾದಂಥಾ ಕೆಲಸವನ್ನು ಮಾಡಿಕೊಡುವ ಪ್ರಜ್ಞೆ ಬೇಡವೇ? Why are we dead? We are totally de d. There is nothing left in us to fight against the injustice. ಏನಾದರೂ ಹೇಳಬೇಕಾದರೆ ನಾನು ಈ ಸಮಯದಲ್ಲಿ ಪ್ರಧಾನ ಮಂತ್ರಿಗಳಾದ ಇಂದಿರಾಗಾಂಧಿಯವರ ಹೆಸರನ್ನು ಹೇಳಲು ಬಯಸುವುದಿಲ್ಲ, ಅದು ಯಾರ ಹೆಸರೇ ಇರಲಿ- ಈ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕಂಥಾ ಜನ ಯಾರೇ ಇರಲಿ ಬೆಂಗಳೂರಿನವರೇ ಇರಲಿ. ಚಿತ್ರದುರ್ಗದವರೇ ಇರಲಿ ಯಾವ ಜಿಲ್ಲೆಯವರೇ ಇರಲಿ, ಈ ಒಂದಕ್ಕೊಂದು ತಾರತಮ್ಯ ಬೇಡವೇ? ಈಪೊತ್ತು ತಾಜ್‌ಮಹಲ್ ಅನ್ನು ಕಟ್ಟಿಸಬೇಕಾದರೆ ಜನತಾ ಗೃಹಗಳನ್ನು ಕಟ್ಟಿಸಬೇಕಾದರೆ, ಪಂಚತಾರಾ ಬಿಲ್ಡಿಂಗ್ಸನ್ನು ಕಟ್ಟಿಸಬೇಕಾದರೆ ಅದು ಎಲ್ಲೇ

ಕಟ್ಟಿಸಬೇಕಾದರೂ ಅದಕ್ಕೆ ಒಂದಕ್ಕೊಂದು ತಾರತಮ್ಯ ಬೇಡವೇ? ಇದರ ಬಗ್ಗೆ ಏನಾದರೂ ಹೇಳಿದರೆ ಅವರು ಹಾಗೆ, ಅವರು ಹೀಗೆ ಮಾಡಿದರು ಅಂದರೆ, ಹಿಂದಿದ್ದವರು ಒಂಟೆ ತಿಂದರು ಅಂತ ನೀವು ಏತಕ್ಕೆ ಆನೆ ತಿನ್ನುವುದಕ್ಕೆ ಹೋಗಬೇಕು? ಹಿಂದಿದ್ದವರು ಯಾವುದರಲ್ಲಾದರೂ ಅನ್ಯಾಯ ಮಾಡಿದ್ದರೆ ಆ ಅನ್ಯಾಯವನ್ನು ನೀವು ಅದನ್ನೇ ಏತಕ್ಕೆ ಮಾಡಬೇಕು. ಅವರು ಮಾಡಿದ್ದನ್ನೇ ನಾವೂ ಮಾಡುವ ಅಂತ ಹೊರಟರೆ ಸಮಾಜದಲ್ಲಿರತಕ್ಕಂಥಾ ಅನ್ಯಾಯವನ್ನು ಯಾರು ಬಂದರೂ ಸರಿ ಮಾಡುವುದಕ್ಕಾಗುವುದಿಲ್ಲ ಪಾಪದ ಹೊರೆ ನಿಮ್ಮ ಮೇಲೆ ಬಿದ್ದಾಗ ನೀವು ಅನ್ಯಾಯ ಮಾಡುವುದಕ್ಕೆ ಹೋದಾಗ ಆ ಸಂದರ್ಭದಲ್ಲಿ ದೇವರು ನಮ್ಮನ್ನು ಇದಕ್ಕೆ ಕಳುಹಿಸಿದ್ದಾನೆ ಅಂತ ಏತಕ್ಕೆ ಹೇಳಬೇಕು, ದೈವಜ್ಞಾನಿಗಳು ಏನು ಮಾಡುತ್ತಾರೆ ಅನ್ನುವ ಬಗ್ಗೆ ಶ್ರೀ ಶೀರ್ನಾಳಿ ಚಂದ್ರಶೇಖರ್‌ರವರು ಕೆಲವು ಶ್ಲೋಕಗಳನ್ನು ಹೇಳಿದರು, ಮತ್ತೆ ಏನಾದರೂ ಶ್ಲೋಕ ಇದ್ದರೆ ಅದನ್ನು ಹೇಳುವುದಕ್ಕೆ ಅವರಿಗೇ ಬಿಟ್ಟಿದ್ದೇನೆ.

ಶ್ರೀ ಎಂ. ಎಸ್. ಶೀರನಾಳಿ ಚಂದ್ರಶೇಖರ್.—ಬಿಟ್ಟಿರುವ ಶ್ಲೋಕವನ್ನು ನಿಮಗೆ ವಹಿಸಿದ್ದೇನೆ, ಹೇಳಿ ಈ ಕಾಲದಲ್ಲಿ ಎಲ್ಲಿ ಹೋಗಿ ಮಂತ್ರ ಹೇಳಿದರೂ ೧೦ ರೂಪಾಯಿ ದಕ್ಷಿಣೆಯೂ ಕೊಡುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಈವಾಗ ಹೊಸ ಮಂತ್ರ ಹೇಳುವ ಅವಶ್ಯಕತೆ ಇಲ್ಲ. ಹಳೇ ಮಂತ್ರಗಳೇ ಸಾವಿರಾರು ಇವೆ. ಅದನ್ನೇ ಬಳಸಿದರೆ ಸಾಕು. ಆದುದರಿಂದ ನಾನು ಹೇಳುವುದೇನೆಂದರೆ ಈ ಸಮಾಜದಲ್ಲಿ ರೋಗರುಜಿನಗಳು ಅಂದರೆ ಆರ್ಥಿಕ ಮತ್ತು ಸಾಮಾಜಿಕ ರೋಗರುಜಿನಗಳು ಇವುಗಳು ಏನು ಇವೆ ಮೂಲತಃ ಏನು ಇವೆ ಆ ಮೂಲಕ್ಕೆ ಕೈಹಾಕಿ ಅವುಗಳಿಗೆ ಪರಿಹಾರ ಮಾರ್ಗವನ್ನು ಕಂಡು ಹಿಡಿಯುವುದಕ್ಕೆ ತಾವು ಪ್ರಯತ್ನ ಮಾಡದೇ ಹೋದರೆ ಬಹು ಕಷ್ಟವಾಗುತ್ತದೆ, ನಮ್ಮ ದೇಶದಲ್ಲಿ ಪೋಲೀಸ್ ಮತ್ತು ಸೈನ್ಯ ಇವೆರಡೂ ಬಹಳ ಮುಖ್ಯವಾದುದು. ಈ ಪೋಲೀಸ್ ಮತ್ತು ಸೈನ್ಯದ ಬಗ್ಗೆ ಒಂದು ಉದಾಹರಣೆ ಹೇಳಬೇಕಾದರೆ ನಮ್ಮ ಪೋಲೀಸ್ ಹೇಗೆ ಎಂದರೆ ಒಂದು ಭಾಗ ಮುಷ್ಟಿ ಇನ್ನೊಂದು ಭಾಗ ಪೋಲೀಸ್ ಇದ್ದ ಹಾಗೆ ಇದೆ, ಎಂದು ತಮ್ಮ ತೋಳನ್ನು ತೋರಿಸುತ್ತಾ ಹೇಳಿದರು ಮುಷ್ಟಿ ಎಂದರೆ ಯಾರಾದರೂ ನಮಗೆ ಅನ್ಯಾಯ ಮಾಡಿದರೆ ಆ ಅನ್ಯಾಯದ ವಿರುದ್ಧವಾಗಿ ಹೋರಾಡವುದಕ್ಕೆ ನಾವು ಒಂದು ಮುಷ್ಟಿ ಉಪಯೋಗಿಸಿ ಹೋರಾಡಬೇಕಾಗುತ್ತದೆ, ನಮಗೆ ಯಾರಾದರೂ ಮೋಸ ಮಾಡಿದರೆ ಅದಕ್ಕೆ ಮಾತ್ರ ನಾವು ಪೋಲೀಸ್ ಉಪಯೋಗಿಸಬೇಕಾಗುತ್ತದೆ. ಏತಕ್ಕೆಂದರೆ ಅದರ ವಿರುದ್ಧ ಹೋರಾಡೋಣ ಎಂದರೆ ನಮ್ಮ ತೋಳಿನಲ್ಲಿ ರಕ್ತವೇ ಇಲ್ಲ. ನಾವೇನು ಹೊರಡೋಣ, ಅದಕ್ಕೆ ನಾವು ಸೈನ್ಯವನ್ನು ಉಪಯೋಗಿಸುತ್ತೇವೆ. ಅದಕ್ಕೆ ಸೈನ್ಯ ಇರಬೇಕು ಅಂತ ಮಾಡಿದ್ದೇವೆ, ನಾವು ೧೮ ಭಾಗದಷ್ಟು ಹಣವನ್ನು ಈ ಸೈನ್ಯಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ನಾನು ಚೈನಾದೇಶಕ್ಕೆ ಹೋದ ವರ್ಷ ಹೋಗಿದ್ದಾಗ ನೋಡಿದೆ. ಅಲ್ಲಿ ದಾರಿಯಲ್ಲೆಲ್ಲೂ ಪೋಲೀಸಿನವರು ಇದ್ದುದು ನೋಡಲಿಲ್ಲ. ಸುಮಾರು ೪–೫ ಕಿಲೋಮೀಟರ್ ಒಳಗೆ ಬೂತ್ ಇದೆ. ಅಲ್ಲಿ ಟ್ರಾಫಿಕ್‌ನವರು ಮಾತ್ರ ಆ ಬೂತ್‌ನಲ್ಲಿ ಕೂತುಕೊಂಡು ಕಂಟ್ರೋಲ್ ಮಾಡುತ್ತಾರೆ. ನಮ್ಮಲ್ಲಿರುವ ಆರ್ಮಿ ನೋಡಿದರೆ ಇಷ್ಟೊಂದು ದೊಡ್ಡ ಸೈನ್ಯ ಪ್ರಪಂಚದಲ್ಲೇ ಇಲ್ಲ. ಆ ಚೈನಾ ದೇಶದಲ್ಲಿ ನೋಡಿದರೆ ಹೆಚ್ಚಿಗೆ ಪೋಲೀಸಿನವರೇ ಇಲ್ಲ, ಅವರಿಗೆ ಪೋಲೀಸೇ ಬೇಕಿಲ್ಲಾ. ಏತಕ್ಕೆಂದರೆ ನಾನು ಇಲ್ಲಿಯವರೆವಿಗೂ ನೋಡಿದ್ದೇನೆ, ಯಾರಿಗೆ ಸ್ವಂತ ಕಾರು ಇದೆಯೋ ಅವರೆಲ್ಲರೂ ಕೂಡ ನಿಗಾವಾಗಿಯೇ ಡ್ರೈವ್ ಮಾಡುತ್ತಾರೆ, ಯಾರು ಕೂಡ ಇಲ್ಲಿಯವರೆಗೆ ಒಂದು ಬಸ್ ಡಿಕ್ಕಿ ಆಯಿತು, ಕಾರ್ ಡಿಕ್ಕಿ ಆಯಿತು ಎಂದು ಕೇಳಿಲ್ಲಾ. ಹೀಗಿದ್ದರೆ ಪೋಲೀಸಿನವರು ಏತಕ್ಕೆ ಬೇಕು, ಅವರು ಇದಕ್ಕಾಗಿ ೧೦೫ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಆ ದೇಶದ ಜನಕ್ಕೆ ಎರಡು ಹೊತ್ತು ಅನ್ನ ಮತ್ತು ಬೇಕಾದ ಬಟ್ಟೆ ಇವುಗಳನ್ನು ಒದಗಿಸಿ ಕೊಟ್ಟಿದ್ದಾರೆ. ಆದುದರಿಂದ ಅಲ್ಲಿ ಕಳ್ಳತನವೇ ಆಗುವುದಿಲ್ಲ. ಅಲ್ಲಿ ಒಬ್ಬೊಬ್ಬರನ್ನೂ ನೋಡಿದರೆ ಒಬ್ಬರಿಗಿಂತ ಇನ್ನೊಬ್ಬರು ಜಾಸ್ತಿ ಅನ್ನುವ ಮಟ್ಟದಲ್ಲಿದ್ದಾರೆ, ಆದ್ದರಿಂದ ಅವರು ಈ ಕಳ್ಳತನಕ್ಕಾಗಲಿ ಕೊಲೆ ಮಾಡುವುದಕ್ಕಾಗಲಿ, ಸುಲಿಗೆ ಮಾಡ ವುದಕ್ಕಾಗಲಿ ಹೋಗುವುದಿಲ್ಲ. ಸಾಮಾನ್ಯವಾಗಿ ಜಗಳಗಳಾಗಲಿ ವ್ಯಾಜ್ಯಗಳಾಗಲಿ ಬರುವುದು ಏತಕ್ಕೆ, ಸಂಪನ್ಮೂಲಗಳಿಂದ ಮತ್ತು ಸ್ತ್ರೀಮೂಲಗಳಿಂದ ಈ ಸ್ತ್ರೀಮೂಲಗಳಿಂದ ವ್ಯಾಜ್ಯ ಬರುವುದು ಬಹಳ ಅಪರೂಪ. ಈ ಪ್ರಾಪರ್ಟಿ ಮೇಲೆ ಬರುವ ಕ್ರೈಮ್ಸ್ ಅಂತೂ ಇಲ್ಲವೇ ಇಲ್ಲ. ಆದುದರಿಂದ ಅಲ್ಲಿ ಕೋರ್ಟಿನಲ್ಲಿ ಕೆಲಸವೇ ಇಲ್ಲ. ಆ ಚೈನಾದ ಒಂದು ದೊಡ್ಡ ರಾಷ್ಟ್ರದಲ್ಲಿ ಈಗೀಗ ಕೋಕಾ ಕೋಲಾ ಉಪಯೋಗಿಸುತ್ತಿದ್ದಾರೆ ನಾನು ಈ ಬಗ್ಗೆ ಅವರನ್ನು ಕೇಳಿದಾಗ ಹೇಳಿದರು ಏನೆಂದರೆ ನಾವು ಮೊದಲು ಜನರಿಗೆ ಶುದ್ಧವಾದ ನೀರನ್ನು ಕುಡಿಯುವುದಕ್ಕೆ ಕೊಡುತ್ತಿದ್ದೆವು, ಈಗೀಗ ನಾವು ಕೋಕಾ ಕೋಲಾವನ್ನೂ ಉಪಯೋಗಿಸಿ ಜೀರ್ಣ ಮಾಡಿಸಿಕೊಳ್ಳುತ್ತೇವೆ ಜೊತೆಗೆ ಅದರ

ಮಾಲೀಕರನ್ನೂ ಜೀರ್ಣ ಮಾಡಿಕೊಳ್ಳುತ್ತೇವೆ ಎಂದು ಪ್ರೊಫೆಸರ್ "ಕೂ" ಹೇಳಿದರು. ಆದರೆ ಅಲ್ಲಿ ಒಂದು ಆಡಳಿತ ಪ್ರಜಾತಂತ್ರ ಆಡಳಿತ ಯಾವರೀತಿ ಕೆಲಸ ಮಾಡುತ್ತದೆ ಅನ್ನುವ ವಿಚಾರಕ್ಕೆ ಹೋಗುವುದು ಬೇಡ. ಈವೊತ್ತು ನಮ್ಮ ದೇಶದಲ್ಲಿ ನೋಡಿದರೆ ಈ ಪ್ರಜಾಪ್ರಭುತ್ವದಲ್ಲಿ ಜನರಿಗೆ ಸಾಮಾಜಿಕ ರಕ್ಷಣೆ ಏನು ಇರಬೇಕೋ ಅದು ಇಲ್ಲ. ನಿಮಗೆ ಇರತಕ್ಕಂಥಾ ಸೌಲಭ್ಯ ಏನೆಂದರೆ ಗುಂಡಿಟ್ಟು ಹೊಡೆಯುವುದು. ಈವೊತ್ತಿನ ದಿವಸ ಜನರು ಗುಂಡಿನಿಂದ ಬದುಕಬೇಕಾಗಿದೆ ಈ ಒಂದು ಸಿದ್ಧಾಂತದಿಂದ ಬದುಕಬೇಕಾಗಿದೆ. ಇಡೀ ಜಗತ್ತಿನಲ್ಲಿ ಒಂದು ಕಾಲದಲ್ಲಿ ಪ್ರಭಾವ ಬೀರತಕ್ಕಂಥಾವರು ಇಬ್ಬರು ಇದ್ದರು ಒಬ್ಬರು ಹಿಟ್ಲರ್ ಇನ್ನೊಬ್ಬರು ಮಹಾತ್ಮಾಗಾಂಧಿ. ಹಿಟ್ಲರ್ ಯಾವಾಗಲೂ ಆಟಂಬಾಂಬಿನಲ್ಲೇ ಮುಗಿಸುತ್ತಿದ್ದ. ಹಿಟ್ಲರ್ ಮಾಡುತ್ತಿದ್ದ ಹಿಂಸೆ ಜಗತ್ತಿಗೆಲ್ಲಾ ಗೊತ್ತಿದೆ. ಆ ಹಿಂಸೆಯಿಂದ ಏನೂ ಆಗಲಿಲ್ಲ, ಆಮೇಲೆ ಮಹಾತ್ಮಾ ಗಾಂಧಿಯವರು ನಮ್ಮ ದೇಶಕ್ಕೆ ಏನು ಬಂದರೂ ಅವರು ನಮಗೆ ಆಟಂಬಾಂಬ್ ಬೇಡ ನಮ್ಮ ದೇಶದಲ್ಲಿ ಸಮಾಜ ಸುಧಾರಣೆ ಮಾಡಬೇಕಾದರೆ ಆರ್ಥಿಕವಾಗಿ ಸಾಮಾಜಿಕವಾಗಿ ಅಭಿವೃದ್ಧಿ ಮಾಡಬೇಕಾದರೆ ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ಸ್ ಇರಬೇಕು, ಸ್ಮಾಲ್‌ಸ್ಕೇಲ್ ಯೂನಿಟ್ಸ್ ಇರಬೇಕು, ಗಾಂಧಿ ಚರಕ, ಖಾದಿ ಚರಕ ಇವೆಲ್ಲ ಇರಬೇಕು, ನಾವು ಅಹಿಂಸೆಯಿಂದಲೇ ಹೋದರೆ ಇವೆಲ್ಲಾ ಸಾಧನೆ ಮಾಡಬಹುದು ಎಂದರು. ಆದರೆ ಈವೊತ್ತಿನ ದಿವಸ ನೋಡಿದರೆ ಮಹಾತ್ಮಾಗಾಂಧಿ ಹೆಸರಿನಲ್ಲಿ ಜೀವನ ಮಾಡತಕ್ಕಂಥಾವರು, ಶ್ರೀಮಾನ್ ಗಟ್ಟಿ ಚಂದ್ರಶೇಖರ್‌ರವರು ಗುಂಡೂರಾಯರ ಒಂದು ಆಧಾರದ ಮೇಲೆ ಬದುಕವಂಥಾವರು...

ಶ್ರೀ ಗಟ್ಟಿ ಚಂದ್ರಶೇಖರ್.—ಸ್ವಾಮಿ, ನಮ್ಮ ಹತ್ತಿರ ಗುಂಡು ಇಲ್ಲ, ಗುಂಡು ಇರುವುದು ನಿಮ್ಮ ಹತ್ತಿರವೇ. ನಾವು ಇಂದಿರಾಗಾಂಧಿಯವರ ರಾಜಕೀಯದಲ್ಲಿದ್ದೇವೆ. ನಿಮ್ಮನ್ನು ನೋಡಿದರೆ ದೇಶದಲ್ಲಿ ನಿಮ್ಮ ಲೀಡರ್ ಅನಿಸಿಕೊಳ್ಳುವವರು ಯಾರೂ ಇಲ್ಲವಲ್ಲಾ, ಆದುದರಿಂದ ನಮ್ಮ ಮೇಲೆ ಏನಾದರೂ ಭಕ್ತಿ ಇದ್ದರೆ ಅದನ್ನು ನಿಮ್ಮ ಮನಸ್ಸಿನಲ್ಲೇ ಇಟ್ಟುಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್.—ಇದೇನೂ ಪಾಯಿಂಟ್ ಆಫ್ ಆರ್ಡರ್ ಅಲ್ಲ, ನಾನು ಚೈನಾದ ದೇಶದ ಒಂದು ಉದಾಹರಣೆಯನ್ನು ಕೊಟ್ಟೆ ಅಲ್ಲಿ ನೋಡಿದರೆ ಯಾವ ವಿಧವಾದಂಥಾ ಮತೀಯ ಗಲಭೆಗಳೂ ಇಲ್ಲವಾದ್ದರಿಂದ ಯಾವ ಅಪರಾಧಗಳೂ ಬರುವುದಿಲ್ಲ, ನಮ್ಮಲ್ಲಿ ಕಮ್ಯೂನಲ್ ರಯಟ್ಸ್ ಇರುವುದರಿಂದ ಏಕದಂ ಗುಂಡು ಹಾರಿಸುತ್ತಾರೆ, ಇದನ್ನು ಕಂಟ್ರೋಲ್ ಮಾಡುವುದಕ್ಕೆ ಪೋಲೀಸಿನವರಿಂದಲೂ ಆಗುವುದಿಲ್ಲ. ಅದಕ್ಕೋಸ್ಕರವಾಗಿ ಈ ಧಾರ್ಮಿಕ ಮತ್ತು ಸಾಮಾಜಿಕವಾಗಿ ಅದರಲ್ಲಿ ಬೇರೆ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಈ ಸರ್ಕಾರಿ ಅಧಿಕಾರಿಗಳನ್ನು ಕೆಲವು ಧಾರ್ಮಿಕ ಸಂಸ್ಥೆಗಳಲ್ಲಿ ಇದ್ದಾರೆಂದು ಕೇಳಿದ್ದೇನೆ. ಅದು ನಿಜವೇ?

ವಾಕ್ಫ್ ಬೋರ್ಡಿನಲ್ಲಿ ಕೆಲವು ಜನ ಪೋಲೀಸ್ ಅಧಿಕಾರಿಗಳು ಇದ್ದಾರೆಂದು ಕೇಳಿದ್ದೇನೆ. ಇದು ಸರಿಯಲ್ಲ. ನಾನು ವೈಯುಕ್ತಿಕವಾಗಿ ಯಾವ ಅಧಿಕಾರಿಯ ಬಗ್ಗೆ ಹೇಳುವುದಿಲ್ಲ. ಇಂಥ ಧಾರ್ಮಿಕ ಸಂಸ್ಥೆಗಳಲ್ಲಿ ಪೋಲೀಸ್ ಅಧಿಕಾರಿಗಳು ಇರಬಾರದು. ಅದು ಯಾವುದೇ ಜಾತೀಯ ಸಂಸ್ಥೆಯಾಗಿರಲೀ ತಾವು ಜಾತೀಯ ಅಧಿಕಾರಿಗಳನ್ನು ಹಾಕಿದರೆ ಅನುಕೂಲವಾಗುತ್ತದೆನ್ನುವ ಅಭಿಪ್ರಾಯವನ್ನು ಬಿಡಬೇಕು. ತಾವು ಈ ರೀತಿಯಾಗಿ ಮಾಡುವುದರಿಂದ ಜಾತೀಯ ಅಧಿಕಾರಿಗಳು ಈ ಅನುಕೂಲವನ್ನು ಉಪಯೋಗಿಸಿಕೊಂಡು ಅನುಕೂಲಕ್ಕಿಂತ ಅನಾಹುತ ಮಾಡುವುದಕ್ಕೆ ಅವಕಾಶವಾಗುತ್ತದೆ.

ಕೊನೆಯದಾಗಿ, ಪೋಲೀಸ್ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇದನ್ನು ತಾವು ಸರಿಯಾದ ರೀತಿಯಲ್ಲಿ ಜೋಡಿಸಬೇಕು. ಬರಿ ದೊಡ್ಡ ತಲೆಯನ್ನು ಇಟ್ಟುಕೊಂಡು ಹೈಯರ್ ಆಫೀಸರ್ಸ್ ಹುದ್ದೆಗಳನ್ನು ಕೇಳಿದ ಹಾಗೆ ಕ್ರಿಯೇಟ್ ಮಾಡಿಕೊಂಡು ಹೋದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಈಗ 20 ಜನ ಹೈಯರ್ ಆಫೀಸರ್ಸ್ ಇಲಾಖೆಯಲ್ಲಿದ್ದಾರೆ. ತಾವು ಕೇಳಿ ಕೇಳಿದಹಾಗೆ ಹುದ್ದೆಗಳನ್ನು ನಿರ್ಮಾಣ ಮಾಡುವ ಪ್ರವೃತ್ತಿ ಬಿಡಬೇಕು. ಇರತಕ್ಕ ಅಧಿಕಾರಿಗಳಲ್ಲಿ ಕೆಲವರು ನಿಮ್ಮ ಕೋಪಕ್ಕೆ ತುತ್ತಾಗಿದ್ದಾರೆ. ಇನ್ನು ಕೆಲವರು ಕೃಪಾ ಕಟಾಕ್ಷದಲ್ಲಿದ್ದಾರೆ. ಇವರುಗಳು ಕೇಳಿ ಕೇಳಿದ ಹಾಗೆ ಹುದ್ದೆಗಳನ್ನು ನಿರ್ಮಾಣ ಮಾಡಿಕೊಟ್ಟುಕೊಂಡು ಹೋಗುತ್ತಿರುವುದರಲ್ಲಿ ಯಾವ ಅರ್ಥವೂ ಇಲ್ಲ. ಪೋಲೀಸ್ ಇಲಾಖೆಯಲ್ಲಿ ಹುದ್ದೆಗಳನ್ನು ನಿರ್ಮಾಣ ಮಾಡಿ ಹಣ ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು. ಜಿಲ್ಲಾ ಮಟ್ಟದಲ್ಲಿ ಪೋಲೀಸ್ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಜವಾಬ್ದಾರಿಯನ್ನು

ಕೊಡಬೇಕು. ಅವರು ಪ್ರತಿಯೊಂದಕ್ಕೂ ಬೆಂಗಳೂರಿಗೆ ಬಂದು ಹೋಗತಕ್ಕದ್ದು ಸರಿಯಲ್ಲ. ಹಳ್ಳಿಗಾಡಿನಲ್ಲಿರತಕ್ಕ ಪೋಲೀಸ್‌ರಿಗೆ ನೈತಿಕ ಪ್ರೇರಣೆಯನ್ನು ತಾವು ಕೊಡಬೇಕು. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಯಾವುದೇ ಸಲಹೆಯನ್ನು ಕೊಡುವಾಗ ಜನರನ್ನು ಒಟ್ಟಿಗೆ ಸೇರಿಸಿ ತೀರ್ಮಾನ ಕೊಡತಕ್ಕ ಒಂದು ವ್ಯವಸ್ಥೆಯನ್ನು ತಾವು ಈ ಇಲಾಖೆಯವರಿಂದ ಮಾಡಿಸಬೇಕು. ಜನರ ಸಮಸ್ಯೆಗಳನ್ನು ಬಗೆಹರಿಸುವಾಗ ತಾವು ಜನರ ಮತ್ತು ಪೋಲೀಸರ ಸಹಾಯದಿಂದ ಒಂದು ಕಮಿಟಿಯನ್ನಾದರೂ ಮಾಡಿ ಬಗೆಹರಿಸುವ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ಭ್ರಷ್ಟಾಚಾರ—ಇದು ಮನುಷ್ಯ ಮನುಷ್ಯನಿಂದ ಹತೋಟಿಗೆ ಬರಬೇಕಾಗಿದೆ. ಇಂಥ ವಾತಾವರಣವನ್ನು ನಾವು ಸೃಷ್ಟಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ರಾಜಾಜಿನಗರದಲ್ಲಿ ಒಂದು ಭವ್ಯ ಬಂಗಲೆಯನ್ನು ಕಟ್ಟಿಸಿಕೊಂಡರೆ ಬೇರೆ ಇಲಾಖೆಯವರಿಗೂ ಇದನ್ನು ನೋಡಿ ಟೆಮ್ಟ್ ಆಗುವುದು ಸ್ವಾಭಾವಿಕ. ಸಬ್‌ಇನ್ಸ್‌ಪೆಕ್ಟರ್ ಇಂಥ ಬಂಗಲೆಯನ್ನು ಕಟ್ಟಬೇಕಾದರೆ ಅವನ ಆದಾಯ ಏನು? ಇದನ್ನು ನೋಡಿದ ಬೇರೆ ಇಲಾಖೆಯವರು ಏನು ಮಾಡಬೇಕು? ಈ ರೀತಿಯಾಗಿ ಒಬ್ಬನನ್ನು ನೋಡಿ ಇನ್ನೊಬ್ಬ ದುಡ್ಡು ಹೊಡೆಯುವ ಪ್ರವೃತ್ತಿಯ ವಾತಾವರಣವನ್ನು ನಿರ್ಮಾಣ ಮಾಡಿದರೆ ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಇದು ಡೆಲ್ಲಿಯಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಶಿವಮೊಗ್ಗಕ್ಕೆ, ಶಿವಮೊಗ್ಗದಿಂದ ಚನ್ನಗಿರಿಗೆ ಹೀಗೆ ಬಂದುಬಿಟ್ಟಿದೆ. ಈ ಭ್ರಷ್ಟಾಚಾರದ ಬಗ್ಗೆ ಏನು ಇದೆ ಇದು ಅಲ್ಲಿಂದ ಬರುತ್ತದೆ. ತತ್‌ಕ್ಷಣ ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಇದು ಪೋಲೀಸ್ ಅಧಿಕಾರಿಗಳು ಈ ರೀತಿಯಾಗಿ ಎಲ್ಲರೂ ಇದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಜನರ ಮನಸ್ಸಿನಲ್ಲಿ ಈ ತರಹದ ಒಂದು ಅಭಿಪ್ರಾಯ ಬಂದುಬಿಟ್ಟಿದೆ. ಪೋಲೀಸರು ಜನರ ಮಧ್ಯೆ ಬೆರೆತು ಅವರ ಸಮಸ್ಯೆಗಳನ್ನು ಬಗೆಹರಿಸುವಂತಹ ಕೆಲಸ ಮಾಡಿದರೆ ಮಾತ್ರ ಈ ವ್ಯವಸ್ಥೆ ಸುಧಾರಣೆಯಾಗಲಿಕ್ಕೆ ಸಾಧ್ಯವಿದೆ. ಇಲ್ಲದೇ ಹೋದರೆ ಇವರು ಮಾಡುವ ಹಾಗೆ ಮಾಡಿಕೊಂಡು ಹೋದರೆ ತಲೆ ಕೆಟ್ಟ ಮನುಷ್ಯರು ಏನಾದರೂ ಮಾಡಬಹುದು ಎನ್ನುವುದನ್ನು ತಾವು ತಿಳಿಯಬೇಕು. ಪೋಲೀಸರನ್ನು ನಂಬಿಕೊಂಡು ತಾವು ಜೀವನ ಮಾಡುವುದಕ್ಕೆ ಹೋಗುವುದು ಬೇಡ. ಜನರನ್ನು ನಂಬಿ ಪೋಲೀಸರನ್ನು ಹತೋಟಿಯಲ್ಲಿ ತರುವ ಪ್ರಯತ್ನ ಮಾಡಬೇಕು ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕ ತಮ್ಮ ಖಾತೆಯ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತಾ, ನಾನು ನೀರಾವರಿಗೆ ಸಂಬಂಧಪಟ್ಟಂತೆ ಕೆಲವು ಸಲಹೆಗಳನ್ನು ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಬಹು ಮುಖ್ಯವಾಗಿ ಎರಡು ನದಿಗಳ ಪಾತ್ರ ಇದೆ. ಅದು ಕೃಷ್ಣ ಮತ್ತು ಕಾವೇರಿ. ಕೃಷ್ಣ ಪಾತ್ರದಲ್ಲಿರತಕ್ಕ ಅನೇಕ ಜಲಾಶಯಗಳ ಕೆಲಸ ಕಾರ್ಯಗಳು ಸಾಧಾರಣ ಮಟ್ಟಿಗೆ ತೃಪ್ತಿಕರವಾಗಿ ನಡೆಯುವುತ್ತಿವೆ. ಇದಕ್ಕೆ ಹಣಕಾಸಿನ ನೆರವೂ ಕೂಡ ಕೇಂದ್ರದಿಂದ ಮತ್ತು ಇತರ ಸಂಸ್ಥೆಗಳಿಂದ ಪಡೆದು, ಈ ಕೆಲಸಗಳು ಸುಗಮವಾಗಿ ನಡೆಯುತ್ತಿವೆ ಎಂದು ನಾವು ಹೇಳಬಹುದು. ಆದರೆ ಕಾವೇರಿ ಜಲಾಶಯಗಳ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದಾದರೆ, ಎಲ್ಲಾ ಜಲಾನಯನ ಪ್ರದೇಶಗಳು ಈ ಯೋಜನೆಯಲ್ಲಿ ಬರುತ್ತವೆ. ವಿರೋಧ ಪಕ್ಷದ ಮುಖಂಡರಾದ ದೇವೇಗೌಡರು ನಿನ್ನೆಯ ದಿವಸ ಇವುಗಳ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಕೇಂದ್ರ ಸರ್ಕಾರದವರು ನದಿಯ ನೀರಿನ ಮೇಲಿನ ಹತೋಟಿಯನ್ನು ತೆಗೆದುಕೊಳ್ಳಬೇಕು ಎಂದು ಒಂದು ಕಾನೂನನ್ನು ತರಬೇಕು ಎನ್ನುವ ಯೋಚನೆ ಇದೆಯೆಂದು ನಾನು ಕೇಳಿದ್ದೇನೆ. ರಿವರ್ ಬೇಸ್ಡ್ ಕಮಿಷನ್ ಅಪಾಯಿಂಟ್ ಮಾಡತಕ್ಕ ಒಂದು ಶಾಸನವನ್ನು ತರತಕ್ಕ ಉದ್ದೇಶವನ್ನು ಇಟ್ಟುಕೊಂಡಿದ್ದಾರೆಂದು ತಿಳಿದ ಮೇಲೆ ನನಗೆ ಒಂದು ಶಂಕೆ ಉಂಟಾಗಿದೆ. ಬಹುಶಃ ಇದು ಕೇಂದ್ರ ಹಾಗೂ ಮದ್ರಾಸ್ ರಾಜ್ಯಗಳ ಮಧ್ಯೆ ನಡೆದಿರತಕ್ಕ ಒಂದು ತಂತ್ರ ಇರಬಹುದು ಇದಕ್ಕೆ ಕರ್ನಾಟಕ ರಾಜ್ಯ ಬಲಿಯಾಗಬಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಈಗ ಇರತಕ್ಕ ರಿವರ್ಸ್ ಡಿಸ್ಪ್ಯೂಟ್ ಆಕ್ಟನ್ನು ನೋಡಿದರೆ ಎರಡು ರಾಜ್ಯಗಳ ನದಿ ನೀರಿನ ಹಂಚಿಕೆಯನ್ನು ಪರಿಹಾರ ಮಾಡುವುದಕ್ಕೆ ಅನೇಕ ಅವಕಾಶಗಳು ಇವೆ. ಬಹುಶಃ ಈ ದೃಷ್ಟಿಯಲ್ಲಿ ಮತ್ತೊಂದು ಕಾನೂನನ್ನು ಕೇಂದ್ರ ಸರ್ಕಾರದವರು ತರಬೇಕು ಇದರಿಂದ ಮದ್ರಾಸ್ ರಾಜ್ಯಕ್ಕೆ ಸ್ವಲ್ಪ ಅನುಕೂಲ ಮಾಡಬೇಕು ಎನ್ನುವ ಉದ್ದೇಶ ಇಲ್ಲಿ ಇದ್ದ ಪಕ್ಷದಲ್ಲಿ ಮಾನ್ಯ ದೇವೇಗೌಡರು ಹೇಳಿದ ಮಾತಿನಲ್ಲಿ ನಾನೂ ನಂಬಿಕೆಯನ್ನು ವ್ಯಕ್ತ ಮಾಡಬೇಕಾಗು

ತ್ತದೆ. ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಈ ವಿಷಯದಲ್ಲಿ ಯಾರಿಗೂ ಹಿಂದೆ ಬೀಳುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಯಾವ ಒಂದು ಪಕ್ಷದ ಸರ್ಕಾರ ಇದೆ, ಇಲ್ಲಿಯೂ ಅದೇ ಪಕ್ಷದ ಸರ್ಕಾರ ಇದೆ. ಈ ಪರಿಸ್ಥಿತಿ ಇರುವಾಗ ರಾಜ್ಯದ ಹಿತವನ್ನು ಬಲಿ ಕೊಡುವುದಕ್ಕೆ ಯಾರೂ ತಯಾರಾಗಿರುವುದಿಲ್ಲ. ಆದರಲ್ಲಿಯೂ ಕೂಡ ಮಾನ್ಯ ದೇವೇಗೌಡರ ವಾದದ ರೀತಿಯಲ್ಲಿ, ನಮ್ಮ ಮುಖ್ಯ ಮಂತ್ರಿಗಳು ಹಿಂದೆ ಬೀಳುತ್ತಾರೆನ್ನುವ ವಾದಕ್ಕೆ, ಶಂಕೆಗೆ ಸಾಧ್ಯತೆ ಇಲ್ಲ ಎಂದು ವಿಷದಪಡಿಸುತ್ತಿದ್ದೇನೆ. ಈ ಕಾನೂನನ್ನು ನಾವು ಇನ್ನೊಂದು ದೃಷ್ಟಿಯಿಂದ ನೋಡಬಹುದು. ದೇಶದಲ್ಲಿ ಸಮಗ್ರವಾಗಿ, ಇರತಕ್ಕ ನೀರನ್ನು ಯಾವ ಯಾವ ರಾಜ್ಯಗಳು ಯಾವ ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು, ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯ ಎಷ್ಟರಮಟ್ಟಿಗೆ ಇದೆ ಎನ್ನುವ ದೃಷ್ಟಿಯಿಂದ ಕಾನೂನನ್ನು ಮಾಡುತ್ತಿದ್ದಾರೆಯೋ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಅದರಲ್ಲಿಯೂ ದಕ್ಷಿಣ ರಾಜ್ಯಗಳಲ್ಲಿ ಸಮಗ್ರ ಚಿತ್ರವನ್ನು ನಾವು ತೆಗೆದುಕೊಳ್ಳುವುದಾದರೆ, ಡಾಕ್ಟರ್ ಕೆ. ಎಲ್. ರಾವ್ ಅವರು ಹೇಳಿದ ರೀತಿಯಲ್ಲಿ ಒಂದು ಗ್ರಾಂಡ್ ಕೆನಾಲ್ ನಾಲೆಯನ್ನು ಮಾಡಿ ಗಂಗಾ ನದಿಯಿಂದ ಕಾವೇರಿ ನದಿಯವರೆಗೆ ನೀರನ್ನು ಪಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಆದರೆ ಇದರ ಉಪಯೋಗದ ಗಾತ್ರವನ್ನು ಇನ್ನಿತರ ವಿಚಾರಗಳನ್ನು ಯೋಚನೆ ಮಾಡತಕ್ಕ ಕಾಲ ಇನ್ನೂ ಸ್ವಲ್ಪ ಮುಂದೆ ಇದೆ. ದಕ್ಷಿಣ ರಾಜ್ಯಗಳ ವಿಚಾರವನ್ನು ನಾವು ತೆಗೆದುಕೊಳ್ಳುವುದಾದರೆ ಗೋದಾವರಿ ಬೇಸಿನ್‌ನಲ್ಲಿ ಕೃಷ್ಣ ಬೇಸಿನ್‌ನಲ್ಲಿ ಕಾವೇರಿ ಬೇಸಿನ್‌ನಲ್ಲಿ ಯಾವ ರೀತಿ ನೀರಿನ ಉಪಯೋಗ ಮಾಡಬೇಕು ಎನ್ನುವ ಪ್ರಶ್ನೆ ಇದೆ. ೧೯೮೦ಕ್ಕಿಂತ ಮೊದಲು ಈ ಜಲಾನಯನ ಪ್ರದೇಶಗಳಲ್ಲಿ ಕೆಲವು ಯೋಜನೆಗಳು ತಯಾರಾಗಿವೆ. ಗೋದಾವರಿಯಲ್ಲಿರತಕ್ಕ ಸರ್ಪ್ಲಸ್ ನೀರನ್ನು ಕೃಷ್ಣ ಬೇಸಿನ್‌ಗೆ ಬಿಡಬೇಕು ಮತ್ತು ಪಾಚಂಪಾಡಿ ಹತ್ತಿರ ಒಂದು ಆಣೆಯನ್ನು ಹಾಕಬೇಕು, ಇರತಕ್ಕ ನೀರನ್ನು ಡೈವರ್ಟ್ ಮಾಡಬೇಕು. ಕೃಷ್ಣ ನದಿಯ ನೀರನ್ನು ಕಾವೇರಿಗೆ ಡೈವರ್ಟ್ ಮಾಡಬೇಕು ಎನ್ನುವ ಯೋಜನೆ ಇದೆ. ಈ ದಿಸೆಯಲ್ಲಿ ಕೇಂದ್ರ ಸರ್ಕಾರದವರು ಕಾನೂನು ಮಾಡತಕ್ಕದ್ದಾದರೆ ಅದನ್ನು ಎಲ್ಲರೂ ಹೃತ್ಪೂರ್ವಕವಾಗಿ ಸ್ವಾಗತಿಸಬೇಕಾಗುತ್ತದೆ. ಶ್ರೀಮಾನ್ ಚೆನ್ನಬಸಪ್ಪನವರು ನಮ್ಮ ರಾಜ್ಯ ಸರ್ಕಾರದಲ್ಲಿ ಅನೇಕ ವಿಧದಿಂದ ಸೂತ್ರವನ್ನು ಹಿಡಿದಿರತಕ್ಕವರು ಈಗ ನೀರಾವರಿ ಸಲಹಾ ಬೋರ್ಡಿನ ಅಧ್ಯಕ್ಷರಾಗಿದ್ದಾರೆ. ಅವರು ಒಂದು ಮಾತನ್ನು ಹೇಳಿದ್ದಾರೆ.

> "Parliament eoul l have set out the norms by guidelines in the Inter-state Water Dispute Act. Even this not done. In the absence of this, it has given room for wide differences in the appreach to determine the fair share of water Even now, it is not too late."

ಇದರಿಂದ ಕೇಂದ್ರ ಸರ್ಕಾರದ ಕಾನೂನನ್ನು ತರತಕ್ಕಂಥ ಮಾತನ್ನು ಹೇಳುವ ರೀತಿಯಲ್ಲಿ ಕಾವೇರಿ ಡಿಸ್ಪ್ಯೂಟ್ ಬಗ್ಗೆ ಕಮಿಷನ್ ಅಪಾಯಿಂಟ್ ಮಾಡಿದರೆ ಇದರಿಂದ ಮದ್ರಾಸ್ ರಾಜ್ಯಕ್ಕೆ ಅನುಕೂಲವಾಗುತ್ತದೆಂದು ಹೇಳುವುದಾದರೆ ಅದನ್ನು ನಾವೆಲ್ಲರೂ ವಿರೋಧ ಮಾಡುತ್ತೇವೆ. ನೀರನ್ನು ಉಪಯೋಗಿಸತಕ್ಕುದು ಎಷ್ಟರಮಟ್ಟಿಗೆ ಎನ್ನುವುದು ಮೂರು ನಾಲ್ಕು ಅಂಶಗಳನ್ನು ಒಳಗೊಂಡಿದೆ.

ಬಹುಶಃ ಯಾವುದಾದರೂ ಒಂದು ರಾಜ್ಯದ ನೀರನ್ನು ಉಪಯೋಗಿಸಿದಂತಹ ಕಾಲದಲ್ಲಿ ಈ ರೀತಿಯ ವಿಚಾರಗಳನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. Riparian right. Prior Appropriation right. Prescriptive right and Equality Right. There are the four principles on which the utilisation of water in any state is to be determined. These are the norms set out even in the international law. There are many decisions on · hich water rights can be utilised. ಈ ಪ್ರಿಸ್ಕ್ರಿಪ್ಟಿವ್ ರೈಟ್ ಬಗ್ಗೆ ಇವತ್ತು ಬೆಳಿಗ್ಗೆ ತಾನೇ ಮಾನ್ಯ ರಾಮದೇವ್‌ರವರು ಪ್ರಸ್ತಾಪ ಮಾಡಿದರು. ಇವತ್ತು ಮದ್ರಾಸ್‌ನಿಂದ ನಮಗೆ ಒಂದು ಎಸ್.ಒ.ಎಸ್ ಬಂದಿದೆ, ನಮಗೆ ಬೆಳೆಗೆ ತೊಂದರೆಯಾಗಿದೆ, ಕೊನೆಯಪಕ್ಷ ೧೨ ಟಿ ಎಂ.ಸಿ.ಎಫ್‌ಟಿ ಯಷ್ಟು ವಾಟರ್ ಆದರೂ ಬಿಡಬೇಕು. ಎಂದು ಹೇಳಿ ಅದರಲ್ಲಿ ಅವರು ಹೇಳಿದ್ದಾರೆ, ಇವತ್ತು ನಾನು ನಮ್ಮ ರಾಜ್ಯಸರ್ಕಾರ

ದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ನಮ್ಮ ರಾಜ್ಯದಲ್ಲಿ ನಮ್ಮ ಉಪಯೋಗಕ್ಕೆ ಬೇಕಾದಂತಹ ನೀರನ್ನು ನೋಡಿ ಇಟ್ಟುಕೊಂಡುಕೊಡಬೇಕೇ ಹೊರತು ಬಹುಶಃ ಅವರು ಎಸ್.ಓ.ಎಸ್ ಕಳಿಸಿದ್ದಾರೆ, ಆ ಒಂದು ಅಗ್ರಿಮೆಂಟ್ ಪ್ರಕಾರ ನಾವು ನೀರು ಬಿಡಬೇಕು, ಎನ್ನತಕ್ಕಂಥ ಪ್ರಿಸಂಪ್ಷನ್ ಮೇಲೆ ನೀರನ್ನು ಅವರಿಗೆ ಕೊಟ್ಟರೂ ಕೂಡ some prescriptive right may accrue which will come in the way of the interests of Karnataka. ಆದ್ದರಿಂದ ನಾನು ರಾಜ್ಯಸರ್ಕಾರದವರಲ್ಲಿ ವಿನಂತಿ ಮಾಡುತ್ತಿದ್ದೇನೆ, ನಾವು ನೀರನ್ನು ಇಟ್ಟುಕೊಳ್ಳದೇ ಅವರಿಗೆ ನೀರನ್ನು ಕೊಡಬಾರದು, ನಾವು ಇವತ್ತು ನೀರನ್ನು ಅವರಿಗೆ ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲ, ಏಕೆಂದರೆ ಮಂಡ್ಯದಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರು ಆಗಲೇ ಆ ಬಗ್ಗೆ ಮಾತನಾಡಿದರು. ಟಿ. ನರಸೀಪುರ, ನಂಜನಗೂಡು ಹೀಗೆ ಅನೇಕ ಕಡೆಗಳಲ್ಲಿ ಇವತ್ತು ಟ್ರಾನ್ಸ್‌ಪ್ಲಾಂಟೇಷನ್ ಆಗಿಲ್ಲ ಇವತ್ತು ಸಕಾಲದಲ್ಲಿ ಮಳೆ ಬರಲಿಲ್ಲ. ಇವತ್ತು ನಮಗೆ ಅನೇಕ ತೊಂದರೆಗಳು ಆಗಿರತಕ್ಕಂಥ ಪರಿಸ್ಥಿತಿಯಲ್ಲಿ ಬಹುಷಃ ಅವರು ಎಸ್.ಓ.ಎಸ್ ಕೊಟ್ಟು, ನಮಗೆ ನೀರು ಬೇಕಾಗಿದೆ, ನಿಮ್ಮ ಹತ್ತಿರ ನೀರು ಇದೆ, ಅದನ್ನು ನಮಗೆ ಕೊಡಿ ಎಂದು ಕೇಳಿದರೆ ಆ ರೀತಿ ಕೊಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಇರಿಗೇಷನ್ ಮಿನಿಸ್ಟರ್ ಕೂಡ ಇವತ್ತು ಬೆಳಿಗ್ಗೆ ಒಂದು ಆಶ್ವಾಸನೆಯನ್ನು ನಮಗೆ ಕೊಟ್ಟಿದ್ದಾರೆ, ನಮ್ಮ ರಾಜ್ಯದ ಬೇಡಿಕೆಯನ್ನು ನೋಡಿಕೊಂಡು ಮಾತ್ರ ನಾವು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ, ನಮಗೇ ಇಲ್ಲದಿದ್ದರೆ ಅವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಎನ್ನತಕ್ಕಂಥ ಅಂಶವನ್ನು ಅವರು ಹೇಳಿದ್ದಾರೆ. ಆ ರೀತಿ ಅವರು ಮಾಡುತ್ತಾರೆ ಎಂದು ನಾವು ಅಂದುಕೊಂಡಿದ್ದೇನೆ. ಕೇಂದ್ರ ಸರ್ಕಾರದವರು ಏನೊಂದು ಕಾನೂನನ್ನು ತರುತ್ತಾರೆಂದು ಹೇಳುತ್ತಾರೆ ಆ ವಿಚಾರದಲ್ಲಿ, ಈ ಒಂದು ಬೇಸಿನ್‌ನಲ್ಲಿ ಸರ್ಪ್ಲಸ್ ವಾಟರ್ ಏನಿದೆ ಅದನ್ನು ಡಿಫಿಸಿಟ್ ಬೇಸಿನ್‌ಗೆ ಡೈವರ್ಟ್ ಮಾಡತಕ್ಕಂಥ ವಿಚಾರದಲ್ಲಿ ಆಲೋಚನೆ ಮಾಡುವುದಕ್ಕೆ ಅವಕಾಶವಿದೆ ಮತ್ತು ಈ ನ್ಯಾಷನಲ್ ವಾಟರ್ ಪಾಲಿಸಿಯ ಪ್ರಕಾರ ಈ ದೇಶದಲ್ಲಿ ನೀರನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಬೇಕು ಎಂಬ ಬಗ್ಗೆ ಗೈಡ್‌ಲೈನ್ ಅಂಡ್ ನಾರ್ಮ್ಸನ್ನು ಕೊಡತಕ್ಕಂಥ ವಿಚಾರದಲ್ಲಿ ಬಹುಷಃ ಅವರು ಒಂದು ಕಾನೂನನ್ನು ತರತಕ್ಕಂಥ ಕಾಲದಲ್ಲಿ ನಾವು ಇದನ್ನು ಆಲೋಚನೆ ಮಾಡಬೇಕು. ತಾವು ಆಲೋಚನೆ ಮಾಡುತ್ತೀರೆಂದು ನಾನು ಆಶಯ ಮಾಡುತ್ತೇನೆ. ಬಹುಶಃ ಅವರು ಒಂದು ಕಮಿಷನ್ ಸೆಟ್ ಮಾಡಿ ಕಾವೇರಿ ಡಿಸ್ಪ್ಯೂಟ್ ಬಗ್ಗೆ ಯಾವುದಾದರೂ ಒಂದು ಸ್ಟೇಟ್‌ಗೆ ಅನ್ಯಾಯ ಮಾಡುವ ದೃಷ್ಟಿಯಿಂದ ಅದನ್ನು ಮಾಡಿದರೆ ಕರ್ನಾಟಕದ ಪ್ರತಿಯೊಬ್ಬ ಪ್ರಜೆ ಮತ್ತು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಅದನ್ನು ವಿರೋಧ ಮಾಡುತ್ತಾರೆ ಎನ್ನುವ ಅಂಶವನ್ನು ಇವತ್ತಿನದಿವಸ ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ಇನ್ನು ಎರಡನೆಯದಾಗಿ ಈ ಕಾವೇರಿ ಬೇಸಿನ್‌ನಲ್ಲಿ ನಮಗೆ ಆಗಿರತಕ್ಕಂಥ ಅನ್ಯಾಯವನ್ನು ಮುಚ್ಚಿಡುವುದಕ್ಕೆ ಆಗುವುದಿಲ್ಲ. ೧೯೨೪ರ ಅಗ್ರಿಮೆಂಟ್‌ನಲ್ಲಿ ಕೆಲವು ಅಂಶಗಳು ಅಡಗಿವೆ. ನಮ್ಮ ಮೈಸೂರು ರಾಜ್ಯದವರು ಕೆಲವು ಪ್ರಾಜೆಕ್ಟ್‌ಗಳನ್ನು ಕಟ್ಟಬೇಕಾದರೆ ಮದ್ರಾಸ್‌ನವರ ಅನುಮತಿ ಬೇಕು, ಮದ್ರಾಸ್‌ನವರು ಪ್ರಾಜೆಕ್ಟ್ ಕಟ್ಟಬೇಕಾದರೆ ಮೈಸೂರಿನವರ ಅನುಮತಿ ಬೇಕು ಎಂದು ಹೇಳಿದ್ದಾರೆ. ಆ ಒಂದು ಕಂಡಿಷನ್ ಪ್ರಕಾರ ವಾಸ್ತವಿಕವಾಗಿ ಏನು ನಡೆದಿದೆ ಎಂಬುದನ್ನು ನೋಡುವುದಾದರೆ ಬಹುಶಃ ಕೇಂದ್ರ ಸರ್ಕಾರದವರೂ ಕೂಡ to some extent they have done some injustice to Karnataka. ಏತಕ್ಕೆ ಎಂದು ತಾವು ಕೇಳಬಹುದು. ಅನೇಕವರ್ಷಗಳಿಂದ ನಾವು ಕೇಳುತ್ತಿದ್ದೇವೆ, ಕಾವೇರಿ ನದಿಯ ಪಾತ್ರದಲ್ಲಿರತಕ್ಕಂಥ ಹೇಮಾವತಿ ಹಾರಂಗಿ ಮತ್ತು ಕಬಿನಿ ಈ ಯೋಜನೆಗಳನ್ನು ನಾವು ಕೈಗೆ ತೆಗೆದುಕೊಳ್ಳಬೇಕು ಎಂದು ಅವರಿಗೆ ಹೇಳಿದಾಗ, ಅವರು ಅದಕ್ಕೆ ಮದ್ರಾಸ್‌ನವರ ತಕರಾರು ಇದೆ, ಈ ಯೋಜನೆಗಳಿಗೆ ಅನುಮತಿ ಕೊಡುವುದಕ್ಕಾಗುವುದಿಲ್ಲ' ಎಂದು ಹೇಳಿದ್ದಾರೆ. ಇವತ್ತು ನಾವು ಕಟ್ಟತಕ್ಕಂಥ, ಕಾವೇರಿ ಬೇಸಿಸ್‌ನಲ್ಲಿರತಕ್ಕಂಥ ಎಲ್ಲಾ ಯೋಜನೆಗಳೂ ಕೂಡ they are under the non plan schemes ಈ ನಾನ್‌ಪ್ಲಾನ್‌ಸ್ಕೀಮ್‌ನಲ್ಲಿವೆ ಎಂದರೆ ಏನು ಅರ್ಥವಾಯಿತು ಎಂದರೆ. ಇವತ್ತು ಪ್ಲಾನ್ ಸ್ಕೀಮ್‌ಗಳಿಗೆ ಕೇಂದ್ರಸರ್ಕಾರದವರು ಏನು ಹಣ ಕೊಡುತ್ತಾರೆ ಅದರ ಅನುಕೂಲ ಇವತ್ತು ನಮಗೆ ದೊರೆಯುತ್ತಾ ಇಲ್ಲ. ಈ ಮಾತನ್ನು ಮಾನ್ಯ ದೇವೇಗೌಡರೂ ಸಹ ಹೇಳಿದ್ದಾರೆ. ಅಲ್ಲದೇ ಈ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಖರ್ಚಾಗಿರತಕ್ಕಂಥ ಹಣದಲ್ಲಿ ಸುಮಾರು ೩೭ ಪರ್ಸೆಂಟ್‌ನಷ್ಟು ಹಣ ಹರಿಯಾಣಕ್ಕೆ ಹೋಗಿದೆ ಎಂದು ಅವರು ಹೇಳಿದರು. ಇದಕ್ಕೆ ಕಾರಣ ಏನು ಎಂದು ನಾವೆಲ್ಲಾ ಯೋಚನೆ ಮಾಡಿದ ಪಕ್ಷದಲ್ಲಿ it comes under Bhakra–

Nangal. ಸುಮಾರು ೭-೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬಕ್ರಾನಂಗಲ್‌ನ್ನು ಕಟ್ಟಿರತಕ್ಕಂಥ ಸಂದರ್ಭದಲ್ಲಿ ಕೇಂದ್ರದವರು ದಾಮೋದರ್‌ವ್ಯಾಲಿ, ಹಿರಾಕುಡ್, ಈ ತರಹ ಕೆಲವು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಹಣವನ್ನು ಅದರಲ್ಲಿ ಇನ್‌ವೆಸ್ಟ್ ಮಾಡಿದ್ದಾರೆ. ನಮಗೆ ಅವರು ಆ ರೀತಿ ಮಾಡದಿದ್ದರೂ ಕೂಡ ಅವರು ನಮ್ಮ ಹಾರಂಗಿ ಯೋಜನೆಯನ್ನಾಗಲೀ, ಹೇಮಾವತಿ ಯೋಜನೆಯನ್ನಾಗಲೀ, ಅಥವಾ ಕಬಿನಿ ಯೋಜನೆಯನ್ನಾಗಲೀ ಪ್ಲಾನ ಸ್ಕೀಮ್‌ಗಳಲ್ಲಿ ಸೇರಿಸಿದ್ದರೆ ಬಹುಶಃ ಹೆಚ್ಚಿನ ಹಣ ಅವರಿಂದ ನಮಗೆ ಬರುತ್ತಾ ಇತ್ತು. ಇಷ್ಟು ಹೊತ್ತಿಗೆ ಆ ಎಲ್ಲಾ ಪ್ರಾಜೆಕ್ಟ್‌ಗಳನ್ನು ನಾವು ಮುಗಿಸಬಹುದಾಗಿತ್ತು. ಈ ದಿಶೆಯಲ್ಲಿ ನಾವು ಯೋಚನೆ ಮಾಡುವುದಾದರೆ, ಕೇಂದ್ರದಿಂದ ನಮಗೆ ತೊಂದರೆಯಾಗಿದೆ. ಆದರೂಕೂಡ ಕರ್ನಾಟಕ ಸರ್ಕಾರದವರು ಇವತ್ತು ಹಣವನ್ನು ನಮ್ಮ ರಾಜ್ಯದ ಬೊಕ್ಕಸದಿಂದ ಕೊಟ್ಟಿದ್ದಾರೆ. ಇವತ್ತು ನಾವು ಆ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತಿದ್ದೇವೆ. ಆದಷ್ಟು ಹೆಚ್ಚಿನ ಹಣವನ್ನು ಕೊಡತಕ್ಕಂಥ ವಿಚಾರದಲ್ಲಿ ಅವರು ಯೋಚನೆ ಮಾಡುತ್ತಿದ್ದಾರೆ. ೧೯೬೦–೬೧ ರಲ್ಲಿ ನಮ್ಮ ಅಲೋಕೇಷನ್ ನೋಡಿದರೆ ಮೇಜರ್ ಇರಿಗೇಷನ್‌ಗೆ ಒಂದು ವರ್ಷಕ್ಕೆ ೭ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರು. ಇವತ್ತು we are prepare to spend 100 crores ಎನ್ನತಕ್ಕಂಥ ಮಾತನ್ನು ಸರ್ಕಾರದವರು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಅವರ ಹೇಳಿಕೆಯಲ್ಲಿ 'ಈಗಾಗಲೇ ನಾವು ೭೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನೂ ೮೦ ಕೋಟಿ ರೂಪಾಯಿಗಳನ್ನು ಈ ದಿಶೆಯಲ್ಲಿ ನಾನು ಕೊಡುವುದಕ್ಕೆ ತಯಾರಾಗಿದ್ದೇನೆ' ಎಂದು ಅವರು ಹೇಳಿದ್ದಾರೆ. ಇವತ್ತು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ತಾವು ೮೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತೀರಿ, ಇವತ್ತು ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಪ್ರಾಜೆಕ್ಟ್‌ಗಳಿಗೆ ಅದು ಅಗತ್ಯವಾಗಿ ಬೇಕಾಗಿದೆ, ಅದನ್ನು ಮಾರ್ಚ್ ಎಂಡ್‌ನಲ್ಲಿ ಅಥವಾ ಫೆಬ್ರುವರಿ ಎಂಡ್‌ನಲ್ಲಿ ಕೊಡತಕ್ಕಂಥಾದ್ದರಿಂದ ಏನೂ ಉಪಯೋಗವಿಲ್ಲ. ಇವತ್ತು we have to plan it. ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಡಿಕ್ಲೇರ್ ಮಾಡಬೇಕು. 'ಇತರ ಬೇರೆ ಸೆಕ್ಟಾರ್‌ನಲ್ಲಿ ಖರ್ಚುಗಳು ಏನಿದೆ ಅದನ್ನು ಕಡಿಮೆ ಮಾಡಿ ನಾನು ಇದಕ್ಕೆ ೮೦ ಕೋಟಿ ಜಾಸ್ತಿ ಮಂಜೂರು ಮಾಡುತ್ತೇನೆ' ಎಂದು ಹೇಳಬೇಕು ಮತ್ತು ಆ ದಿಶೆಯಲ್ಲಿ ಈ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಅಪ್ಪಣೆಯನ್ನು ಕೊಡಿಸಬೇಕು ಎಂದು ಹೇಳುತ್ತೇನೆ. ಇದರಲ್ಲಿ ಇನ್ನೊಂದು ಸಂತೋಷದ ಸಂಗತಿ ಇದೆ. ಈ ಬೇಸಿನ್‌ನಲ್ಲಿ ಈಗಾಗಲೇ you have posted Chief Engineer and Superintending Engineer. ಈ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳದಿದ್ದರೆ ಸರಿಹೋಗುವುದಿಲ್ಲ, ಪ್ರಾಯಶಃ ತಾವು ಏನು ಅಲ್ಲಿ ಚೀಫ್ ಇಂಜಿನಿಯರನ್ನು ಹಾಕಿದ್ದೀರಿ ಅವರು in his entire service he has worked in Irrigation. More than that, he has worked in Cauvery Basin. He was in charge of Construction of Chikahole, Suvarnavathy, Hemavathy, Harangi and Manchanabele. So, he knows the entire cauvery basin projects and now he is in a position to finish the project in a targeted date. ಈ ಒಂದು ಪ್ರಾಜೆಕ್ಟ್‌ಗಳನ್ನು ಮುಗಿಸುವುದಕ್ಕೆ ಏನೊಂದು ಬಾಟಲ್‌ನೆಕ್ ಹಣ, ಬೇಕಾಗುತ್ತದೆ ಅದನ್ನು ನೀವು ಒದಗಿಸಿಕೊಡುವುದಾದರೆ, with his vast experience he has got in cauvery basin projects, I hope, he will be able to complete the works within another 2 or 3 years. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಏನು ೮೦ ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳುತ್ತೀರಿ ಅದನ್ನು ಈಗ ಕೊಟ್ಟಿದ್ದೇನೆ, ಈಗಲೇ ಆ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸಮಾಡಬೇಕು ಎನ್ನತಕ್ಕಂಥ ಮಾತನ್ನು ತಾವು ಅವರಿಗೆ ಹೇಳಬೇಕು ಅದು ಬಹಳ ಮುಖ್ಯ. ಇನ್ನು ಈ ಕಬಿನಿ ವಿಚಾರದಲ್ಲಿ ಹೇಳಬೇಕು ಎಂದರೆ, Kabini is a river surplus ಆದ್ದರಿಂದ ಇವತ್ತು ೧ ಲಕ್ಷ ೫ ಸಾವಿರ ಎಕರೆಯನ್ನು ಇರಿಗೇಟ್ ಮಾಡತಕ್ಕಂಥ ಉದ್ದೇಶವನ್ನು ಇಟ್ಟು ಕೊಂಡಿದ್ದಾರೆ. ಅದರಲ್ಲಿ ನೀರಿನ ಪೊಟೆನ್‌ಷಿಯಾಲಿಟಿ ಹೆಚ್ಚಿನರೀತಿಯಲ್ಲಿ ಇದೆ. ನನಗೆ ಗೊತ್ತಿರುವ ಹಾಗೆ ಈ ಕಬಿನಿ ಪ್ರಾಜೆಕ್ಟ್ ಮಾಡತಕ್ಕಂಥ ಸಂದರ್ಭದಲ್ಲಿ ಫಸ್ಟ್‌ಸ್ಟೇಜ್ ಅಂಡ್ ಸೆಕೆಂಡ್ ಸ್ಟೇಜ್ ಅಂತ ಹೇಳಿ ಎರಡು ಭಾಗಗಳಾಗಿ ಮಾಡಿಕೊಂಡು ಈ ಫಸ್ಟ್ ಸ್ಟೇಜಿನ ಕೆಲಸ ನಡೆಯುತ್ತಾ ಇದೆ. ಈ ಫಸ್ಟ್ ಸ್ಟೇಜ್‌ನಲ್ಲಿ ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲಿ ೩ ಸಾವಿರ ಎಕರೆ ಮತ್ತು ರೈಟ್‌ಬ್ಯಾಂಕ್ ಕೆನಾಲ್‌ನಲ್ಲಿ ೧ ಲಕ್ಷ ೫ ಸಾವಿರ ಎಕರೆಯನ್ನು ಇರಿಗೇಷನ್ ಫೆಸಿಲಿಟೀಸ್ ಒಳಗೆ ತರಬೇಕು

ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ, ಆದರೆ ಸೆಕೆಂಡ್ ಸ್ಟೇಜ್‌ನಲ್ಲಿ ಈ ಕಬಿನಿ ವಾಟರನ್ನು ಲಿಫ್ಟ್ ಮಾಡಿ ನುಗು ವ್ಯಾಲಿಯಲ್ಲಿ ತೆಗೆದುಕೊಂಡು ಬರಬೇಕು ಮತ್ತು ನುಗು ಟೈಲ್ ಎಂಡ್‌ನಿಂದ ಒಂದು ಕೆನಾಲ್ ತೆಗೆದುಕೊಂಡು ಬಂದರೆ ಬಹುಶಃ ಇವತ್ತು ಕ್ಷಾಮಕ್ಕೆ ಒಳಗಾಗಿರತಕ್ಕಂಥ ಪ್ರದೇಶ ಏನಿದೆ ಪಾರ್ಟ್ ಆಫ್ ಗುಂಡ್ಲುಪೇಟೆ, ಪಾರ್ಟ್ ಆಫ್ ಚಾಮರಾಜನಗರ, ಪಾರ್ಟ್ ಆಫ್ ನಂಜನಗೂಡು ಕೈಲಂದೆ ಹೋಬಳಿ ಇದೆಲ್ಲಾ ಸೇರಿ ಸುಮಾರು ೬೫ ಸಾವಿರ ಎಕರೆ ಪ್ರದೇಶವನ್ನು ನೀರಾವರಿ ಮಾಡುವುದಕ್ಕೆ ಅವಕಾಶವಿದೆ, ಕಬಿನಿ ಎರಡನೇ ಯೋಜನೆಯಲ್ಲಿ ಅದನ್ನು ಅಳವಡಿಸಿದ್ದಾರೆ. ಯಾವ ಕಾರಣಕ್ಕಾಗಿ ಅಲ್ಲಿ ಕೆಲಸ ಪ್ರಾರಂಭ ಮಾಡಲಿಲ್ಲವೋ ನನಗೆ ಗೊತ್ತಿಲ್ಲ. ಆದರೆ now I feel that, that work is most important. ಏಕೆಂದರೆ ಮದ್ರಾಸ್‌ನವರು ಅದನ್ನೇ ಹೇಳುತ್ತಿದ್ದಾರೆ, ನಿಮಗೆ ಸರ್ಪ್ಲಸ್ ವಾಟರ್ ಕಬಿನಿಯಲ್ಲಿ ಇರಬಹುದು, ಹೇಮಾವತಿಯಲ್ಲಿ ಇರಬಹುದು, ಹಾರಂಗಿಯಲ್ಲಿ ಇರಬಹುದು ಅದನ್ನು ನಮಗೆ ಕೊಡಿ, ಎಂದು ಅವರು ಕೇಳುತ್ತಿದ್ದಾರೆ ಇದು ಮದ್ರಾಸ್‌ನವರ ಬೇಡಿಕೆ, 'ನಾವು ೨೮ ಲಕ್ಷ ಎಕರೆ ಡೆವೆಲಪ್ ಮಾಡಿದ್ದೇವೆ, ನಮಗೆ ಪ್ರೊಟೆಕ್ಷನ್ ಕೊಡಿ' ಎಂದು ಅವರು ಕೇಳುತ್ತಿದ್ದಾರೆ. ಈಗ ತಾವು ಅವರನ್ನು ಕೇಳಬೇಕು Under 1924 agreement whatwas the entitlement for them ? ಎಷ್ಟು ಲಕ್ಷ ಎಕರೆ ಅವರು ಡೆವಲಪ್‌ಮೆಂಟ್ ಮಾಡಬೇಕಾಗಿತ್ತು, ನಾವು ಎಷ್ಟು ಲಕ್ಷ ಎಕರೆ ಡೆವೆಲಪ್‌ಮೆಂಟ್ ಮಾಡಬೇಕಾಗಿತ್ತು. ಇವತ್ತು ಅವರ ಡೆವೆಲಪ್‌ಮೆಂಟ್ ಏನು, ನಮ್ಮ ಡೆವೆಲಪ್‌ಮೆಂಟ್ ಏನು ಎಂಬುದನ್ನು ನೋಡಬೇಕು. ನಾವು ಡೆವೆಲಪ್‌ಮೆಂಟ್ ಮಾಡದೇ ಇರುವುದಕ್ಕೆ ನಾನಾ ಕಾರಣಗಳು ಇರಬಹುದು. ಅವರು ಡೆವೆಲಪ್‌ಮೆಂಟ್ ಮಾಡಿರುವುದಕ್ಕೆ ನಾನಾ ಕಾರಣಗಳು ಇರಬಹುದು. They have developed nearly 6 lakh acres which is unauthorised atchcut. Are we here to protect the unauthorised atchcut ? ೧೯೨೪ ರ ಅಗ್ರಿಮೆಂಟ್ ಸಾಕ್ರೋಸ್ಯಾಂಕ್ಟ್ ಎಂದು ಹೇಳಿ ಅದನ್ನು ಮಾನ್ಯ ಮಾಡಬೇಕೆಂದು ಹೇಳಿದಮೇಲೆ ಕೂಡ ಅದನ್ನು ಮೀರಿ ೫½ ಲಕ್ಷ ಎಕರೆಗಳನ್ನು ಡೆವೆಲಪ್ ಮಾಡಿದರೆ, ಇವತ್ತು ಅವರಿಗೆ ನಾವು ನೀರು ಕೊಡತಕ್ಕಂಥ ರೈಟ್ ಏನಿದೆ ? ನಾವು ಇಲ್ಲಿ ಡೆವೆಲಪ್‌ಮೆಂಟ್ ಮಾಡಲಿಲ್ಲ. ಅದಕ್ಕೆ ಕಾರಣವನ್ನು ನಾನು ಆಗಲೇ ಹೇಳಿದ್ದೇನೆ. ಗೌರ್ನ್‌ಮೆಂಟ್ ಆಫ್ ಇಂಡಿಯಾದವರು ನಮ್ಮ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಲಿಲ್ಲ ಗೌರ್ನ್‌ಮೆಂಟ್ ಆಫ್ ಇಂಡಿಯಾದವರು ನಮಗೆ ಕೊಡಬೇಕಾದಂತಹ ಫೈನಾನ್ಸಿಯಲ್ ಅಸಿಸ್ಟೆನ್ಸನ್ನು ಕೊಡಲಿಲ್ಲ. ಇನ್ನೂ ನಾನಾ ಕಾರಣಗಳಿಂದ ನಾವು ಹೆಚ್ಚಿನ ಅಲೋಕೇಷನ್ಸ್ ಮಾಡಲಿಲ್ಲ. ಇವತ್ತು ಆಂಧ್ರದಲ್ಲಿ ಮತ್ತು ತಮಿಳುನಾಡಿನಲ್ಲಿ ಹೆಚ್ಚಿಗೆ ಡೆವೆಲಪ್‌ಮೆಂಟ್ ಆಗಿದೆ ಎಂದರೆ, Per acre expenditure in those States is less because they are deltas. ಅಲ್ಲಿ ಒಂದು ಎಕರೆಗೆ ೫೦೦ ರೂಪಾಯಿಗಳನ್ನು ಖರ್ಚು ಮಾಡಿದರೆ ಇರಿಗೇಟ್ ಮಾಡುವುದಕ್ಕೆ ಬರುತ್ತದೆ. ಆದರೆ ಕರ್ನಾಟಕದಲ್ಲಿ ೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಒಂದು ಎಕರೆಗೆ ನೀರು ಕೊಡುವುದಕ್ಕೆ ಕಷ್ಟವಾಗುತ್ತದೆ. In deltas they have got a lot of natural wealth.

೧೨-೩೦ ಪಿ ಎಂ.

We are fighting with difficulties, and inspite of that we are making profits. ತಾವು ಇದರಲ್ಲಿ ಏನಾದರೂ ತೊಂದರೆ ಮಾಡಿಕೊಂಡರೆ ತಮ್ಮನ್ನು ಎಲ್ಲಾ ಜನತೆ ವಂಶ ಪಾರಂಪರ್ಯವಾಗಿ ಶಪಿಸುತ್ತಾರೆ. ತಾವು ಈಗಾಗಲೇ ಕಬಿನಿ ಎರಡನೇ ಹಂತವನ್ನು ಪ್ರಾರಂಭ ಮಾಡಬೇಕಾಗಿತ್ತು. ಇದನ್ನು ತಾವು ಕಾರ್ಯರೂಪಕ್ಕೆ ತಂದರೆ ಸುಮಾರು ೬೫ ಸಾವಿರ ಎಕರೆ ಜಮೀನು ಪ್ರದೇಶದಲ್ಲಿ ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಸಂಬಂಧವಾಗಿ ತಮಗೆ ಏನಾದರೂ ವರದಿ ಬೇಕಾದರೆ ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಳ್ಳಬಹುದು, ಆ ಜಿಲ್ಲೆಯ ಕೆಲವು ತಾಲ್ಲೂಕುಗಳಾದ ನಂಜನಗೂಡು ಮತ್ತು ಚಾಮರಾಜನಗರ ಇತರೆ ಪ್ರದೇಶಗಳಲ್ಲಿ ಸುಮಾರು ೬೫ ಸಾವಿರ ಎಕರ ಜಮೀನನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಈ ಕಬಿನಿ ಎರಡನೇ ಯೋಜನೆಯನ್ನು ತಾವು ಪ್ರಾರಂಭ ಮಾಡುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಇದು ಸಾಮಾನ್ಯವಾಗಿ probably that is a superflous body. ಆದ್ದರಿಂದ ಇದನ್ನು ತಾವು ಅಭಿವೃದ್ಧಿ ಮಾಡಿದರೆ ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಕಾಡ ಬಗ್ಗೆ ಹೇಳುವುದಾದರೆ ಇದರಲ್ಲಿ ಇಂಜನೀಯರ್ಸ್‌ರವರದು ಬಹಳ ಜವಾಬ್ದಾರಿ ಇದೆ. ಇದನ್ನು ಅವರು ಸರ್‌ಪ್ಲಸ್ ಮಾಡುವಂತಹ ಅಧಿಕಾರವಿದೆ. ಮತ್ತು This CADA has got definite work. ಇದರ ಬಗ್ಗೆ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ದೇವೇಗೌಡರು ಹೇಳಿದರು ಕಬಿನಿ ಎರಡನೇ ಹಂತ ಕೆಲಸವನ್ನು ಕೇವಲ ನಾಲ್ಕೂವರೆ ತಿಂಗಳು ಮಾಡಿದ್ದಾರೆ ಅಂತ. ಆದರೆ ಈ ಕಾಡದ ಫೀಲ್ಡ್ ಚಾನಲ್‌ಗಳನ್ನು ಮಾಡುವುದಕ್ಕೆ ವಿಶ್ವಬ್ಯಾಂಕಿನವರು ಸಹಾಯವನ್ನು ಮಾಡಿದ್ದಾರೆ. This CADA should take up the responsibility of construction of field channels. They have got Superintending Engineers, they have got Executive Engineers, Assistant Engineers. They have their own engineering cell. ಈ ಸೆಲ್‌ನಿಂದ ಅವರನ್ನು ತಾವು ಟ್ರಾನ್ಸ್‌ಫರ್ ಮಾಡುತ್ತೀರಿ, ಆದ್ದರಿಂದ ಈ ಕೆಲಸ ಬಹಳ ನಿಧಾನವಾಗುತ್ತಿದೆ. ಅಲ್ಲಿ ಆದರೆ ಮೈಸೂರು ನಗರದ ಕೃಷ್ಣರಾಜನಗರದ ಕೆಲಸವನ್ನು ತೆಗೆದುಕೊಂಡು ಯಾವ ರೀತಿ ಮಾಡುತ್ತೀರಿ ಅದೇ ರೀತಿಯಲ್ಲಿ ಈ ಯೋಜನೆಯನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

Construction of field channels 5. 6. 7. cores. They take it into their account. They transfer it again to the Engineering Department. Construction Cell "Construction Department". ನಮ್ಮಲ್ಲಿ ಈಗ ಸುಮಾರು ಎರಡು ಪ್ರಾಜೆಕ್ಟ್‌ಗಳು ಇವೆ. ಅವು ಯಾವುವೆಂದರೆ ಒಂದು ಸುವರ್ಣಾವತಿ ಮತ್ತು ಎರಡನೇಯದಾಗಿ ಚಿಕ್ಕೊಳೆ ಈ ಎರಡು ಪ್ರಾಜೆಕ್ಟ್‌ಗಳನ್ನು ನಮ್ಮ ಮಾನ್ಯ ಇರಿಗೇಷನ್ ಮಂತ್ರಿಗಳು ಕಳೆದ ಬಾರಿ ಇದರ ಕೆಲಸವನ್ನು ಕಾರ್ಯಗತ ಮಾಡುವುವಕ್ಕೆ ನೇರವಾಗಿ ತಮ್ಮ ಉತ್ತರವನ್ನು ಕೊಟ್ಟಿದ್ದರು. ಬಹುಶ: ಈ ಬಾರಿ ಈ ಯೋಜನೆಯನ್ನು ಕೈಗೊಳ್ಳಬಹುದೆಂದು ನಾನು ತಿಳಿದುಕೊಂಡಿದ್ದೇನೆ It is responsible for the integrated Development of all departmental activities. I agree, this is also one of the main activities. ಈ ಎರಡು ಪ್ರಾಜೆಕ್ಟ್‌ಗಳಲ್ಲಿ ನಾವು ಚಿಕ್ಕೊಳೆಯನ್ನು ತೆಗೆದುಕೊಳ್ಳುವುದಾದರೆ ಇದರಲ್ಲಿ ಯಾವಾಗಲು ಫಡ್ಸ್ ಬರುತ್ತಿರುತ್ತದೆ. ಮತ್ತೆ ಎರಡನೆಯದಾಗಿ ಸುವರ್ಣಾವತಿಯನ್ನು ತೆಗೆದುಕೊಳ್ಳುವುದಾದರೆ within 24 hours the projects will be full and the project will overflow and the water will go in to the river, while uvarnavathi has got a bigger and wider catchment but lesser rain. ಚಿಕ್ಕೊಳ ಸುಮಾರು ೪-೫ ಸಾರಿ ಡಿಸ್‌ಚಾರ್ಜ್ ಆಗಿದೆ. ಸುವರ್ಣಾವತಿಯಲ್ಲಿ ೧೦ರಷ್ಟು ಜಾಸ್ತಿ ನೀರು ಹಿಡಿಸುತ್ತದೆ ಸುವರ್ಣಾವತಿ ತುಂಬಿದರೆ ಸುಮಾರು ೯ ಸಾವಿರ ಎಕರೆಯಷ್ಟು ಜಮೀನು ಸಾಗುವಳಿ ಮಾಡಬಹುದು, ಆದ್ದರಿಂದ ಚಿಕ್ಕೊಳೆಗೆ ಬರುವಂತಹ ನೀರನ್ನು ಸುವರ್ಣಾವತಿಗೆ ಡೈವರ್ಟ್ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತೇನೆ. ಆ ರೀತಿ ಮಾಡುವುದಕ್ಕೆ ಫೀಸ್‌ಬಲಿಟಿ ಕೂಡ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಬೇಕಾದರೆ ವರದಿಯನ್ನು ಕೂಡ ತರಿಸಿಕೊಂಡು ನೋಡಬಹುದು. ಇದರ ವರದಿಯನ್ನು ತಮ್ಮ ಇಲಾಖೆಯ ಚೀಫ್ ಇಂಜಿನಿಯರ್ ಮೂಲೆಗೆ ಇಟ್ಟಿದ್ದಾರೆ. ಅಲ್ಲಿಗೆ ಒಬ್ಬ ಇನ್‌ಚಾರ್ಜ್ ಚೀಫ್ ಇಂಜನೀಯರ್ ಬಂದಿದ್ದಾರೆ ಅವರು ಏನು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಸಹ The Chief Engineer who is in charge of the project at present is fully conversant with both the projects. He was in charge of Chickhole as well as Suvarnavathi under construction.

ಆದ್ದರಿಂದ ತಾವು ಅದನ್ನು ಪರಿಶೀಲನೆ ಮಾಡಿ ಲಿಂಕ್ ಚಾನಲ್‌ಗಳನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಈ ಲಿಂಕ್ ಚಾನಲ್‌ಗಳನ್ನು ಮಾಡುವುದರಿಂದ ಜನರಿಗೆ ಅನುಕೂಲವಾಗುತ್ತದೆ, ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ನೇರವಾಗಿ ಇದರ ಬಗ್ಗೆ ಒಂದು ಆಶ್ವಾಸನೆಯನ್ನು ಕೊಡಬೇಕು, ಸ್ವಾಮಿ ಇವತ್ತು ಈ ರಿವರ್‌ಗಳ ಅಭಿವೃದ್ಧಿ ಕೆಲಸಕಾರ್ಯಗಳು ನಮ್ಮ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಆಗುತ್ತಿವೆ ಎನ್ನುವುದು ಗೊತ್ತಾಗುತ್ತದೆ. ಆದರಲ್ಲಿಯೂ ಕೂಡ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ರಿವರ್ ಯೋಜನೆಗಳಿಗೆ

ಹೆಚ್ಚಿನ ಒಂದು ಆಧ್ಯತೆಯನ್ನು ಕೊಟ್ಟುಕೊಂಡು ಬಂದಿದೆ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—Now the House stands adjourned to meet again at 2.30 p. m. today.

The House adjourned at 12–30 p.m. to meetagain at 2–30 p. m.

(The House re-assembled at 2.40 p.m.)

(Mr. Speaker in the Chair.)

MR. SPEAKER.—Sri S.R. Bommai.

SRI C. M. ARUMUGHAM.—Sir, some gudi-gudi speeches have been made. Sir, I was trying to speak on this subject. Sri Bommai is a very senior Member. I have no objection. But, you must also try to accommodate others.

MR. SPEAKER.—I have been.

SRI C. M. ARUMUGHAM.—Different shades of opinion are necessary I need not tell you that. One shade of opinion continues like a stereo-type. You must also give chance to others. By this time you should have known it. Different opinion support or oppose must be there. A different way of presenting opinion is called debate. Otherwise it is not a debate. It is nothing but an argument, arguing the same point on different lines. I am not suggesting that you are not aware of it. You are aware of it. If you give me chance I will speak. Otherwise, I am not going to speak.

MR. SPEAKER.—Am I to say as to how a Member should speak?

SRI C.M. ARUMUGHAM.—It is not like that. But, you will have to select in such a way where you would get different ideas and ways of presenting it. I may not present more intellectually than Sri Bommai. But, a crude way is also necessary.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಲ್ಲೂ ಕೂಡ ಹೊಸ ವಿಷಯಗಳನ್ನು ಹೇಳುವವರಿದ್ದಾರೆ. ಆದರೆ ಒಬ್ಬೊಬ್ಬರಿಗೆ ತುಂಬ ಟೈಂ ಆದರೆ...

MR. SPEAKER.—What do you mean? Am I preventing anybody?

SRI H.C. SRIKANTAIAH.—The Hon. Member Sri Deve Gowda ex-President of the Janata spoke, now the present President is about to speak. In the middle, he wants to speak.

SRI C.M. ARUMUGHAM.—After all Sri Deve Gowda projected party programmes and Sri Bommai will substantiate it.

MR. SPEAKER.—You also project your own party's programmes and policies. I follow the list. Otherwise, I am supposed to allow whoever catches my eyes and be done with it. This is only to accommodate the discussion properly. That is why we are following this procedure.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಆಮ್ರುಗಂರವರೂ ಕೂಡ ಒಂದು ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರಿಗೆ ತಾವು ಅವಕಾಶ ಮಾಡಿಕೊಡುತ್ತೀರಿ ಆಗ ಅವರು ತಮ್ಮ ವಿಚಾರ ಹೇಳಬಹುದು. ನನಗೆ ಈಗ ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತೇನೆ.

MR. SPEAKER.—We have to conclude to-day only. because the Hon. Chief Minister will have to start reply tomorrow morning

SRI S.R. BOMMAI.—He can reply tomorrow evening i.e., 2.30 P.M.

MR. SPEAKER.—The other two Ministers will have to reply also,

SRI S.R. BOMMAI.—There will be about 5 hours for the reply in the evening.

MR. SPEAKER.—Not five hours.

SRI S.R. BOMMAI.—I will not repeat the points. I will be as brief as possible.

SRI A. LAKSHMISAGAR.—We can sit half-an-hour more tomorrow.

MR. SPEAKER.—Let us see.

† ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ)—ಮಾನ್ಯ ಅಧ್ಯಕ್ಷರೆ, ಈ ಅಸೆಂಬ್ಲಿಯ ಕೊನೆಯ ಬಜೆಟ್ ಅಧಿವೇಶನ. ೧೯೭೮ರಲ್ಲಿ ಚುನಾವಣೆಯಾದ ಮೇಲೆ ೨ ವರ್ಷಗಳ ಕಾಲ ಶ್ರೀಮಾನ್ ದೇವರಾಜ ಅರಸ್ ಅವರ ಆಳ್ವಿಕೆಯಿತ್ತು, ಆಮೇಲೆ ಮಾನ್ಯ ಗುಂಡೂರಾಯರ ಆಳ್ವಿಕೆ ಇದೆ. ನಾವು ಶಾಸಕರಾಗಿ ಆರಿಸಿ ಬಂದಮೇಲೆ ಈ ಅವಧಿಯಲ್ಲಿ ಏನು ಸಾಧನೆಗಳನ್ನು ಮಾಡಿದ್ದೇವೆ ಎನ್ನುವುದರ ಬಗ್ಗೆ ಒಂದು ರೀತಿಯ ಅಳತೆ ಮಾಡಬೇಕಾಗಿದೆ. ಆ ಬಗ್ಗೆ ನಾವು ಆತ್ಮಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರ ಮತ್ತು ವಿರೋಧಪಕ್ಷ ಜನರ ಪ್ರತಿನಿಧಿಗಳಾಗಿ ಯಾವ ರೀತಿ ತಮ್ಮ ಪಾತ್ರವನ್ನು ನಿರ್ವಹಿಸಿವೆ, ಯಾವರೀತಿ ಅಸೆಂಬ್ಲಿಯಲ್ಲಿ ನಡೆದುಕೊಂಡಿದೆ ಎನ್ನುವುದನ್ನು ಅಳತೆಗೋಲು ಏನು ಸಾಧನ ಎನ್ನುವುದು ಬಹಳ ಪ್ರಾಮುಖ್ಯವಾದುದು. ನಾವು ಅನೇಕ ವಿಚಾರಗಳನ್ನು ಹೇಳುತ್ತೇವೆ, ಅದು ಬೇರೆ ವಿಚಾರ. ರಾಜ್ಯದ ಅಭಿವೃದ್ಧಿಗೆ, ಜನತೆಗೆ ಅದರಲ್ಲೂ ಬಡತನದ ರೇಖೆಗಿಂತ ಕೆಳಗೆ ಇರತಕ್ಕವರಿಗೆ, ಬಡ ಜನರಿಗೆ, ಹಿಂದುಳಿದವರಿಗೆ, ಹರಿಜನರಿಗೆ ಸರ್ಕಾರ ಎಷ್ಟು ರೀತಿಯಿಂದ ಅನುಕೂಲತೆಗಳನ್ನು ಮಾಡಿಕೊಟ್ಟಿದೆ, ವಿರೋಧ ಪಕ್ಷವು ಏನು ಹೋರಾಟ ಮಾಡಿದೆ—ಈ ಎರಡು ಪಾತ್ರಗಳನ್ನೂ ಇವತ್ತು ನೋಡಬೇಕಾಗಿದೆ, ನಿನ್ನೆ ಗೆಳೆಯ ದೇವೇಗೌಡರು ಮಾತನಾಡಿದರು. ಮಾನ್ಯ ಆಮ್ರುಗಂರವರು ಹೇಳಿದಹಾಗೆ ಅವರ ಮಾತಿನಲ್ಲಿ ಒಂದೆರಡು ಪ್ರಾಮುಖ್ಯವಾದಂಥ ವಿಚಾರಗಳು ಬಂದವು. ಅವರು ಆ ವಿಷಯಗಳನ್ನು ಎತ್ತಿದರು, ಅದಕ್ಕೆ ಪೂರ್ಣವಾಗಿ ಉತ್ತರ ಕೊಡದೆ ಬೇರೆ ಸೂಚಿತವಾಗಿ ಹೇಳಿದರು, ಅವರು ಜಾತೀಯ ರಾಜಕಾರಣದ ಬಗ್ಗೆ ಹೇಳಿದರು, ಸಾಮಾಜಿಕ ನ್ಯಾಯದ ಬಗ್ಗೆ ಹೇಳಿದರು, ಭ್ರಷ್ಟಾಚಾರದ ಬಗ್ಗೆ ಹೇಳಿದರು ಆಡಳಿತದ ಬಗ್ಗೆ ಹೇಳಿದರು ಮತ್ತೆ ಈ ರಾಷ್ಟ್ರದಲ್ಲಿ ರಾಜಕಾರಣಿಗಳ ಬಗ್ಗೆ ಒಂದು ರೀತಿಯಾಗಿ ನಂಬಿಕೆ ಹೋಗುತ್ತಿದೆ ಎನ್ನುವ ಮಾತನ್ನು ಹೇಳಿದರು. ಮಾನ್ಯ ಅಧ್ಯಕ್ಷರೆ, ನಾನು ನಿರಾಶಾವಾದಿಯಲ್ಲ ಎಂದು ನನ್ನ ಭಾಷಣದ ಪ್ರಥಮದಲ್ಲಿ ಹೇಳಬಯಸುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ಬಹಳ ಹಳೆಯ ಕಾಲದ ನಾಣ್ನುಡಿ ಇದೆ. ಇಂಗ್ಲೆಂಡಿನಲ್ಲಿ ಒಬ್ಬ ದೊಡ್ಡ ಪ್ರಮುಖ ರಾಜಕೀಯ ವಿಚಾರವಂತ ಹೇಳಿದಂಥ ಮಾತು

'Politics is the last resort of a scoundrel' ಎಂದು ಹೇಳಿದರು. ಈ ಮಾತಿನ ಹಿನ್ನೆಲೆಯಲ್ಲಿ ನಾವು ಇವತ್ತು ರಾಜಕಾರಣವನ್ನು ನೋಡಿದರೆ ನನಗನ್ನಿಸುತ್ತದೆ, ನನ್ನ ದೃಷ್ಟಿ ಹಾಗಿಲ್ಲ. Politics is a social science. It is a science of all sciences. ಏಕೆಂದರೆ, ಇವತ್ತು ಸಮಾಜದ ಯಾವುದೇ ಅಂಗವಾಗಲಿ, ಅಧಿಕಾರಿಗಳು ಇರಲಿ ವಿಜ್ಞಾನಿಯಾಗಲಿ, ವಿದ್ಯಾವಂತರಾಗಲಿ, ರೈತನಾಗಲಿ ಅವರ ಭವಿಷ್ಯವನ್ನು ನಿರ್ಧಾರ ಮಾಡತಕ್ಕ ಕಾರ್ಯವನ್ನು ನಾವೂ ನೀವೂ ಮಾಡುತ್ತಿದ್ದೇವೆ. ಅಂಥಾ ಅಧಿಕಾರ ನಮ್ಮ ಮೇಲಿದೆ ನಾನು ಒಂದು ಉದಾಹರಣೆ ಕೊಡುವುದಾದರೆ, ಆಟಂ ಬಾಂಬನ್ನು ವಿಜ್ಞಾನಿ ಹುಡುಕಬಹುದು. ಆದರೆ ಅದನ್ನು ಯಾವಾಗ, ಯಾವರೀತಿ ಎಲ್ಲಿ ಉಪಯೋಗ ಮಾಡಬೇಕು ಎನ್ನುವುದನ್ನು ಅಮೇರಿಕಾ ಅಧ್ಯಕ್ಷ ಅಥವಾ ಪ್ರೈಂ ಮಿನಿಸ್ಟರ್ ನಿರ್ಣಯ ಮಾಡುತ್ತಾರೆ. ಇವತ್ತು ನಾವು ಅದೇ ರೀತಿ ಆ ದೃಷ್ಟಿಯಿಂದ ನೋಡಬೇಕಾಗಿದೆ. ನಾವು ಇಂಥ ಒಂದು ಉನ್ನತ ಅಧಿಕಾರವನ್ನು ಪಡೆದುಕೊಂಡ ಮೇಲೆ ಯಾವ ರೀತಿ ನಡೆದುಕೊಂಡಿದ್ದೇವೆ ಎಂಬುದನ್ನು ನೋಡಬೇಕು. ಹಳೆಯದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಗುಂಡೂರಾಯರು ಅಧಿಕಾರಕ್ಕೆ ಬಂದಮೇಲೆ ಸ್ಪಷ್ಟವಾಗಿ ಒಂದು ಮಾತು ಹೇಳಿದರು. ಅದೇನೆಂದರೆ, ಈ ರಾಜ್ಯಕ್ಕೆ ಸ್ವಚ್ಛ ಮತ್ತು ದಕ್ಷ ಆಡಳಿತ ಕೊಡುತ್ತೇವೆಂಬ ಭರವಸೆಯನ್ನು ಕನ್ನಡ ನಾಡಿನ ಜನತೆಗೆ ಕೊಟ್ಟರು. ಅದರ ಜೊತೆಗೆ ಸರ್ವಾಂಗೀಣ ಕರ್ನಾಟಕ ರಾಜ್ಯದ ಅಭಿವೃದ್ಧಿ ಕಾರ್ಯಕ್ಕೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣ ಸಹಾಯ ಪಡೆದು ಕಾರ್ಯ ಮಾಡತಕ್ಕ ಕಂಕಣಬದ್ಧವಾದ ಮಾತುಗಳನ್ನು ಹೇಳಿದ್ದಾರೆ. ಅವುಗಳನ್ನು ಈಗ ಹೇಳುವುದಕ್ಕೆ ಸಮಯವಿಲ್ಲ. ಮೊದಲು ಅಧಿಕಾರಕ್ಕೆ ಬಂದಮೇಲೆ ರಾಜ್ಯಪಾಲರ ಭಾಷಣದಲ್ಲಿ ಮತ್ತು ಬೇರೆ ಬೇರೆ ಸಮಯಗಳಲ್ಲಿ ಹೇಳಿದ್ದಾರೆ, ಇವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಭಿನ್ನಭಿನ್ನವೇನು ಆಗಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಭೇದವಿಲ್ಲ, ಒಂದೇ ಬಾಂಧವ್ಯ ಇದೆ, ನಿಕಟ ಸಂಪರ್ಕ ಇದೆ. ಅದರ ಸದುಪಯೋಗವನ್ನು ಪಡೆದುಕೊಂಡು ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕ ವಿಚಾರವನ್ನು ಅವರು ಅಧಿಕಾರಕ್ಕೆ ಬಂದ ಅವಧಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರು ಸತ್ಕಾರ ಸಮಾರಂಭಗಳಲ್ಲಿ ಜನರ ಉತ್ಸಾಹ ನೋಡಿ ಆಡಿದ ಮಾತುಗಳ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಆದರೆ ಅವರ ಕಾಲದ ಒಂದು ಸಾಧನೆಯನ್ನು ಅಳೆಯಬೇಕಾದರೆ ಅಭಿವೃದ್ಧಿ ಕಾರ್ಯಗಳ ವಿವಿಧ ಮುಖಗಳನ್ನು ನೋಡಬೇಕಾಗುತ್ತದೆ. ಇದನ್ನು ನೋಡುವಾಗ ರಾಜ್ಯದ ಉತ್ಪಾದನೆ ಎಷ್ಟು ಹೆಚ್ಚಾಗಿದೆ, ಕರಭಾರ ಎಷ್ಟು ಹೆಚ್ಚಾಗಿದೆ, ಅದರ ಜೊತೆಗೆ ಅಭಿವೃದ್ಧಿ ಕಾರ್ಯಗಳು ಎಷ್ಟು ಆಗಿವೆ, ಅದು ನೀರಾವರಿ ಇರಬಹುದು ವಿದ್ಯುತ್ ಉತ್ಪಾದನೆ ಇರಬಹುದು ನಿರುದ್ಯೋಗ ಸಮಸ್ಯೆ ಇರಬಹುದು—ಈ ಎಲ್ಲವನ್ನು ಅಳತೆಗೋಲಿನಿಂದ ಅಳೆದು ನೋಡಬೇಕು. ಪ್ರಮುಖವಾಗಿ ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತಿದ್ದೇನೆ. ಮುಖ್ಯ ಮಂತ್ರಿಗಳು ಇವತ್ತು ನಮ್ಮ ಬಡ್ಜೆಟ್ಟಿನಲ್ಲಿರತಕ್ಕ ಹಣವನ್ನೇನು ಖರ್ಚು ಮಾಡುತ್ತಿದ್ದಾರೆ ಅದರಲ್ಲಿ ಸರ್ವೇಸಾಧಾರಣವಾಗಿ ಅವರ ಖಾತೆಗಳಿಗೆ (ಬೇಡಿಕೆಗಳ ಪ್ರಕಾರ ಹೋದರೆ) ಶೇಕಡ ೪೫ರಷ್ಟು ಹಣವನ್ನು ಇಡುತ್ತಿದ್ದಾರೆ. ಇಷ್ಟು ಖಾತೆಗಳನ್ನು ಹೊಂದಿರತಕ್ಕ ಮುಖ್ಯಮಂತ್ರಿಗಳು ಬಹುಶಃ ಯಾವ ರಾಜ್ಯದಲ್ಲಿಯೂ ಇಲ್ಲವೆಂದು ಕಾಣುತ್ತದೆ. ನಾನಂತು ಇದುವರೆಗೆ ಕೇಳಿಲ್ಲ. ಬಹುಪಾಲು ಎಲ್ಲ ದೊಡ್ಡ ದೊಡ್ಡ ಖಾತೆಗಳು ಅವರ ಕೈಯಲ್ಲಿವೆ. ಆದರೆ ಇದು ಅನಾವಶ್ಯಕ ಯಾವ ಖಾತೆಗಳನ್ನು ಇಟ್ಟುಕೊಳ್ಳಬೇಕು ಬಿಡಬೇಕೆಂಬುದು ಅವರಿಗೆ ಬಿಟ್ಟದ್ದು. ಆದರೆ ಒಂದಾಗಿದೆ ಇಷ್ಟೊಂದು ಮಹತ್ವದ ಖಾತೆಗಳನ್ನು ಇಟ್ಟುಕೊಂಡು ಕೆಲಸ ಮಾಡುವಾಗ ಯಾವ ರೀತಿಯಾಗಿ ಆ ಖಾತೆಗಳಲ್ಲಿ ಸಾಧನೆಯಾಗಿದೆ ಎಂಬುದನ್ನು ನೋಡಬೇಕಾಗುತ್ತದೆ. ಅವರ ಜೊತೆಗೆ ಸಮಗ್ರವಾಗಿ ಸರ್ಕಾರದ ಸಾಧನೆಯನ್ನು ನೋಡಬೇಕಾಗುತ್ತದೆ. ಇಲ್ಲಿ ಮಾತನಾಡುವಾಗ ಅನೇಕ ಸಲ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ ಅದೇನೆಂದರೆ ಹಿಂದಿನ ಸರ್ಕಾರಗಳು ಏನು ಹೆಚ್ಚಿನ ಸಾಧನೆ ಮಾಡಲಿಲ್ಲ ನಮ್ಮ ಸರ್ಕಾರ ಬಂದಮೇಲೆ ಹೆಚ್ಚಿನ ಸಾಧನೆ ಮಾಡಿದ್ದೇವೆಂಬ ಮಾತು ಆಗಾಗ್ಗೆ ಬರುತ್ತಿರುತ್ತದೆ. ಆದಕ್ಕಾಗಿ ಈ ಸದನದ ಸಮಯವನ್ನು ಹೆಚ್ಚು ತೆಗೆದುಕೊಳ್ಳಬಾರದೆಂಬ ದೃಷ್ಟಿಯಿಂದ ಕೆಲವು ಅಂಕಿ ಸಂಖ್ಯೆಗಳನ್ನು ಕೂಡಿ ಹಾಕಿದ್ದೇವೆ, ಇದು ನಿಮ್ಮ ಸಾಧನೆಯ ಅಳತೆಗೋಲು, ಇವತ್ತು ರಾಜ್ಯದ ಉತ್ಪಾದನೆಯ ಬಗ್ಗೆ ಹೇಳುವಾಗ ಈ ಅಳತೆಗೋಲನ್ನು ಉಪಯೋಗಿಸಬೇಕಾಗುತ್ತದೆ. ಇದನ್ನು ಉಪಯೋಗಿಸುವಾಗ ೩ ವರ್ಗಗಳನ್ನು ತೆಗೆದುಕೊಂಡಿದ್ದೇವೆ. ಆ ಪ್ರಕಾರ ೧೯೬೦-೬೧ ರಿಂದ ೧೯೭೧-೭೨ರವರೆಗೆ ರಾಜ್ಯದಲ್ಲಿ ಏನಾಗಿದೆ, ೧೯೭೭-೭೮ರಿಂದ ೧೯೭೮-೭೯ರವರೆಗೆ ಏನಾಗಿದೆ ಮತ್ತು ಕಳೆದ ೨-೩ ವರ್ಷಗಳಿಂದ ಏನಾಗಿದೆ ಎಂಬುದನ್ನು ಸಮಗ್ರವಾಗಿ ನೋಡಬೇಕಾಗುತ್ತದೆ. ಅದರಲ್ಲಿ ಕೊನೆಯ-

ಭಾಗ ಬಹಳ ಮಹತ್ವದ್ದು. ಹಿಂದೆ ಯಾವುದೋ ಒಂದು ಕೋಮಿನವರು ಇದ್ದರು, ಈಗ ಮತ್ತೊಂದು ಕೋಮಿನವರು ಬಂದಿದ್ದಾರೆಂಬುದಕ್ಕೆ ಇದು ಕೋಮಿನ ವಿಚಾರ ಅಲ್ಲ. ಜಾತಿ ಆಧಾರದ ಮೇಲೆ ಮುಖ್ಯಮಂತ್ರಿಗಳ ಸಾಧನೆಯನ್ನು ಅಳೆಯುವುದಕ್ಕಾಗುವುದಿಲ್ಲ. ಸರ್ಕಾರ ಮಾಡಿದತಕ್ಕ ಸಾಧನೆಗಳ ಮೇಲೆ ಅಳೆಯಬೇಕಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ೧೯೬೦-೬೧ರಲ್ಲಿ ರಾಜ್ಯದ ಉತ್ಪನ್ನ ೬೬೭.೪ ಕೋಟಿ ರೂಪಾಯಿ ಇದ್ದರೆ ೭೧-೭೨ರಲ್ಲಿ ೧೬೩೨.೧೨ ಕೋಟಿ ಆಯಿತು. ಅಂದಾಗ ಹೆಚ್ಚಾದದ್ದು ೯೬೪ ಕೋಟಿ ರೂಪಾಯಿಗಳು. ೧೯೭೭-೭೮ರಲ್ಲಿ ೨೯೧೩ ಕೋಟಿ ರೂಪಾಯಿ ಆಯಿತು. ಅಂದಾಗ ೧೯೭೧-೭೨ರಿಂದ ೧೯೭೭-೭೮ರವರೆಗೆ ಹೆಚ್ಚಾದದ್ದು ೧೨೮೦ಕೋಟಿ ರೂಪಾಯಿಗಳು. ೧೯೭೯-೮೦ರಿಂದ ೩ ವರ್ಷಗಳಲ್ಲಿ ೯೫೩ಕೋಟಿ ರೂಪಾಯಿಗಳ ಉತ್ಪಾದನೆ ಜಾಸ್ತಿಯಾಗಿದೆ. ಅಂದರೆ ೧೯೮೧-೮೨ರಲ್ಲಿ ನಮ್ಮ ರಾಜ್ಯದ ಉತ್ಪಾದನೆ ೫೬೬೦ ಕೋಟಿ ರೂಪಾಯಿಗಳು. ಇದನ್ನು ೧೯೭೦-೭೧ರ ಬೇಸಿಸ್ ಮೇಲೆ ತೆಗೆದುಕೊಂಡಾಗ ಲೆಕ್ಕ ಸರಿಯಾಗಿ ಗೊತ್ತಾಗುತ್ತದೆ. ಏತಕ್ಕೆಂದರೆ ರೂಪಾಯಿಯ ಮೌಲ್ಯ ೧೯೬೦-೬೧ರಲ್ಲಿ ಎಷ್ಟಿತ್ತು, ೧೯೭೧-೭೨ರಲ್ಲಿ ಎಷ್ಟಿತ್ತು ೧೯೮೧-೮೨ರಲ್ಲಿ ಎಷ್ಟಿದೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ಅವತ್ತು ಒಂದು ರೂಪಾಯಿ ಇದ್ದರೆ ಇವತ್ತು ಅದರ ಮೌಲ್ಯ ೨೩ ಪೈಸೆಗೆ ಇಳಿದಿದೆ. ಆ ಬೇಸಿಸ್ ಮೇಲೆ ನೋಡಿದಾಗ ೧೯೭೦-೭೧ರ ಲೆಕ್ಕ ತೆಗೆದುಕೊಂಡರೆ ಇನ್‌ಕ್ರೀಸ್ ಪರ್ಸೆಂಟೇಜ್ ಬಹಳ ಕಡಿಮೆಯಾಗುತ್ತದೆ. ಈಗ ಆ ವಿವರಗಳಿಗೆ ಹೋಗುವುದಿಲ್ಲ. ರಾಜ್ಯದ ಉತ್ಪಾದನೆ ಹೆಚ್ಚಾಗಿದೆ ಅಂದಮೇಲೆ ಜನಸಾಮಾನ್ಯರ ಸಂಪತ್ತು ಬೆಳೆದಿರಬೇಕು. ಅಂದಾಗ ತಲಾ ವರಮಾನ ಎಷ್ಟು ಎಂಬುದನ್ನು ನೋಡಬೇಕಾಗುತ್ತದೆ. ೧೯೬೦-೬೧ರಲ್ಲಿ ತಲಾ ವರಮಾನ ೨೮೫ರೂಪಾಯಿಗಳಿದ್ದರೆ ೧೯೭೧-೭೨ರಲ್ಲಿ ೫೪೦ ರೂಪಾಯಿಗಳಾಗಿದೆ, ಅಂದರೆ ೨೫೫ ರೂಪಾಯಿ ಹೆಚ್ಚಾಗಿದೆ. ೧೯೭೭-೭೮ರಲ್ಲಿ ೮೪೦ ರೂಪಾಯಿ ಆಗಿದೆ ಅಂದಾಗ ೩೦೦ ರೂಪಾಯಿ ಹೆಚ್ಚಾಗಿದೆ. ಇತ್ತೀಚಿನ ೬ ವರ್ಷಗಳಲ್ಲಿ ೬೯೫ರೂಪಾಯಿ ಜಾಸ್ತಿಯಾಗಿದೆ. ಇದನ್ನು ಕರೆಂಟ್ ಪ್ರೈಸಿನ ಆಧಾರದ ಮೇಲೆ ಹೇಳಿದ್ದಾರೆ. ೧೯೭೦-೭೧ರ ಲೆಕ್ಕವನ್ನು ನೋಡಿದರೆ ಇದರ ಸಾಧನೆ ಗೊತ್ತಾಗುತ್ತದೆ ೧೯೭೮-೭೯ರಲ್ಲಿ ೭೨೨ ರೂಪಾಯಿ ಇದ್ದರೆ ೧೯೭೯-೮೦ರಲ್ಲಿ ೬೯೬ ರೂಪಾಯಿಗೆ ಇಳಿದಿದೆ, ೧೯೮೦-೮೧ರಲ್ಲಿ ೬೫೨ರೂಪಾಯಿಗಳೂ ೧೯೮೧-೮೨ರಲ್ಲಿ ೬೭೨ರೂಪಾಯಿಗಳೂ ಆಗಿದೆ. ೧೯೬೦-೬೧ ಮತ್ತು ೧೯೭೧-೭೨ರ ಆಧಾರದ ಮೇಲೆ ನೋಡುವುದಾದರೆ ಯಾವ ರೀತಿ ಹೆಚ್ಚಾಗಿದೆ ಎಂಬುದು ಗೊತ್ತಾಗುತ್ತದೆ. ೧೯೭೮-೭೯ರಲ್ಲಿ ೭೨೨ ರೂಪಾಯಿ ಇದ್ದರೆ ಇವತ್ತು ೬೭೨ ರೂಪಾಯಿ ಆಗಿದೆ, ಅಂದರೆ ಕಡಿಮೆಯಾಗಿದೆ. ಇವತ್ತಿನ ದಿವಸ ರಾಜ್ಯದ ವರಮಾನ ಹೆಚ್ಚಾಗಿದ್ದರೆ ತಲಾ ವರಮಾನ ಕಡಿಮೆಯಾಗಿದೆ.

ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ರಾಜ್ಯದ ವ್ಯಕ್ತಿಯ ಉತ್ಪಾದನೆ ಹೆಚ್ಚಾಗಬೇಕು ಎಂಬ ದೃಷ್ಟಿಯಿಂದ. ಸರ್ಕಾರದ ಉತ್ಪಾದನೆ ಹೆಚ್ಚಾಗಬಹುದು. ಆದರೆ ವ್ಯಕ್ತಿಯ ಉತ್ಪಾದನೆ ಹೆಚ್ಚಾಗಬೇಕು ? ಇನ್ನು ತೆರಿಗೆ ಬಗ್ಗೆ ಹೇಳುತ್ತೇನೆ. ಪರ್ ಕ್ಯಾಪಿಟಾ ಟ್ಯಾಕ್ಸೇಷನ್ ಎಷ್ಟು ಹೆಚ್ಚಾಗಿದೆ ಎಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ೧೯೭೮-೭೯ನೇ ಸಾಲಿನ ಅಂಕಿಅಂಶವನ್ನು ನಾನು ಕೊಡುತ್ತೇನೆ. ಪರ್‌ಕ್ಯಾಪಿಟಾ ಟ್ಯಾಕ್ಸೇಷನ್ ಕರ್ನಾಟಕ ರಾಜ್ಯದಲ್ಲಿ ರೂ. ೧೦೯-೫೦, ಆಂಧ್ರ ಪ್ರದೇಶದಲ್ಲಿ ರೂ. ೯೨-೫೦, ತಮಿಳುನಾಡಿನಲ್ಲಿ ೧೦೩-೦೦, ಕೇರಳ ರೂ. ೧೦೨-೦೦, ಪಶ್ಚಿಮ ಬಂಗಾಳದಲ್ಲಿ ರೂ. ೮೬-೮೦, ಉತ್ತರ ಪ್ರದೇಶದಲ್ಲಿ ರೂ. ೬೪-೮೦, ಅಸ್ಸಾಂನಲ್ಲಿ ರೂ. ೫೦-೧೦. ಬಿಹಾರದಲ್ಲಿ ರೂ. ೫೯-೪೦, ಒರಿಸ್ಸಾದಲ್ಲಿ ರೂ. ೫೭-೫೦ ರಾಜಸ್ಥಾನದಲ್ಲಿ ರೂ ೭೩-೨೦, ೧೯೭೮-೭೯ ರಲ್ಲಿ ಕರ್ನಾಟಕದಲ್ಲಿ ೧೦೯ ರೂಪಾಯಿ ಪರ್‌ಕ್ಯಾಪಿಟಾ ಟ್ಯಾಕ್ಸೇಷನ್ ಇದ್ದರೆ ೧೯೮೧-೮೨ ರಲ್ಲಿ ಅದು ರೂ. ೨೦೬ ೪೨ ಆಗಿದೆ. ಕನ್ನಡಿಗ ಕೊಡತಕ್ಕ ತಲಾ ತೆರಿಗೆ ಮೊದಲಿಗೆ ಹೋಲಿಸಿದರೆ ಎರಡರಷ್ಟಾಗಿದೆ. ಕೊಡತಕ್ಕ ಕರಭಾರ ಜಾಸ್ತಿಯಾದರೆ ತಲಾವರಮಾನ ಕಡಿಮೆಯಾಗುತ್ತದೆ. ಇದು ಬಹಳ ಮಹತ್ವದ ವಿಷಯ. ಪರ್‌ಕ್ಯಾಪಿಟಾ ಟ್ಯಾಕ್ಸೇಷನ್ ೮೧-೮೨ ರಲ್ಲಿ ಕರ್ನಾಟಕದಲ್ಲಿ ೨೦೬ ರೂಪಾಯಿ ೪೨ ಪೈಸೆ ಇದ್ದರೆ ಆಂಧ್ರ ಪ್ರದೇಶದಲ್ಲಿ ರೂ. ೧೮೩-೧೦, ತಮಿಳುನಾಡಿನಲ್ಲಿ ರೂ. ೧೯೧-೫೭, ಕೇರಳದಲ್ಲಿ ೨೦೮ ರೂಪಾಯಿ ೫೨ ಪೈಸೆ, ಪಶ್ಚಿಮ ಬಂಗಾಳದಲ್ಲಿ ರೂ. ೧೮೨-೦೮, ಉತ್ತರ ಪ್ರದೇಶದಲ್ಲಿ ೧೨೫.೩೫, ಅಸ್ಸಾಂನಲ್ಲಿ ರೂ. ೧೦೫-೩೧. ಒರಿಸ್ಸಾದಲ್ಲಿ ರೂ. ೧೨೦-೪೪ ಬಿಹಾರದಲ್ಲಿ ೧೧೭.೦೭ ರೂಪಾಯಿ, ರಾಜಸ್ಥಾನದಲ್ಲಿ ೧೪೨-೭೯ ರೂಪಾಯಿ, ಎಲ್ಲಾ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಹಾಕುವ ತೆರಿಗೆ ಜಾಸ್ತಿಯಾಗಿದೆ. ಪಂಜಾಬಿನ ಅಂಕಿ ಸಂಖ್ಯೆ ನನಗೆ ಸಿಕ್ಕಿಲ್ಲ. ನನಗೆ ಗೊತ್ತಿರುವ ಹಾಗೆ ಪಂಜಾಬಿನ ನಂತರ ನಮ್ಮ ರಾಜ್ಯ ಬರಬಹುದು. ಪರ್‌ಕ್ಯಾಪಿಟಾ ಟ್ಯಾಕ್ಸೇಷನ್‌ನಲ್ಲಿ

ನಮ್ಮ ರಾಜ್ಯ ಎರಡನೇ ಸ್ಥಾನಕ್ಕೆ ಬಂದರೆ ಪರ್‌ಕ್ಯಾಪಿಟಾ ಇನ್‌ಕಂನಲ್ಲಿ ೧೧–೧೨ನೇ ಸ್ಥಾನದಲ್ಲಿದೆ. ಇನ್ನು ಸಾಧನೆಗಳನ್ನು ನೋಡುವುದಾದರೆ ವಿದ್ಯುಚ್ಛಕ್ತಿ ಎಷ್ಟಾಗಿದೆ ಸ್ವಾಮಿ ? ಇನ ಸ್ಟಾಲ್ಡ್ ಕೆಪಾಸಿಟಿ, ಮೆಗಾವಾಟ್ಸ್‌ನಲ್ಲಿ ಹೇಳುತ್ತಿದ್ದೇನೆ. ೧೯೬೦–೬೧ರಲ್ಲಿ ೧೮೫.೭, ೧೯೭೧–೭೨ ರಲ್ಲಿ ೯೬೬.೬, ಹೆಚ್ಚಾಗಿರುವುದು ೭೮೦,೯ ಮೆಗಾವಾಟ್ಸ್, ೧೯೭೭–೭೮ ರವರೆಗೆ ಹೆಚ್ಚಾಗಿರುವುದು ೧೦೭.೮, ಇವತ್ತು ತಾವು ಅಧಿಕಾರಕ್ಕೆ ಬಂದ ಮೇಲೆ ಮೂರು ವರ್ಷಗಳಲ್ಲಿ ಹೆಚ್ಚಾಗಿರುವುದು ೨೬೧.೬೬೬. ಎನರ್ಜಿ ಜನರೇಟ್ ಆಗಿರುವುದು. ಮೊದಲನೇ ಪೀರಿಯಡ್‌ನಲ್ಲಿ ಹೆಚ್ಚಾದದ್ದು ೩೮೪೦ ಮೆಗಾವಾಟ್ಸ್, ೨ನೇ ಪೀರಿಯಡ್‌ನಲ್ಲಿ ೨೧೦ ಮೆಗಾವಾಟ್ಸ್, ಇವತ್ತು ೪೬೮.೬೯೩ ಮೆಗಾವಾಟ್ಸ್. ಹಳ್ಳಿಗಳಿಗೆ ವಿದ್ಯುತ್ತೀಕರಣ ಮಾಡಿರುವ ಬಗ್ಗೆ ಹೇಳುವುದಾದರೆ ಐ. ಪಿ. ಸೆಟ್‌ಗೆ ವಿದ್ಯುಚ್ಛಕ್ತಿ ಕೊಟ್ಟಿರುವುದು ೧೯೬೧–೬೨ರಲ್ಲಿ ೪೦೬೩ ಹಳ್ಳಿಗಳಿಗೆ ಕೊಟ್ಟಿದ್ದಾರೆ. ೧೯೭೧–೭೨ ರಲ್ಲಿ ೧೦೦೭೫, ೧೦ ವರ್ಷದ ಅವಧಿಯಲ್ಲಿ ಹೆಚ್ಚಾಗಿರುವುದು ೬೦೧೨ ಹಳ್ಳಿಗಳು ಮುಂದಿನ ೬ ವರ್ಷದ ಅವಧಿಯಲ್ಲಿ ೫೦೮೫ ಹಳ್ಳಿಗಳಲ್ಲಿ ಹೆಚ್ಚು ಕೊಟ್ಟಿದ್ದಾರೆ. ತಾವು ಅಧಿಕಾರಕ್ಕೆ ಬಂದಮೇಲೆ ೩ ವರ್ಷಗಳಲ್ಲಿ ೧೫೩೫ ಹಳ್ಳಿಗೆ ಕೊಟ್ಟಿದ್ದೀರಿ. ವರ್ಷಕ್ಕೆ ೫೦೦ ಕೊಟ್ಟಹಾಗಾಯಿತು, ಐ. ಪಿ. ಸೆಟ್ಸ್‌ಗೆ ಹೆಚ್ಚು ಕೊಟ್ಟಿರುವುದನ್ನು, ಹೇಳುತ್ತೇನೆ. ೧೯೬೧–೬೨ರಲ್ಲಿ ೧೬೮. ೧೯೭೧–೭೨ ರಲ್ಲಿ ೧೪೯೬, ಹೆಚ್ಚಾಗಿರುವುದು ೧೩೨೮, ಅರಸು ಅವರ ಕಾಲಾವಧಿಯಲ್ಲಿ ೧೯೯೭ ಹೆಚ್ಚಾಗಿವೆ ತಮ್ಮ ಮೂರು ವರ್ಷದ ಅವಧಿಯಲ್ಲಿ ೧೩,೦೧೧ ಹೆಚ್ಚಾಗಿದೆ, ಐ. ಪಿ. ಸೆಟ್ಸ್‌ಗಳಿಗೆ ಕೊಡುವುದು ಜಾಸ್ತಿಯಾಗಿದ್ದರೆ ರೂರಲ್ ಎಲೆಕ್ಟ್ರಿಫಿಕೇಷನ್ ಕಡಿಮೆಯಾಗಿದೆ. ನೀರಾವರಿ ಬಹಳ ಮಹತ್ವವಾದ ಅಂಶ. ಕರ್ನಾಟಕ ಏಕೀಕರಣ ಆದ ಮೇಲೆ ಆ ಕೆಲಸ ಬಹಳ ಮಂದಗತಿಯಿಂದ ನಡೆಯುತ್ತಿದೆ ಎಂದು ನಾನು ಪದೇ ಪದೇ ಹೇಳಿದ್ದೇನೆ. ೧೯೬೧–೬೨ರಲ್ಲಿ ೮.೫೮ ಲಕ್ಷ ಎಕರೆ ನೀರಾವರಿಯಾಗಿದ್ದರೆ ೧೯೭೧–೭೨ರಲ್ಲಿ ೧೩.೭೮ ಲಕ್ಷ ಆಗಿದೆ. ೧೯೭೧–೭೨ ರ ವರೆಗೆ ೫.೨೦ ಲಕ್ಷ ಎಕರೆ ಹೆಚ್ಚಾಗಿದ್ದರೆ ೧೯೭೭–೭೮ ರ ವರೆಗೆ ೬,೫೫,೦೦೦ ಆಗಿದೆ ನೀವು ಬಂದಮೇಲೆ ಮೂರು ವರ್ಷದ ಅವಧಿಯಲ್ಲಿ ೪.೧೯ ಲಕ್ಷ ಹೆಚ್ಚಾಗಿದೆ; ಅಂದರೆ ವರ್ಷಕ್ಕೆ ೧ ಲಕ್ಷ ಆಯಿತು. ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಆಗ ೧೦ ವರ್ಷಗಳಲ್ಲಿ ೨.೨೩ ಲಕ್ಷ ಎಕರೆಯಷ್ಟು ಹೆಚ್ಚಾಗಿದ್ದರೆ ಅರಸು ಅವರ ಕಾಲದಲ್ಲಿ ೨.೭೦ ಲಕ್ಷ ಹೆಚ್ಚಾಗಿದೆ. ನಿಮ್ಮ ಕಾಲದಲ್ಲಿ ಅಂದರೆ ಮೂರು ವರ್ಷದಲ್ಲಿ ೦.೫೯ ಲಕ್ಷ ಆಗಿದೆ. ಇದು ಬಹಳ ಕಡಿಮೆ. ಸಣ್ಣ ನೀರಾವರಿ ಮೊದಲಿನ ೧೧ ವರ್ಷದ ಅವಧಿಯಲ್ಲಿ ೨.೯೭ ಲಕ್ಷ ಎಕರೆ, ಅರಸು ಅವಧಿಯಲ್ಲಿ ೩.೮೫ ಲಕ್ಷ, ನಿಮ್ಮ ಅವಧಿಯಲ್ಲಿ ೦.೪೫ ಲಕ್ಷ ಹೆಚ್ಚಾಗಿದೆ. ಸಾಧನೆ ದೃಷ್ಟಿಯಿಂದ ಇದನ್ನು ನೋಡಬೇಕು. ಅದೇ ರೀತಿ ರಸ್ತೆಗಳು ಮತ್ತು ಶಾಲೆಗಳ ಬಗ್ಗೆ ಹೇಳುವುದಾದರೆ ಮೊದಲನೇ ಅವಧಿಯಲ್ಲಿ ಪ್ರಾಥಮಿಕ ಶಾಲೆಗಳು ೮,೯೮೬ ಹೆಚ್ಚಾಗಿವೆ, ಎರಡನೆ ಅವಧಿಯಲ್ಲಿ ೫೬೫ ಆಗಿದೆ. ಸೆಕೆಂಡರಿ ಶಾಲೆಗಳು ೩೩೧ ಆಗಿವೆ. ತಮ್ಮ ಮೂರು ವರ್ಷದ ಅವಧಿಯಲ್ಲಿ ೫೫೪ ಹೆಚ್ಚಾಗಿವೆ, ಹೈಸ್ಕೂಲುಗಳು ಮೊದಲಿನ ೧೦ ವರ್ಷದ ಅವಧಿಯಲ್ಲಿ ೧೨೮೨, ೨ನೇ ಅವಧಿಯಲ್ಲಿ ೩೩೧, ತಮ್ಮ ಅವಧಿಯಲ್ಲಿ ೫೮. ಹೆಚ್ಚಾಗಿದೆ ಇಂಜಿನಿಯರ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಬಹಳ ಮಾಡಿದ್ದೀರಿ. ಅದರ ಬಗ್ಗೆ ಆಮೇಲೆ ಹೇಳುತ್ತೇನೆ. ರಸ್ತೆಗಳು, ಮೊದಲು ೩೦,೬೮೬ ಕಿಲೋಮೀಟರುಗಳು ಹೆಚ್ಚಾಗಿತ್ತು. ಆಮೇಲೆ ೧೫,೬೪೪ ಆಯಿತು. ತಮ್ಮ ಅವಧಿಯಲ್ಲಿ ಹೆಚ್ಚಾದದ್ದು ೫,೯೪೫ ಕಿಲೋಮೀಟರ್‌ಗಳು. ಸರ್ಫೇಸ್ ರೋಡ್ಸ್ ಮೊದಲನೇ ಅವಧಿಯಲ್ಲಿ ೧೫,೬೩೦ ಕಿಲೋಮೀಟರ್‌ಗಳು, ಎರಡನೇ ಅವಧಿಯಲ್ಲಿ ೧೧,೦೫೩ ಕಿಲೋಮೀಟರುಗಳು, ತಮ್ಮ ಅವಧಿಯಲ್ಲಿ ೬೦೧೩ ಕಿಲೋಮೀಟರುಗಳು ಅನ್–ಸರ್ಫೇಸ್ ರೋಡ್ಸ್ ಮೊದಲನೇ ಪೀರಿಯಡ್‌ನಲ್ಲಿ ೧೫೫೬, ೨ನೇ ಅವಧಿಯಲ್ಲಿ ೫೫೯೧ ಕಿಲೋಮೀಟರುಗಳು ಹೆಚ್ಚಾಗಿದೆ. ತಮ್ಮ ಕಾಲದಲ್ಲಿ ಹೆಚ್ಚಾದದ್ದು ೭೨೫ ಕಿಲೋಮೀಟರುಗಳು ಮಾತ್ರ. ಈ ಎಲ್ಲ ಅಂಕಿ ಸಂಖ್ಯೆಗಳನ್ನು ತಾವು ಒದಗಿಸಿದ ಸರ್ಕಾರಿ ಪ್ರಕಟಣೆಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಇದೇನೂ ಸ್ವಂತದ್ದಲ್ಲ.

ಶ್ರೀ ವೈ. ರಾಮಕೃಷ್ಣ.—ಕಂಪ್ಯಾರಿಸನ್ ನಿಮ್ಮದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇರಿಗೇಷನ್ ಪೊಟೆನ್‌ಷಿಯಲ್ ೦.೫೯ ಎಂದು ಹೇಳಿದ್ದಿರಲ್ಲಾ..............

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಮೈನರ್ ಇರಿಗೇಷನದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮೈನರ್ ಇರಿಗೇಷನ್‌ದಾ ? ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ನಲ್ಲಿ ಒಟ್ಟು...............

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆ ಬರುತ್ತೇನೆ.

ಅಧ್ಯಕ್ಷರು.- ಇವನ್ನೆಲ್ಲಾ ಜನರಲ್ ಡಿಸ್‌ಕಷನ್‌ನಲ್ಲಿ ಹೇಳಬಹುದು.

ಶ್ರೀ ಎಸ್ ಆರ್. ಬೊಮ್ಮಾಯಿ.—ಅದನ್ನು ಬಿಟ್ಟುಬಿಡುತ್ತೇನೆ. ನಾನು ಏತಕ್ಕೆ ಇದನ್ನೆಲ್ಲಾ ಹೇಳಬೇಕಾಗಿದೆ ಎಂಬುದನ್ನು ಪ್ರಥಮದಲ್ಲಿ ಹೇಳಿದ್ದೇನೆ. ಸರ್ಕಾರವನ್ನು ಟೀಕೆ ಮಾಡಬೇಕಾದರೆ, ಅದರ ಸಾಧನೆಗಳ ಬಗ್ಗೆ ಹೇಳಬೇಕಾದರೆ ಈ ರೀತಿಯಿಂದ ಹೇಳುವುದು ಸೂಕ್ತವೆಂದು ನಾನು ತಿಳಿದು ಕೊಂಡಿದ್ದೇನೆ.

ಏನಾಗಿದೆ ಎಂದರೆ ಈ ಅವಧಿಯಲ್ಲಿ ಇದೇ ಅಳತೆಗೋಲು ಆಗಬೇಕೇ ಹೊರತು ಯಾರು ಮಂತ್ರಿಯಾಗಿ ದ್ದಾನೆ, ಯಾವ ಜಾತಿಯವನು ಮಂತ್ರಿಯಾಗಿದ್ದಾನೆ ಎಂಬುದು ಮುಖ್ಯವಲ್ಲ. ಈ ಸರ್ಕಾರ ಬಂದಮೇಲೆ ಕಾರ್ಪೊರೇಷನ್‌ಗೆ ಏನು ಕೊಡಬೇಕಾಗಿತ್ತೋ ಅದರಲ್ಲೂ ಕೃಷಿ, ಪವರ್, ಇಂಡಸ್ಟ್ರೀಸ್, ಸೋಷಿಯಲ್ ವೆಲ್‌ಫೇರ್, ಇವುಗಳಿಗೆ ಕೊಡಬೇಕಾದ ಹಣದ ಬಗ್ಗೆ ಕಡಿಮೆ ಆಗಿದೆ. ತಮಗೆ ಗೊತ್ತಿರುವುದರಿಂದ ಇದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡಬೇಕಾಗಿಲ್ಲ. ಇವತ್ತು ಕೃಷಿ ಉತ್ಪಾದನೆ ಹೆಚ್ಚಿಗೆ ಆಗದೆ ಹೋದರೆ ರಾಷ್ಟ್ರಕ್ಕೆ ಭವಿಷ್ಯವಿಲ್ಲ. ನಮ್ಮ ರಾಜ್ಯ ಮತ್ತು ರಾಷ್ಟ್ರ ಮುಖ್ಯವಾಗಿ ಕೃಷಿಯನ್ನೇ ಅವಲಂಬಿ ಸಿರತಕ್ಕದ್ದು. ತಮ್ಮ ಬಜೆಟ್‌ನಲ್ಲಿ ಅಗ್ರಿಕಲ್ಚರ್, ಕೋಆಪರೇಟಿವ್, ಇದಕ್ಕೆಲ್ಲಾ ಬಹಳ ಕಡಿಮೆ ಹಣ ವನ್ನು ಗೊತ್ತು ಮಾಡಿದ್ದೀರಿ. ಅಗ್ರಿಕಲ್ಚರ್‌ಗೆ ಮೊದಲು ಎಕ್ಸ್‌ಪೆಂಡಿಚರ್ ಇದ್ದುದು, ೨೪.೬೦ ಪರ್ಸೆಂಟ್, ಬಜೆಟ್ ನಂತರ ೧೫.೯೫ಕ್ಕೆ ಪರ್ಸೆಂಟ್ ಆಗಿ ಈಗ ೧೬.೧೯ ಪರ್ಸೆಂಟ್‌ಗೆ ಬಂದಿದೆ. ಕೋಆಪರೇಟಿವ್‌ಗೆ ಮೊದಲು ೬.೬೯ ಪರ್ಸೆಂಟ್ ಇದ್ದುದು ಅನಂತರ ೪.೪೨ ಪರ್ಸೆಂಟ್ ಆಯಿತು. ಅನಂತರ ೩.೩೭ ಪರ್ಸೆಂಟ್ ಆಗಿ ಈಗ ೩.೨೮ ಪರ್ಸೆಂಟ್‌ಗೆ ಬಂದಿದೆ. ಅದೆ ರೀತಿ ಇಂಡಸ್ಟ್ರಿ ಬಗ್ಗೆ ಕೂಡ ಹಿಂದೆ ೫.೮೬ ಪರ್ಸೆಂಟ್ ಇದ್ದುದು ೪.೨೬ ಪರ್ಸೆಂಟ್‌ಗೆ ಬಂದು ಇವತ್ತು ೯.೬೨ ಪರ್ಸೆಂಟ್ ಆಗಿದೆ. ಅದೇ ರೀತಿ ಸೋಷಿಯಲ್ ಅಂಡ್ ಕಮ್ಯೂನಿಟಿ ಸರ್ವೀಸಸ್‌ಗೆ ೧೯೬೯-೭೦ರಲ್ಲಿ ೨೯.೨೯ ಪರ್ಸೆಂಟ್ ಇದ್ದರೆ ೭೯-೮೦ನೇ ಸಾಲಿನಲ್ಲಿ ೧೯.೮೨ ಪರ್ಸೆಂಟ್‌ಗೆ ಇಳಿದಿದೆ. ೧೯೮೦-೮೧ರಲ್ಲಿ ೧೮.೧೬ ಪರ್ಸೆಂಟ್ ಇತ್ತು.

ಮಾನ್ಯ ಅಧ್ಯಕ್ಷರೆ. ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಹಿಂದುಳಿದ ವರ್ಗದವರಿಗೆ ನೀವು ಕೊಟ್ಟಿರ ತಕ್ಕ ಹಣ ಸೋಷಿಯಲ್ ವೆಲ್‌ಫೇರ್ ಪೇಪರ್ಸ್ ಇದು ೧೯೭೯-೮೦ನೇ ಸಾಲಿಗಿಂತ ಬಹಳ ಕಡಿಮೆ ಆಗಿದೆ. ಅವರಿಗಾಗಿ ಇದರಲ್ಲಿ ಅರ್ಧ ಹಣ ಕೂಡ ಖರ್ಚಾಗಿಲ್ಲ. ಇನ್ನೂ ಅರ್ಧ ಹಣ ಉಳಿದಿದೆ. ಇದರ ಬಗ್ಗೆ ಹಣಕಾಸಿನ ಇಲಾಖೆ ಬೇಡಿಕೆ ಬಂದಾಗ ನಾನು ಮಾತನಾಡುತ್ತೇನೆ. ವ್ಯವಸಾಯಕ್ಕೆ; ಸೋಷಿಯಲ್ ವೆಲ್‌ಫೇರ್‌ಗೆ, ಅದರಲ್ಲೂ ರೂರಲ್ ಡೆವಲಪ್‌ಮೆಂಟ್‌ಗೆ ೫೦ ಪರ್ಸೆಂಟ್ ಕೂಡ ಖರ್ಚಾಗಿಲ್ಲ. ಫಿಗರ್ಸನ್ನು ಕಲೆಕ್ಟ್ ಮಾಡಿದ್ದೇನೆ, ಎಲ್ಲೆಲ್ಲಿ ಎಷ್ಟೆಷ್ಟು ಆಗಿದೆ ಎಂಬುದನ್ನು ಹೇಳುತ್ತೇನೆ......

ಶ್ರೀ ಬೇಗಾನೆ ರಾಮಯ್ಯ.—ಈಗಾಗಲೇ ನಾನು ಎಲ್ಲವನ್ನೂ ಬಹಳ ವಿವರವಾಗಿ ಹೇಳಿದ್ದೇನೆ. ಎನ್.ಆರ್.ಇ ಪಿ ಯೋಜನೆಗೆ ಕೇಂದ್ರ ಸರ್ಕಾರದವರು ಕೊಟ್ಟ ೮ ಕೋಟಿ ರೂ. ಮತ್ತು ನಮ್ಮ ರಾಜ್ಯ ಸರ್ಕಾರದ್ದು ೮ ಕೋಟಿ ರೂ. ಒಟ್ಟು ೧೬ ಕೋಟಿ ರೂ.ಗಳನ್ನು ಜಿಲ್ಲಾವಾರು ಹಂಚಿದ್ದೇವೆ. ಎಲ್ಲೆಲ್ಲಿ ಲೋಕಲ್ ಪೀಪಲ್ ಇನ್‌ವಾಲ್ವ್ ಆಗಿಲ್ಲ ಅಂಥ ಕಡೆ ಸ್ವಲ್ಪ ಕಡಿಮೆ ಹಣ ಖರ್ಚಾಗಿರಬಹುದು. ದಕ್ಷಿಣಕನ್ನಡ ಜಿಲ್ಲೆಗೆ ನಾವು ಮೊದಲು ಕೊಟ್ಟಿದ್ದು ೧ ೯ ಕೋಟಿ ರೂ. ಅನಂತರ ೫೦ ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. ಅಷ್ಟನ್ನೂ ಅವರು ಖರ್ಚು ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೂಡ ಖರ್ಚಾಗಿದೆ, ಇನ್ನೊಂದು ವಿಚಾರ ಏನೆಂದರೆ ಐ.ಆರ್.ಡಿ ಪಿ.ಯ ಬಗ್ಗೆ ಬ್ಯಾಂಕ್‌ನವರು ಮುಂದೆ ಬಂದು ಸಕಾಲದಲ್ಲಿ ಹಣವನ್ನು ಕೊಡದೇ ಹೋದುದರಿಂದ ಇದು ಸ್ವಲ್ಪ ತಡವಾಗಿದೆ. ಆದರೆ ಹಣ ಲ್ಯಾಪ್ಸ್ ಆಗಿಲ್ಲ. ಡಿ.ಆರ್.ಡಿ.ಎಸ್‌ನಲ್ಲಿ ಹಣವನ್ನು ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅವರು ಒಪ್ಪಿಕೊಂಡು ಹೋಗಿದ್ದಾರೆ. ಆದರೆ ಇಲ್ಲಿ ಹಣ ಖರ್ಚೇ ಆಗಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ವಿವರವನ್ನು ಕೇಳುವುದಕ್ಕೆ ಹೋಗುವುದಿಲ್ಲ. ಅಗ್ರಿಕಲ್ಚರ್‌ಗೆ ಎಷ್ಟಾಗಿದೆ, ಸೋಷಿಯಲ್ ವೆಲ್‌ಫೇರ್‌ಗೆ ಎಷ್ಟಾಗಿದೆ, ರೂರಲ್ ಡವಲಪ್‌ಮೆಂಟ್. ಎಷ್ಟು ಖರ್ಚಾಗಿದೆ, ಎಂಬುದು ನಮಗೆ ಬೇಕಾಗಿದೆ· ನೀವು ಹಣವನ್ನು ಖರ್ಚು ಮಾಡದೇ ಇರುವುದ ರಿಂದ ಉಳಿತಾಯವಾಗಿದೆ. ನಾವು ಬಜೆಟ್‌ನಲ್ಲಿ ಕೊಟ್ಟಿದ್ದರೂ ನೀವು ಏತಕ್ಕೆ ಖರ್ಚು ಮಾಡಲಿಲ್ಲರ ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ತಮಗೆ ಉದಾಹರಣೆಗೋಸ್ಕರ ಕೇವಲ ಕೆಲವ್ರೆ

ಕೆಲವು ಅಂಕಿಅಂಶಗಳನ್ನು ಕೊಡುತ್ತೇನೆ. Actually agricultural expension Projects not utilised 108.30 lakhs House sites for weaker sections of the society in urban areas Rs. 96.32 lakhs. Rural works programmes. water supply and sanitary Rs 203.66 lakhs schemes for small and marginal farmers and agricultural labourers Special components for Scs., Rs 278.00 lakhs. That is unspent money. ಬಡ್ಜೆಟ್‌ನಲ್ಲಿ ಕೊಟ್ಟಿದ್ದರೂ ನೀವು ಖರ್ಚು ಮಾಡಿಲ್ಲ. Central sector schemes, integrated Rural Development 170.82 lakhs Integrated Rural Development 242.67 lakhs Sericulture 322.41 lakhs ನಾನು ೧ ವರ್ಷದ್ದು ಮಾತ್ರ ಹೇಳುತ್ತಿದ್ದೇನೆ. I have not figures for all the 3 years. ಬಡ್ಜೆಟ್‌ನಲ್ಲಿ ಕೊಟ್ಟಿದ್ದರೂ ನೀವು ಖರ್ಚು ಮಾಡಲಿಲ್ಲ. ಎಲ್ಲಿ ಖರ್ಚು ಮಾಡಬೇಕೋ ಅಲ್ಲಿ ಮಾಡಿಲ್ಲ. ಹರಿಜನರಿಗೆ ಕೊಟ್ಟಂಥ ಹಣ ಖರ್ಚಾಗಿಲ್ಲ. ಕೃಷಿಗೆ, ಇಂಟಿಗ್ರೇಟೆಡ್ ಡೆವಲಪ್‌ಮೆಂಟ್‌ಗೆ ಕೊಟ್ಟಿರುವುದೂ ಖರ್ಚಾಗಿಲ್ಲ. ನಿಮ್ಮ ಸಾಧನೆಗಳನ್ನು ಅಳೆಯುವಾಗ ಇದನ್ನೆಲ್ಲಾ ನೋಡಬೇಕಾಗುತ್ತದೆ......

ಶ್ರೀ ಬೇಗಾನೆ ರಾಮಯ್ಯ.—ನಾನು ತಮ್ಮ ಹತ್ತಿರ ವೈಯುಕ್ತಿಕವಾಗಿ ಚರ್ಚೆ ಮಾಡಿ ಹೇಳಿದ್ದೇನೆ ಐ.ಆರ್.ಡಿ.ಪಿ.ನಲ್ಲಿ ಹಣ ಹೇಗೆ ಖರ್ಚಾಗುತ್ತಿದೆ ಎಂದರೆ ಹಿಂದಿನ ವರ್ಷ ೫ ಲಕ್ಷ ರೂ ಕಳೆದ ವರ್ಷ ೬ ಲಕ್ಷ ರೂ. ಈ ವರ್ಷ ೮ ಲಕ್ಷ ರೂ. ಪ್ರತಿ ತಾಲೂಕಿಗೂ ಸಬ್ಸಿಡಿ ಕೊಡುವುದಕ್ಕೆ ೩ ಸ್ಟೇಜುಗಳಿವೆ. ನಮ್ಮ ಸಬ್ಸಿಡಿ ಹಣ ಎಲ್ಲೂ ಹೋಗುವುದಿಲ್ಲ. ಸರ್ಕಾರದವರು ಡಿ.ಆರ್.ಡಿ.ಎಸ್‌ಗೆ ರಿಲೀಸ್ ಮಾಡುವುದು ಒಂದು ಸ್ಟೇಜ್, ಡಿ.ಆರ್.ಡಿ.ಎಸ್‌ನವರು ಬ್ಯಾಂಕ್‌ಗೆ ರಿಲೀಸ್ ಮಾಡುವುದು ಇನ್ನೊಂದು ಸ್ಟೇಜ್, ಆ ಬ್ಯಾಂಕ್‌ನವರು ಬೆನಿಫಿಷರೀಸ್‌ಗೆ ಕೊಡುವುದು ಕೊನೆಯ ಸ್ಟೇಜು, ನಮ್ಮ ಹಣವನ್ನು ನಾವು ಅಡ್ಜಸ್ಟ್ ಮಾಡಿದ್ದೇವೆ. ಅದು ಬ್ಯಾಂಕ್‌ನವರಿಗೆ ಅಡ್ಜಸ್ಟ್ ಆಗಿಲ್ಲ ಎಂದು ಕಾಣುತ್ತದೆ. ಆದರೆ ಈ ಹಣ ಲ್ಯಾಪ್ಸ್ ಮಾತ್ರ ಆಗಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಹೇಳುತ್ತಿರುವುದು ಹಣ ಲ್ಯಾಪ್ಸ್ ಆಗಿದೆಯೆಂದು ಅಲ್ಲ. ನೀವು ಯಾವ ವರ್ಷದಲ್ಲಿ ಖರ್ಚು ಮಾಡಬೇಕಾಗಿತ್ತೋ ಆ ವರ್ಷದಲ್ಲಿ ಖರ್ಚು ಮಾಡಿಲ್ಲ. ಇವತ್ತಿನ ಹಣವನ್ನು ಇನ್ನು ೧೦ ವರ್ಷ ಬಿಟ್ಟು ಖರ್ಚು ಮಾಡುವುದಾದರೆ ಅದರಿಂದ ಏನು ಪ್ರಯೋಜನ ಆಗುತ್ತದೆ? ಅರ್ಬನ್ ಏರಿಯಾದಲ್ಲಿ ಎಸ್.ಸಿ, ಎಸ್.ಟಿ. ಯವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ೯೬ ಲಕ್ಷ ರೂ. ಕೊಟ್ಟಿದ್ದೇವೆ. ಅದನ್ನು ಏತಕ್ಕೆ ಹಾಗೆಯೇ ಉಳಿಸಿದ್ದೀರಿ? ಈ ಬೆಂಗಳೂರಿನಲ್ಲಿ ಮನೆಗಳು ಇಲ್ಲದಿರತಕ್ಕ ಜನರು ಇಲ್ಲವೆ? ಹುಬ್ಬಳ್ಳಿಯಲ್ಲಿಲ್ಲವೆ? ಮೈಸೂರಿನಲ್ಲಿಲ್ಲವೆ? ಆ ಹಣವನ್ನು ಖರ್ಚು ಮಾಡದೆ ಏತಕ್ಕೆ ಹಾಗೇ ಉಳಿಸಿದಿರಿ? ನಾವು ಹರಿಜನರ ಹೆಸರಿನಲ್ಲಿ ಮತವನ್ನು ತೆಗೆದುಕೊಂಡು ಬಂದಿದ್ದೇವೆ. ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಕೊಟ್ಟಂಥ ಹಣವನ್ನು ಏತಕ್ಕೆ ಖರ್ಚು ಮಾಡಲಿಲ್ಲ? ಸಾಧನೆಯ ಅಳತೆಗೋಲು ವೈಯುಕ್ತಿಕ ವಿಚಾರವಲ್ಲ. ನಾವು ಕೊಟ್ಟಂಥ ಹಣವನ್ನು ಯಾವ ರೀತಿ ಖರ್ಚು ಮಾಡುತ್ತಿದ್ದೀರಿ ಎಂಬುದಕ್ಕಾಗಿ ನಾನು ಕೇಳುತ್ತಿದ್ದೇನೆ. ಹಣಕಾಸಿನ ವಿಚಾರ ಬಂದಾಗ ನಾನು ಇನ್ನೂ ಹೆಚ್ಚು ಅಂಕಿಅಂಶಗಳನ್ನು ಕೊಡುತ್ತೇನೆ. ಈಗ ಮಾನ್ಯ ಮುಖ್ಯ ಮಂತ್ರಿಗಳ ಖಾತೆಗೆ ಸಂಬಂಧಪಟ್ಟ ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಮೇಜರ್ ಇರಿಗೇಷನ್, ಮೈನರ್ ಇರಿಗೇಷನ್ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರುಗಳು ಅನೇಕರು ಮಾತನಾಡಿದ್ದಾರೆ. ಈ ಬಗ್ಗೆ ಹೆಚ್ಚು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗದೆ ಕೇವಲ ಒಂದೆರಡು ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ,

ಸರ್ಕಾರದವರು ಅಧ್ಯಕ್ಷರೇ ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿದ್ದಾರೆ. ಒಂದು ವಿಧವಾಗಿ ಫರ್‌ಫಾರ್ಮನ್ಸ್ ಬಡ್ಜೆಟ್ ಕೊಡತಕ್ಕಂಥದ್ದು ಎಲ್ಲ ಖಾತೆಗಳ ಬಗ್ಗೆ ಬಹಳ ಒಳ್ಳೆಯದು. ಇದನ್ನು ನಾನು ಸ್ವಾಗತಮಾಡುತ್ತೇನೆ. ಆದರೆ ಮಾನ್ಯ ಅಧ್ಯಕ್ಷರೇ ಈ ಪುಸ್ತಕ ನೆನ್ನೆ ರಾತ್ರಿ ನನ್ನ ಕೈಗೆ ಸಿಕ್ಕಿತು. ಇನ್ನೊಂದು ಸಿಕ್ಕಿದೆ ಸಾವಿರಾರು ಪುಟಗಳದ್ದು ಪಿ.ಡಬ್ಲ್ಯೂ.ಡಿ. ಮತ್ತು ಪವರ್‌ದ್ದು ನಾವು ಡಿಮ್ಯಾಂಡ್ಸ್ ಚರ್ಚೆ ಮಾಡಲಿಕ್ಕೆ ಪ್ರಾರಂಭಮಾಡಿ ಎರಡು ದಿವಸಗಳು ಆದ ಮೇಲೆ ನಮಗೆ ತಲುಪಿದರೆ ಇದನ್ನು ನೋಡಿ ಹೇಗೆ ಅಧ್ಯಯನ ಮಾಡುವುದು? ಹೇಗೆ ಮಾತನಾಡುವುದು? ಇಷ್ಟೊಂದು ಹಣವನ್ನು ಖರ್ಚು

ಮಾಡಿ ಮಾಡುತ್ತೀರಿ. ಆದರೆ ಸ್ವಲ್ಪ ಮೊದಲೇ ನಾಲ್ಕು ದಿವಸಗಳು ಮುಂಚಿತವಾಗಿಯೋ, ಡಿಮ್ಯಾಂಡ್ಸ್ ಶುರುವಾಗುವುದಕ್ಕೆ ಮುಂಚಿತವಾಗಿಯೋ ನಮಗೆ ಕೊಟ್ಟಿದ್ದರೆ ಎಲ್ಲ ಸದಸ್ಯರಿಗೂ ಅನುಕೂಲವಾಗುತ್ತಿತ್ತು. ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೆ ಅನುಕೂಲವಾಗುತ್ತಿತ್ತು. ಸಮಯ ಬಹಳ ಕಡಿಮೆ ಇದೆ. ಸ್ವಾಮಿ ತಾವು ಕೊಟ್ಟಿರತಕ್ಕಂಥ ಎರಡು ಪುಸ್ತಕಗಳಲ್ಲಿ ಇರಿಗೇಷನ್ ಪ್ರಾಜೆಕ್ಟ್ ಇನ್ ಕರ್ನಾಟಕ, ಮತ್ತು ಮೇಜರ್ ಅಂಡ್ ಮೀಡಿಯಮ್ ಇರಿಗೇಷನ್ ಎಂದು ಕೊಟ್ಟಿರುತ್ತೀರಿ. ಈ ಎರಡು ಪುಸ್ತಕಗಳನ್ನು ನೋಡಿಬಿಟ್ಟರೆ ಈ ಸರ್ಕಾರದ ಕಾರ್ಯದಕ್ಷತೆ ಗೊತ್ತಾಗುತ್ತದೆ. ಪ್ರತಿಯೊಂದು ಪ್ರಾಜೆಕ್ಟ್‌ಗೂ ಏನೇನು ಮಾಡಿರುತ್ತೀರಿ ಎನ್ನುವುದನ್ನು ೧೯೮೧ರಲ್ಲಿಯೇ ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳನ್ನು ನಾವು ಕೇಳುತ್ತೇನೆ. ನಮ್ಮನ್ನು ಜನರು ಕೇಳುತ್ತಾರೆ, ಸರ್ಕಾರ ಏನು ಮಾಡುತ್ತಿದೆ, ಮಲಗಿದಿಯೋ ಎಂದು ಕೇಳುತ್ತಾರೆ. ತಾವು ಇದರಲ್ಲಿ ಕೊಟ್ಟಿರತಕ್ಕಂಥ ಯಾವುದಾದರೂ ಪ್ರಾಜೆಕ್ಟ್ ಮಾಡಿರುತ್ತೀರಾ ಎಂದು ಕೇಳುತ್ತೇನೆ. ಪ್ರಾಜೆಕ್ಟ್ ವೈಸ್ ರಿಪೋರ್ಟ್ ಇದೆ. ಬಹಳ ಉತ್ತಮವಾದ ರಿಪೋರ್ಟ್ ಕೊಟ್ಟಿದ್ದೀರಿ. ಪ್ರತಿಯೊಂದು ಪ್ರಾಜೆಕ್ಟ್ ಬಗ್ಗೆ ಒಂದು ಪ್ಯಾರಾ ಇದೆ, ಮಲಪ್ರಭಾ ಪ್ರಾಜೆಕ್ಟ್ ತೆಗೆದುಕೊಂಡರೆ, State of work as on 1-4-81. Work on the main dam-Expenditure as on 31st March 1981 etc., they have been given in the Report, ಆ ಮೇಲೆ ಈ ಅವಧಿಯಲ್ಲಿ ಯಾವ ಯಾವ ಕೆಲಸಗಳನ್ನು ಮುಗಿಸಬೇಕು ಎನ್ನುವ ಮಾತನ್ನೂ ಕೂಡ ಹೇಳಿದ್ದೀರಿ. ಒಂದೊಂದು ಪ್ರಾಜೆಕ್ಟ್ ಕೆಳಗೆ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಬೇಕೆಂದು ಹೇಳುವ ವಿಚಾರವನ್ನೂ ಕೂಡ ಹೇಳಿದ್ದೀರಿ. ಈಗ ಸಮಯವಿಲ್ಲದಿರುವುದರಿಂದ ಅದನ್ನೆಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ನೀವೇ ಓದಿ ಅಭ್ಯಾಸ ಮಾಡಿಕೊಂಡು ಹೇಳಿ. ಮಾರ್ಚ್ ೧೯೮೧ರಲ್ಲಿ ಏನು ಮಾಡುತ್ತೇವೆಂದು ಹೇಳಿದ್ದಿರೋ ಅದೇ ಮಾತನ್ನು ಪುನಃ ೧೯೮೨ರಲ್ಲಿ ಅದು ಆಗಿದಿಯೋ ಇಲ್ಲವೋ? ಮಾನ್ಯ ಅಧ್ಯಕ್ಷರೇ ಅವರು ಹೇಳಿದ ಟಾರ್ಜೆಟ್ ಒಂದೂ ಕೂಡ ಆಗಿಲ್ಲ. ಆ ವಿಷಯಕ್ಕೆ ನಾನು ಹೋಗುವುದಿಲ್ಲ. ಒಂದು ಪ್ರಾಜೆಕ್ಟ್‌ನಲ್ಲಿ ನಿಮ್ಮ ಸಾಧನೆ ೧೯೮೧ರ ಕೈಪಿಡಿ ಪ್ರಕಾರ ಇದೆ. ಓದಿ ಹೇಳಲಿಕ್ಕೆ ಹೋಗುವುದಿಲ್ಲ. ನೀವು ಉತ್ತರ ಕೊಡುವಾಗ ಹೇಳಿಬಿಟ್ಟರೆ ಸಾಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇಂಥ ಪ್ರಾಜೆಕ್ಟ್ ಮಾಡಿಲ್ಲವೆಂದು ತಾವು ಹೇಳಿದರೆ ಅದಕ್ಕೆ ಬೇಕಾದರೆ ಸ್ಪಷ್ಟೀಕರಣ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದಲ್ಲ ಏತಕ್ಕೆಂದರೆ ಸಮಯವಿಲ್ಲ, ಪೊಟೆನ್‌ಶಿಯಲ್ ಬಗ್ಗೆ ಹೇಳುತ್ತೇನೆ. ಬಡ್ಜೆಟ್ ಪ್ರಾವಿಷನ್ ಹೇಗೆ ಎಂದರೆ ನೀರಾವರಿಯ ಬಗ್ಗೆ ಹಣ ಕಡಿಮೆ ಕೊಡುತ್ತಾ ಇದ್ದೀರಿ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಇದಕ್ಕೆ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಬರುವತನಕ ಕೆಲಸ ಆಗುತ್ತಿರಲಿಲ್ಲ, ಆದರೂ ೧೯೭೮-೭೯ರಲ್ಲಿ ೨೭.೪ ಕೋಟಿ. ೧೯೭೯-೮೦ಕ್ಕೆ ೩೭.೯೦ ಕೋಟಿ, ೧೯೮೦-೮೧ಕ್ಕೆ ೯೦.೯೪ ಕೋಟಿ, ೧೯೮೧-೮೨ಕ್ಕೆ ೪೫.೯೦ ಕೋಟಿ. ೧೯೮೨-೮೩ಕ್ಕೆ ೫೩.೭೮ ಕೋಟಿ ರೂಪಾಯಿಗಳು ಅನಂತರ ಘಟಪ್ರಭಾ ೧೯೭೯-೮೦ರಲ್ಲಿ ೫ ೨೦ ಕೋಟಿ ೧೯೭೯-೮೦ಕ್ಕೆ ೫.೮೮ ಕೋಟಿ. ೧೯೮೦-೮೧ಕ್ಕೆ ೫.೫೦ ಕೋಟಿ, ೧೯೮೧-೮೨ಕ್ಕೆ ೫.೫೦ ಕೋಟಿ, ೧೯೮೨ ೮೩ಕ್ಕೆ ೬ ಕೋಟಿ ರೂಪಾಯಿಗಳು. ಮಲಪ್ರಭಾ ೧೯೭೮-೭೯ಕ್ಕೆ ೧೩ ಕೋಟಿ, ೧೯೭೯-೮೦ಕ್ಕೆ ೧೩ ಕೋಟಿ, ೧೯೮೦-೮೧ಕ್ಕೆ ೧೦ ಕೋಟಿ, ೧೯೮೧-೮೨ಕ್ಕೆ ೧೦ ಕೋಟಿ. ೧೯೮೨-೮೩ಕ್ಕೆ ೯ ಕೋಟಿ, ಹಿಂದೆ ಕೊಟ್ಟಿರತಕ್ಕಂಥದ್ದಕ್ಕೂ ಮೂರು ಕೋಟಿ ಕಡಿಮೆ ಮಾಡಿದ್ದೀರೆಂದು ಇಷ್ಟು ಮಾತ್ರ ಹೇಳುತ್ತೇನೆ. ಭದ್ರಾ ೩ ಕೋಟಿ ೨ಕೋಟಿ ೧ ಕೋಟಿ. ೧೯೮೦ಕ್ಕೆ ೨ ಕೋಟಿ ಈ ವರ್ಷಕ್ಕೆ ಅಂದರೆ ೧೯೭೯-೮೦ ರಿಂದ ಹೇಳುತ್ತಿದ್ದೇನೆ ಈಗ ಕೊಟ್ಟಿರುವುದು ೯೭. ಹೇಮಾವತಿ ೧೦ ಕೋಟಿ ೧೯೭೮-೭೯ಕ್ಕೆ ಅನಂತರ ಕೊಟ್ಟಿರುವುದು ೧೦.೫೦ ಕೋಟಿ ೧೦.೬೦ ಕೋಟಿ, ೧೦ ೫೦ ಕೋಟಿ ವರ್ಷದಲ್ಲಿ ಮಾತ್ರ ೧೮.೯೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಹಾರಂಗಿ ೫೭ ಕೋಟಿ, ೫.೭೫ ಕೋಟಿ, ೫.೫೦ ಕೋಟಿ, ೫.೬೦ ಕೋಟಿ, ೭.೮೫ ಕೋಟಿ ಕಬಿನಿಗೆ ೬.೭೫ ಕೋಟಿ, ೭ ಕೋಟಿ, ೭ ಕೋಟಿ ೮ ಕೋಟಿ ಈ ರೀತಿ ಕೊಟ್ಟಿರುತ್ತೀರಿ, ಈ ಮಾತನ್ನು ಹೇಳುವಾಗ ಮಲಪ್ರಭಾ, ಘಟಪ್ರಭಾ ಈ ಎರಡಕ್ಕೂ ಹಣವನ್ನು ಬಹಳ ಕಡಿಮೆ ಕೊಟ್ಟಿದ್ದೀರಿ. ೧೯೭೮-೭೯ರಲ್ಲಿ ಏನು ರೂಪಾಯಿನ ಬೆಲೆ ಇತ್ತು ಸ್ವಾಮಿ, ೧೯೮೨-೮೩ರಲ್ಲಿ ಎಷ್ಟು ಇದೆ, ಲೆಕ್ಕಾಚಾರ ತೆಗೆದುಕೊಂಡು ನೋಡಿ, ನೀವು ಒದಗಿಸಿದ ಹಣ ಹಿಂದಿನದಕ್ಕಿಂತ ಬಹಳ ಕಡಿಮೆ ಇದೆ. ಒಂದು ಮಾತನ್ನು ಹೇಳಿದ್ದೀರಿ. ನೀರಾವರಿಗಾಗಿ ಆದ್ಯತೆಯನ್ನು ಕೊಟ್ಟಿದ್ದೇವೆಂದು ಆದರೆ ಎಷ್ಟು ಪೊಟೆನ್‌ಶಿಯಲ್ ಕ್ರಿಯೇಟ್ ಆಯಿತು ಎಂದು ಕೇಳುತ್ತಿದ್ದೇನೆ? ಸ್ವಾಮಿ ಯು.ಕೆ.ಪಿ.ಗೆ ವರ್ಲ್ಡ್ ಬ್ಯಾಂಕ್‌ನಿಂದ

ದುಡ್ಡು ಬರುತ್ತದೆ. ಹಣದ ಕೊರತೆ ಇಲ್ಲ. ಅದಕ್ಕೆ ಪ್ರತಿ ವರ್ಷ ಎಷ್ಟು ಬೇಕಾದರೂ ಖರ್ಚು ಮಾಡಬಹುದು. ಲೆಕ್ಕಾಚಾರದ ಪ್ರಕಾರ ತಾವು ಮುಗಿಸಬೇಕಾದಂಥ ಟಾರ್‌ಗೆಟ್ ತನಗೆ ಗೊತ್ತಿದೆ. ಟೋಟಲ್ ಪೊಟೆನ್‌ಷಿಯಲ್ ಹೇಳಿಬಿಡುತ್ತೇನೆ. ಏತಕ್ಕೆಂದರೆ ಯು.ಕೆ.ಪಿ. ಮಲಪ್ರಭಾ, ಘಟಪ್ರಭಾ, ಭದ್ರಾ, ಹೇಮಾವತಿ, ಎಲ್ಲ ಪ್ರಾಜೆಕ್ಟ್‌ಗಳಲ್ಲಿ ನೀರನ್ನು ಸಂಗ್ರಹಮಾಡಿ ಎಷ್ಟು ದಿವಸ ಆಗಿದೆ ಸ್ವಾಮಿ? ಮಲಪ್ರಭಾ ಎಷ್ಟು ವರ್ಷ ಆಗಿದೆ, ಘಟಪ್ರಭಾ ಎಷ್ಟು ವರ್ಷ ಆಗಿದೆ, ಹೇಮಾವತಿ ಏನಾಗಿದೆ, ಕ್ರಿಯೇಟ್ ಆಗಿದೆ, ಯುಟಿಲೈಸೇಷನ್ ಇಂಪಾರ್ಟೆಂಟ್, ಇದು ಬಹಳ ಮಹತ್ವದ್ದು, ಪೊಟೆನ್‌ಷಿಯಲ್ ಕ್ರಿಯೇಟ್ ಬೇರೆ, ಯುಟಿಲೈಸೇಷನ್ ಬೇರೆ, ಮಲಪ್ರಭಾ ಆಗಿ ಎಂಟು ವರ್ಷವಾಯಿತು ಪೊಟೆನ್‌ಷಿಯಲ್ ಕ್ರಿಯೇಟ್ ಆಗಿ ೧೦ ವರ್ಷ ಆಗಿದೆ, ಹೇಮಾವತಿ ೪-೫ ವರ್ಷಗಳಾಗಿದೆ, ಉಳಿದ ವಿಚಾರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈವತ್ತು ಯುಟಿಲೈಸೇಷನ್ ದೃಷ್ಟಿಯಿಂದ ತಾವು ಅರ್ಥಮಾಡಿಕೊಳ್ಳಬೇಕು. ಇಷ್ಟು ದಿನಗಳಿಂದ ಏನು ಮಾಡಿದ್ದೀರಿ ಸ್ವಾಮಿ, ಪೊಟೆನ್‌ಷಿಯಲ್ ೧೯೮೦-೮೧ರಲ್ಲಿ ೩೨,೨೦೦. ಅಚೀವ್‌ಮೆಂಟ್ ಟಾರ್‌ಜೆಟ್ ಇದ್ದುದು ತಪ್ಪಿದ್ದು ೧೯೮೦-೮೧ರಲ್ಲಿ ೩೮.೭೦೦. ನೀವು ಅಚೀವ್ ಮಾಡಿದ್ದು ೩೦.೯೪೫, ೧೯೮೦-೮೧ಕ್ಕೆ ಟಾರ್‌ಜೆಟ್ ೫೧.೩೪೮ ನಿಮ್ಮ ಲೆಕ್ಕದ ಪ್ರಕಾರ ಎಷ್ಟು ಆಗಿದೆ ೪೦.೪೮೫ ೧೯೮೨-೮೩ ತಾವುಲೆಕ್ಕ ಇಟ್ಟಿದ್ದೀರಿ. ನೋಡಿ ಬೇಕಾದರೆ ಮುಂದೆ ಏನು ಮಾಡುತ್ತೀರೋ ಗೊತ್ತಿಲ್ಲ. ಪೊಟೆನ್‌ಷಿಯಲ್ ಕ್ರಿಯೇಟ್ ಬಗ್ಗೆ ಮಾತನಾಡಿದಿರಿ, ಅಕ್ಚುಯಲಿ ಯುಟಿಲೈಸೇಷನ್ ಬಹಳ ಮುಖ್ಯ ಎಷ್ಟು ಮಾಡಿದ್ದೀರಿ ಸ್ವಾಮಿ? ಇದನ್ನು ಕೂಡ ನೋಡಿದಾಗ ನೀರು ಇದೆ, ಕಾಲುವೆಗಳು ಇಲ್ಲ. ಕಾಲುವೆಗಳು ಇದ್ದರೆ ಅಕ್ವಡೆಟ್ಸ್ ಇಲ್ಲ. ಸ್ವಾಮಿ ಹೇಮಾವತಿಯಲ್ಲಿ ೧೪೦ ಮೈಲಿ ಕಾಲುವೆ ಮಾಡಿದ್ದೀರಿ ಮಲಪ್ರಭಾದಲ್ಲಿ ಕಾಲುವೆಗಳನ್ನು ಮಾಡಿದ್ದೀರಿ, ಕೃಷ್ಣಾದಲ್ಲಿ ಮಾಡಿದ್ದೀರಿ, ಕಾಲುವೆಗಳು ಮಾಡಿದಾಕ್ಷಣಕ್ಕೆ ನೀರು ಹೋಗಬೇಕಲ್ಲ. ನೀರು ಹೋಗಬೇಕಾದರೆ ನಡುವೆ ಇರತಕ್ಕಂಥ ಟನಲ್ಸ್, ಅಕ್ವಡೆಟ್ಸ್‌ನ್ನು ನಾವು ಕೇಳುತ್ತಾ ಇದ್ದೇವೆ. ಈವತ್ತು ಮಲಪ್ರಭಾ ಯೋಜನೆಯ ಕೆಳಗೆ ಬೆಣ್ಣೆಹೊಳೆ ಪ್ರಾಜೆಕ್ಟ್ ಇದೆ. ಹೇಮಾವತಿ ಕೆಳಗೆ ಇರತಕ್ಕಂಥ ಅಕ್ವೆಡಟ್ ಇದೆ, ಟನಲ್ಸ್ ಇದೆ. ಅಧ್ಯಕ್ಷರೇ ಈವತ್ತು ಘಟಪ್ರಭಾ ವಿಚಾರ ಹೇಳಿಬಿಟ್ಟರೆ ಸರ್ಕಾರದ ಕೆಲಸ ಯಾವ ರೀತಿ ನಡೆಯುತ್ತಿದೆ ಎನ್ನುವುದು ತಿಳಿಯುತ್ತದೆ. ಡ್ಯಾಮ್ ಹತ್ತಿರವೇ ಅಕ್ವಡೆಟ್ ಕಡಪಗಟ್ಟ ಅದು ಆಗುತ್ತಾ ಇದೆ. ಮುಂದೆ ನೀರು ಹೋಗುವುದಾದರೆ ಎರಡು ಲಕ್ಷ ಎಕರೆಗೆ ನೀರು ಹೋಗಬೇಕಾಗುತ್ತದೆ. ಇದರ ಬಗ್ಗೆ ಏನೂ ಕೆಲಸ ಪ್ರಾರಂಭವಾಗಿಲ್ಲ.

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್. — ಸಭೆಯೊಳಗೆ ಮುಲ್ಲಾ ಬಂದಹಾಗೆ ಬರುತ್ತಿದ್ದಾರೆ ಮಾನ್ಯ ಇಬ್ರಾಹಿಂರವರು.

ಶ್ರೀ ಎಸ್. ಆರ್. ಬೊಮ್ಮಾಯಿ — ನಾನು ಮುಖ್ಯಮಂತ್ರಿಗಳಿಗೆ ಬೆಳಗಾಂನಲ್ಲಿ ಸಚಿವ ಸಂಪುಟ ಸಭೆಯನ್ನು ನಡೆಸುವಾಗ ಒಂದು ಪತ್ರ ಬರೆದಿದ್ದೇನೆ. ಬೆಂಗಳೂರಿನಿಂದ ಬೇರೆ ಕಡೆಗೆ ಸರ್ಕಾರಿ ಯಂತ್ರವನ್ನು ತೆಗೆದುಕೊಂಡು ಹೋಗಿ ಕ್ಯಾಬಿನೇಟ್ ಮೀಟಿಂಗ್ ನಡೆಸತಕ್ಕದ್ದನ್ನು ಟೀಕೆ ಮಾಡಿದ್ದೇನೆ. ಅನಾವಶ್ಯಕವೆಂದು ಹೇಳಿದ್ದೇನೆ. ನೀವು ಅಲ್ಲಿ ಮೀಟಿಂಗ್ ಮಾಡುವುದರಿಂದ ಆ ಭಾಗದ ಕೆಲಸ ಕಾರ್ಯಗಳಿಗೆ ಹೆಚ್ಚು ಗಮನ ಕೊಡಬೇಕೆಂದು ನನ್ನ ಪತ್ರದಲ್ಲಿ ತಿಳಿಸಿದ್ದೇನೆ. ಬೇರೆ ವಿಚಾರಗಳನ್ನು ಬಿಟ್ಟುಬಿಡಿ ಎಂದು ಹೇಳಿಲ್ಲ, ಭಾರಿ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಗಮನ ಕೊಡಿ ಎಂದು ಹೇಳಿದ್ದೇನೆ. ಪತ್ರದಲ್ಲಿ ಏನು ಹೇಳಿದ್ದೇನೆ ಅಂದರೆ ಮಲಪ್ರಭಾದಲ್ಲಿರತಕ್ಕ ಕೆಲಸವೇನು ಇದೆ, ಹಿಡಕಲ್ ಡ್ಯಾಮ್ ಇರಲಿ, ಕಡಬಘಟ್ಟ ಅಕ್ವಡಕ್ಟ್, ಲೆಫ್ಟ್‌ಬ್ಯಾಂಕ್ ಚಾನಲ್, ಮಾರ್ಕಂಡ ಅಕ್ವಡಕ್ಟ್, ಬೆಣ್ಣೆಹಳ್ಳ ಮುಂದಕವಿ ಅಪ್ಪರ್ ಕೃಷ್ಣಾ, ನಾರಾಯಣಪುರ ಡ್ಯಾಮ್ ಆಲಮಟ್ಟಿ, ಹಿಪ್ಪರಗಿ ಡ್ಯಾಮ್ ಇನ್ನು ಮುಂತಾದ ಅಣೆಕಟ್ಟು ಕೆಲಸಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಕಂಟ್ರಾಕ್ಟರ್ ಅವಧಿ ೧೯೮೦ನೇ ಇಸವಿಗೆ ಮುಗಿದಿದೆ. ಅವರು ಹೆಚ್ಚಿನ ದರ ಕೇಳುತ್ತಿರಬಹುದು, ಹೊಸ ಹೊಸ ಬೇಡಿಕೆಗಳನ್ನು ಮುಂದೆ ಇಟ್ಟಿರಬಹುದು. ಆ ಪ್ರಾಜೆಕ್ಟ್‌ನ ಮುಖ್ಯ ಇಂಜಿನೀಯರ್ ಕಂಟ್ರಾಕ್ಟರ್ ಅವಧಿ ಮುಗಿದಿದೆ ಎಂದು ಸರ್ಕಾರದ ಮುಂದೆ ಯಾವಾಗ ಬಂತು? ಟೆಕ್ನಿಕಲ್ ಕಮಿಟಿಯ ಮುಂದೆ ಯಾವಾಗ ಬಂತು? ಇದುವರೆಗೆ ಏತಕ್ಕೆ ನಿರ್ಣಯ ತೆಗೆದುಕೊಂಡಿಲ್ಲ? There is no Goverument order, ಸ್ಪಾಟ್ ಡಿಸಿಷನ್ ತೆಗೆದುಕೊಳ್ಳುತ್ತೇವೆಂದು ೧೯೮೦ನೇ ಇಸವಿಯಲ್ಲಿ ಹೇಳಿದ್ದಾರೆ. ಕಂಟ್ರಾಕ್ಟ ಪಿರೀಯೆಡ್ ಮುಗಿದಿದೆ, ಎರಡೂವರೆ ವರ್ಷಗಳು ಬೇಕೆ ನೀವೂ ತೀರ್ಮಾನ ತೆಗೆದುಕೊಳ್ಳುವುದಕ್ಕೆ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಲಪ್ರಭಾ, ಬೆಣ್ಣೆಹಳ್ಳ ಮತ್ತು ಮುದಕವಿ, ಕಡಬಘಟ್ಟ ಅಲ್ಲಿರತಕ್ಕ ತೊಂದರೆಗಳನ್ನು ನಿವಾರಿಸಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಅಲ್ಲಿರತಕ್ಕ ಎಲ್ಲಾ ತೊಂದರೆಗಳನ್ನು ಸಾಲ್ವ್ ಮಾಡಿ ಎಲ್ಲಾ ಕೆಲಸಗಳನ್ನು ತೀವ್ರಗತಿಯಿಂದ ನಡೆಯುತ್ತಿವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೮೦ನೇ ಇಸವಿಯಲ್ಲಿ ಕಂಟ್ರಾಕ್ಟರ್ ಅವಧಿ ಮುಗಿದಿದೆ. In my letter to the Hon'ble Chief Minister, I have given the date of the end of the contractual period. ಇದುವರೆಗೆ ಸರ್ಕಾರಿ ಆಜ್ಞೆ ಇಲ್ಲ. ನಾನು ಅಲ್ಲಿ ಹೋಗಿ ಬಂದಿದ್ದೇನೆ. ಕಂಟ್ರಾಕ್ಟರುಗಳು ಕೆಲಸ ನಿಲ್ಲಿಸಿದ್ದಾರೆ. ಇದು ಕಾನೂನಿಗೆ ವಿರೋಧವಾದ ಕಾರ್ಯ. ಮುಖ್ಯ ಇಂಜಿನೀಯರ್‌ರವರು ೧೯೮೦ರಲ್ಲಿ ಕಂಟ್ರಾಕ್ಟ್ ಅವಧಿ ಮುಗಿದಿದೆ ಎಂದು ಬರೆದಿದ್ದಾರೆ. ಒಂದೂವರೆ ವರ್ಷದಿಂದ ಫೈಲು ಬಿದ್ದಿದೆ. ಲಕ್ಷಾಂತರ ಎಕರೆಗೆ ನೀರು ಸಿಗತಕ್ಕ ಬೆಣ್ಣೆಹಳ್ಳ, ಒಂದೂವರೆ ಲಕ್ಷ ಎಕರೆಗೆ ನೀರು ಸಿಗತಕ್ಕ ಮುದಕಲ್ ಅಣೆಕಟ್ಟು, ಆಲಮಟ್ಟಿ ಒಂದೂವರೆ ಲಕ್ಷ, ಕಡಬಘಟ್ಟ ೧ ಲಕ್ಷ ಎಕರೆಗೆ ನೀರು ಸಿಗುತ್ತಿತ್ತು, ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕಾದರೆ ಎಷ್ಟು ವರ್ಷಗಳು ಬೇಕು? ಫೈಲು ಕ್ಲಿಯರೆನ್ಸ್ ಏನು ಮಾಡುತ್ತಿದ್ದೀರಿ? Clearance of such things ಲಕ್ಷಾಂತರ ಎಕರೆ ಭೂಮಿ ನೀರಾವರಿ ಆಗಬೇಕಾಗಿದ್ದಂತಹ ಕೆಲಸಗಳಿಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಎಷ್ಟು ವರ್ಷಗಳು ಬೇಕು? ಪ್ರೆಸ್ ಟೆಂಡರ್ ಕರೆದು ಕೊಡಬಹುದಾಗಿತ್ತು. ಕಂಟ್ರಾಕ್ಟರ್ಸ್‌ಗಳನ್ನು ಕಂಟಿನ್ಯೂ ಮಾಡಬಹುದಾಗಿತ್ತು. ೧೯೮೦ನೇ ಇಸವಿಯಲ್ಲಿ ಚುನಾವಣೆ ಘೋಷಣೆ ನಿಮ್ಮ ಪಕ್ಷದ್ದು. It is your discretion. Is it the way of functioning of the Government? ಏನು ನಿರ್ಣಯ ನಿಮ್ಮದ್ದು? We will give you the Government that works. But, you have given the Government that sleeps and slumbers. ಭಾರಿ ನೀರಾವರಿ ಯೋಜನೆಗಳಿಗೆ ಹಣ ಖರ್ಚುಮಾಡಿ ರಾಜ್ಯದ ಜನಗಳಿಗೆ ಅನುಕೂಲವಾಗುವಂತಹ ವಿಷಯಗಳಿಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಏಕೆ ತಡವಾಯಿತು?

SRI R. GUNDU RAO.—I will reply tomorrow. Why do you worry ? You say whatever you want to say. Your conclusion is not the final conclusion.

SRI S. R. BOMMAI.—All right, we will hear. What I am asking is, when the file was sent to the Chief Engineers where was it lying and when was it referred to the Technical Committee. I do not like tenor of reply of the Hon. Chief Minister. This is not the way. I am seriously discussing the matter affecting the people. Let him say whatever he wants to say, but this. I should say as arrogance.

SRI R. GUNDU RAO.—You say whatever you want to say. I am going to reply tomorrow. Do not say that Gevernment is sleeping, delay in taking the Decstion government slumbers Etc, Etc. do not think that it is your monopoly. Do not behave like that. You are not a Technical Export.

SRI S. R. BOMMAI.—I am not an expert. I am an ordinary farmer. I am only submitting that there is delay.

SRI R. GUNDU RAO.—That is your opinion. Hear my opinion also tomorrow.

Sri S. R. Bommai.—Sir, I am only pointing out that if decisions are not taken quickly on such matters.

Sri R. Gundu Rao.--You should know the reason also.

Sri S. R. Bommai.--You tell me tomorrow. If I am convinced.

Sri R. Gundu Rao.--Whether you are convinced or not, I will tell you.

Sri S. R. Bommai.--It is your duty to convince. I am not such a fool.

Sri R. Gundu Rao.--You say whatever you want to say in your own manner. But do not say it is a slumber government, it is a sleeping Government, etc.

Sri S. R. Bommai.--Let me see whether tomorrow the Hon. Chief Minister will raise his tone or not.

Sri J. H. Patel.--Sir, if the Government were sleeping, the hon Member Sri Bommai had no business to wake it up. Disturbing one's sleep is really very bad.

Sri R. Gundu Rao.--If you are thinking that the Government is sleeping. what about you. You have already slept. Why do you talk about the Government. When you spoke, I never interfered. Did I ?

Sri J- H. Patil.--Certainly not Sir.

Sri K. Bhaskar Naidu.--Sir, I am not questioning your right, But you should not mistake me. To allow us more time or not the right is yours. Yesterday, I heard a marathon speech of Sri H. D. Devegowda. But when we are taking you used to ring the bell. I heard the radio also: In the radio also, in the ten minutes programme, mention was made about Sri H. D. Devegowda's speech for nine minutes and of Sri Gatti Chandrashekar for only 30 seconds. That means to say that we do not speak any substance at all. Whether the A.I.R. or the Press mean that what we speak here should not be mentioned at all or whether they mean that it is not important Sir, you must come to our help. We must have our chance to speak. Let the Members from this side also be given opportunity to speakhon'ble Mamber SriArumugham also raised an objection today that we must have equal chance to speak. perhaps these words might be my last words. I would like to know as to what exactly is the procedure. I would like to know the criteria on which we are...

ಶ್ರೀ ಎಸ್. ಎಂ. ಶೀನರ್ಸಾಳಿ ಚಂದ್ರಶೇಖರ್.--ಮಾನ್ಯ ಅಧ್ಯಕ್ಷರೇ, ನಾನು ಅನೇಕ ಮುಖ್ಯ ವಿಚಾರಗಳನ್ನು ಹೇಳಿದ್ದೆ. ಆದರೆ ಸದನ ಸಮೀಕ್ಷೆಯಲ್ಲಿ ನನ್ನ ಹೆಸರೇ ಬರಲಿಲ್ಲ, Sir, there will be a mistaken notion in the Press gallery. There was not even a mention about my speech in the 'Sadana Sameekshe'.

MR. SPEAKER.---I am not responsible for that.

INTERRUPTION

SRI P. RAMDEV.--Please put your own matter...

SRI K. BHASKAR NAIDU.--No, Sir, please tell the Press people as to how they have to write. They must be impartial.

MR. SPEAKER.---I am yet to learn this.

SRI S. R. BOMMAI.---You can raise it tomorrow by means of privilege motion.

SRI K. BHASKAR NAIDU.—When most of the Members from this side rise to speak the Speaker or the Deputy Speaker will ring the bell. I would like the Hon'ble speaker to enlighten me in this regard so that I know what time I should take for my speech when I am elected for the next term of five year.

(Laughter)

SRI S. R. BOMMAI.--Sir, coming to my speech on the demands I wrote a letter on 21st September 1981 to the Hon'ble Chief Minister when he was going to attend the Cabinet meeting at Belgaum. I have not received his reply in the form of what action the Government was taken. The works of Upper Krishna, Narayanpur dam Almatti dam are very important in order to bring more areas under irrigation. That is why, I was annoyed so much since no decisions were taken by the Government. . The purpose of the Divisional level Cabinet meeting is to take on the spot-decision relating to problems facing the people of that area. Inspite of my letter dated 21st September 1981, no decisions have been taken. Since I am representing that area, I thought it better to point out the irregularities in a very sharp manner. There is no progress in Upper Krishna and Narayanpur dams. I am not telling that this Government is alone responsible for it, It is a legacy also. But I know that in certain matters when there is no dearth of funds no progress has been achieved. For me there is no difference between 1972 and 1982. The same party was in power except for some six months. But the persons may be different. I am in this side only. My only point is that we must out down number of unnecessary expense and that is what the Hon'ble Chief Minister promised. There should be financial discipline in money matters

and more money for major irrigations should be provided to create more wealth, employment and the benefits should go to the rural people.

ಇದು ಆಗುತ್ತಿಲ್ಲವೆಂಬ ಭಾವನೆಯಿಂದ ಮತ್ತು ದೊಡ್ಡ ನೀರಾವರಿ ಯೋಜನೆಗಳ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ನಾನು ಪ್ರಯತ್ನ ಮಾಡಿದ್ದೇನೆ. ಈ ವಿಚಾರದಲ್ಲಿ ಇವರ ಒಂದು ಸಾಧನೆ ಸಾಕಷ್ಟು ಆಗಿಲ್ಲ, ಕಾರ್ಯ ಚುರುಕಿನಿಂದ ಆಗಿಲ್ಲವೆಂದು ಒತ್ತಿಒತ್ತಿ ಹೇಳುತ್ತೇನೆ. ಇದಕ್ಕೆ ಕಾರಣವೇನೆಂಬ ಬಗ್ಗೆ ಸರ್ಕಾರದ ನಿಲುವು ಗೊತ್ತಾದ ಮೇಲೆ ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ, ಇದೇರೀತಿ ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಬಗ್ಗೆಯೂ ಸಹ ಸಾಕಷ್ಟು ಪ್ರಗತಿ ಆಗಿಲ್ಲ. ಕಾರಂಜ, ಹಿಪ್ಪರಗಿ ಮೊದಲಾದ ಯೋಜನೆಗಳ ಕೆಲಸ ಪ್ರಗತಿಯಿಂದ ಆಗಿಲ್ಲ. ನನ್ನ ಹತ್ತಿರ ಎಲ್ಲಾ ವಿವರಗಳೂ ಇವೆ, ಆದರೆ ಹೇಳಲು ಸಮಯವಿಲ್ಲ. ಕಳೆದ ಮೂರು ವರ್ಷಗಳಲ್ಲಿ ಸಣ್ಣ ನೀರಾವರಿ ಯೋಜನೆಗಳ ಪ್ರಗತಿ ಎಷ್ಟು ಆಗಿದೆ ಎಂಬ ಬಗ್ಗೆ ಇಲ್ಲಿ ವಿವರಗಳನ್ನು ಕೊಟ್ಟಿದ್ದಾರೆ, ಆದರೆ ದೊಡ್ಡ ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳ ಒಂದು ಪ್ರಗತಿಯ ಬಗ್ಗೆ ನಾನು ಸರ್ಕಾರದ ವೈಫಲ್ಯತೆಯನ್ನು ಎತ್ತಿ ತೋರಿಸಿದ್ದೇನೆ. ಇದಕ್ಕೆ ಸರ್ಕಾರದ ಯಂತ್ರ ಚುರುಕಾಗಿಲ್ಲದಿರುವುದು ಕಾರಣ. ಸರ್ಕಾರದ ನಿರ್ಣಯಗಳು ತ್ವರಿತ ಗತಿಯಿಂದ ಆಗಿಲ್ಲವೆಂದು ಹೇಳುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಈ ಬಗ್ಗೆ ಹೆಚ್ಚು ವಿಚಾರಗಳನ್ನು ಹೇಳುವುದಿಲ್ಲ. ಆದರೆ ಕೆಲವು ವಿಚಾರಗಳನ್ನು ಹೇಳದಿದ್ದರೆ ನನ್ನ ಕರ್ತವ್ಯ ಚ್ಯುತಿಯಾಗುತ್ತದೆಂದು ಹೇಳುತ್ತೇನೆ. ಇವೊತ್ತು ಒಂದು ವಿಚಾರ ಹೇಳಿದರೆ ಮುಖ್ಯಮಂತ್ರಿಗಳು ತಪ್ಪು ತಿಳಿದುಕೊಳ್ಳಬಾರದು: ಅದೇನೆಂದರೆ, ಈ ಹಿಂದೆ ಮಹಮದ್-ಬೀನ್-ತೊಗಲಕ್ ತನ್ನ ರಾಜದಾನಿಯನ್ನು ದೆಹಲಿಯಿಂದ ದೇವಗಿರಿಗೆ ಸ್ಥಳಾಂತರ ಮಾಡಿದಂತೆ ಇವರು ಬೆಂಗಳೂರಿನಿಂದ ಬೆಳಗಾಂಗೆ, ಮೈಸೂರಿಗೆ, ಗುಲ್ಬರ್ಗಕ್ಕೆ, ಶಿವಮೊಗ್ಗಕ್ಕೆ ಹೋಗಿ ಅಲ್ಲಿ ಕ್ಯಾಬಿನೆಟ್ ಮೀಟಿಂಗ್ ಮಾಡಿ ಕೆಲವೊಂದು ನಿರ್ಣಯಗಳನ್ನು ಕೈಕೊಂಡಿದ್ದಾರೆ. ಅದು ಪತ್ರಿಕೆಗಳಲ್ಲಿ ಸಹ ಬಂದಿದೆ. ಅನೇಕ ಯೋಜನೆಗಳನ್ನು ಈ ಭಾಗಗಳಲ್ಲಿ ನಡೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅಪ್ರೂವ್ ಮಾಡಿದ್ದಾರೆ. ಈ ಯೋಜನೆಗಳಿಗೆ ಎಷ್ಟು ಹಣ ಕೊಡಬೇಕೆಂಬುದನ್ನು ಸಹ ನಿರ್ಣಯ ಮಾಡಿದಿದ್ದಾರೆ. ಈ ಸರ್ಕಾರ ನಡೆಯುವ ರೀತಿಯ ಬಗ್ಗೆ ಹೇಳುವುದಾದರೆ ತಾ॥ ೨೨-೯-೧೯೮೧ರಲ್ಲಿ ಬೆಳಗಾಂನಲ್ಲಿ ನಡೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಗದಗ್-ಬೆಟಗೇರಿ ಕುಡಿಯುವ ನೀರಿನ ಯೋಜನೆ ಸೇರಿದ ಅನೇಕ ಯೋಜನೆಗಳಿಗೆ ೬೦.೨೩ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಅದೇರೀತಿ ಗುಲ್ಬರ್ಗದಲ್ಲಿ ನಡೆದ ಮೀಟಿಂಗ್‌ನಲ್ಲಿ ೫೦.೪೦ ಕೋಟಿ ರೂಪಾಯಿಗಳನ್ನು ಮತ್ತು ಮೈಸೂರಿನಲ್ಲಿ ನಡೆದ ಮೀಟಿಂಗ್‌ನಲ್ಲಿ ೧೯.೨೦ ಕೋಟಿ ರೂಪಾಯಿಗಳನ್ನು ಹಾಗೂ ಶಿವಮೊಗ್ಗದಲ್ಲಿ ನಡೆದ ಮೀಟಿಂಗ್‌ನಲ್ಲಿ ೬೩.೭ ಕೋಟಿ ರೂಪಾಯಿಗಳನ್ನು ನಾನಾ ಯೋಜನೆಗಾಗಿ ಮಂಜೂರಾತಿ ಕೊಟ್ಟಿದ್ದಾರೆ.

ಶ್ರೀಮಾನ್ ಭಾಸ್ಕರ್ ನಾಯಿಡುರವರು ಈ ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ನಾನು ಅವರನ್ನು ಕೇಳುತ್ತೇನೆ ಬಳ್ಳಾರಿ ವಾಟರ್‌ಸಪ್ಲೈ ಸ್ಕೀಂ ಬಗ್ಗೆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅಪ್ರೂವಲ್ ತೆಗೆದುಕೊಂಡರಲ್ಲಾ, ಈ ಬಡ್ಜೆಟ್‌ನಲ್ಲಿ ಎಷ್ಟು ಹಣವನ್ನು ಇಟ್ಟಿದ್ದಾರೆ ಅನ್ನುವುದನ್ನು ಏನಾದರೂ ಅವರು ನೋಡಿದ್ದೀರಾ ? ಈ ಕ್ಯಾಬಿನೆಟ್ ಮೀಟಿಂಗ್ಸ್ ಎಲ್ಲಾ ಕಡೆಯೂ ಮಾಡಿ ನಿರ್ಣಯಗಳನ್ನು ತೆಗೆದುಕೊಂಡರಲ್ಲಾ ಅದರ ಒಟ್ಟು ಅಮೌಂಟ್ ಅನ್ನು ತೆಗೆದುಕೊಂಡರೆ ೧೯೩ ಕೋಟಿ ರೂಪಾಯಿ ಆಗುತ್ತದೆ. ನಾನು ಅದರ ಬಗ್ಗೆ ವಿವರ ಹೇಳುವುದಕ್ಕೆ ಹೋಗುವುದಿಲ್ಲ. ಹಾಗೆಯೇ ಮಾನ್ಯ ಶ್ರೀ ಶೀರನಾಳಿ ಚಂದ್ರಶೇಖರ್‌ರವರನ್ನು ಕೇಳುತ್ತೇನೆ, ಅವರ ಒಂದು ಸಹ್ಯಾದ್ರಿ ಯೂನಿವರ್ಸಿಟಿಗೆ ಈ ಬಡ್ಜೆಟ್‌ನಲ್ಲಿ ಎಷ್ಟು ದುಡ್ಡು ಸಿಕ್ಕಿದೆ ಅನ್ನುವುದನ್ನು ಏನಾದರೂ ನೋಡಿದ್ದೀರಾ ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—೧೦ ಲಕ್ಷ ರೂಪಾಯಿ ಕೊಟ್ಟಿರುವುದನ್ನು ನಾನು ನೋಡಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಆ ವಿವರಗಳಿಗೆ ಹೋಗುವುದಿಲ್ಲ. ನೀವು ಕ್ಯಾಬಿನೆಟ್ ಮೀಟಿಂಗ್ಸ್‌ನಲ್ಲಿ ಏನೇನು ನಿರ್ಣಯಗಳನ್ನು ತೆಗೆದುಕೊಂಡಿದ್ದೀರೋ ಕುಡಿಯುವ ನೀರಿನ ಬಗ್ಗೆ, ಯೂನಿವರ್ಸಿಟಿ ಬಗ್ಗೆ ಏನು ತೀರ್ಮಾನ ತೆಗೆದು ಕೊಂಡಿದ್ದೀರೋ ಅದಕ್ಕೆ ಯಾವ್ಯಾವುದಕ್ಕೆ

ಎಷ್ಟೆಷ್ಟು ಹಣ ಒದಗಿಸಿದ್ದೀರಿ ಅನ್ನುವುದು ಅವರಿಗೇ ಗೊತ್ತು. ನನ್ನ ದೃಷ್ಟಿಯಲ್ಲಿ ಈ ನಿರ್ಣಯದ ಪ್ರಕಾರ ಹಣ ಒದಗಿಸಿಲ್ಲ. Mejarity of them are only Propaganda. ಇದನ್ನು ನೋಡಿದರೆ ಕಾರ್ಯಾಚರಣೆ ತರುವುದಕ್ಕಲ್ಲ, ಬರೇ ಪ್ರಸಿದ್ಧಿಗಾಗಿ ಈ ನಿರ್ಣಯಗಳನ್ನು ಮಾಡುತ್ತಾರೆ ಅಂತ ಹೇಳಬೇಕಾಗಿದೆ. ಬಡ್ಜೆಟ್‌ನಲ್ಲಿ ಹಣ ಒದಗಿಸದೇ ಇದ್ದರೂ ಕೂಡಾ ಇಂತಹ ನಿರ್ಣಯಗಳನ್ನು ಮಾಡುತ್ತಾರೆ. ೧೯೮೧ ರಿಂದ ಸ್ವಲ್ಪ ಕೆಲಸ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಬಡ್ಜೆಟ್ಟಿನಲ್ಲಿ ನೋಡಿದರೆ ಆ ನಿರ್ಣಯಗಳಿಗೆ ತಕ್ಕಂತೆ ಹಣ ಒದಗಿಸಿದಂತೆ ಕಾಣಲಿಲ್ಲ. ಏತಕ್ಕೆ ಹೀಗೆ ಮಾಡುತ್ತೀರಾ ? ಯಾವುದಾದರೂ ವಿಷಯದಲ್ಲಿ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಒಂದು ತೀರ್ಮಾನ ತೆಗೆದುಕೊಂಡರೆ ಅದರಂತೆ ಹಣವನ್ನು ಖರ್ಚು ಮಾಡಬೇಕು ? ಆ ರೀತಿಯಾಗಿ ಏತಕ್ಕೆ ಮಾಡುತ್ತಾ ಇಲ್ಲ ? ನೀವು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಯಾವ ನಿರ್ಣಯದ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದರಂತೆ ಹಣವನ್ನು ಒದಗಿಸಿ ಕಾರ್ಯಗತ ಮಾಡಿದರೆ ಅದನ್ನು ಸ್ವಾಗತಾರ್ಹ ಮಾಡಬೇಕಾದುದೇ. ಇಲ್ಲದೇ ಹೋದರೆ ಇದಕ್ಕೆ ಏನು ವೆಚ್ಚವಾಗುತ್ತದೋ ಅದು ವ್ಯರ್ಥ ಎಂದು ಹೇಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ ಭಾರತದ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಹಿಂದೆ ಬೆಂಗಳೂರಿಗೆ ಭೇಟಿ ಕೊಟ್ಟಾಗ ವಿಧಾನಸೌಧಕ್ಕೂ ಸಹ ಬಂದಿದ್ದರು. Whether the Prime Minister has got a right to scrutinise or examine the working of a State Government's work sitting in the Chief Minister's Office is a constitutional question according to me, In a Federal system the Prime Minister has no such right. It is my view. But still she came. What is the direction the Prime Minister gave ? She said that the programmes so far as irrigation Projects are concerned, there was no planning, many work taken up have not been followed up and there was no proper progress. Ultimately, according to the Government Press Note, she directed this Government or asked this Government to complete utilisation of water of Ghataprabha and Malaprabha by 1983 which are on going works, And if they are to be completed, the Government has to provide not less than Rs. 30/35 crores per year. But they have provided only Rs. 5 crores. At this rate it will take another 10 years. The Prime Minister asked this Government to complate Upper Krishna Project by 1985. It will take another five years if you look to the progress so far made. This was the result of the exemining of the working by tha Prime Minister And I would say it is in a way an advice or a direction. Sir, this is not followed If they fail to provide the funde necessary for completion, how are they going to complete these works as per the wishes of the Prime Minister ? They are not keeping in view even the wishes of the Prime Minister. They have failed to fulfil the wishes of the Prime Minister so far as the Irrigation Projects are concerned. This is one point whieh I forget to mention and so I have mentioned it now. So far as General Adminstration is concerned, I would like to say a few words.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಮೊನ್ನೆ ಮಾತನಾಡಿದಂಥಾ ಶ್ರೀಮಾನ್ ಹೆಚ್. ಡಿ ದೇವೇಗೌಡರು ಈ ಬಗ್ಗೆ ಒಂದು ಕಮಿಷನ್ ಅನ್ನು ನೇಮಿಸಬೇಕು ಎಂದು ಹೇಳಿದರು. ನಾನು ಹೇಳುತ್ತೇನೆ ಈ ಸಮಾಜದಲ್ಲಿರತಕ್ಕಂಥಾ ಎಲ್ಲಾ ವರ್ಗದವರಿಗೂ ಎಲ್ಲಾ ಜನರಿಗೂ ಸರ್ಕಾರದಲ್ಲಿ ಅವಕಾಶ ಇರಬೇಕು ಅಂತ ಹೇಳಿದರು, ಇದರ ಅರ್ಥ, ಅದರಲ್ಲೂ ಕೂಡ ಹಿಂದುಳಿದ ವರ್ಗದವರು

ಹರಿಜನರು ಗಿರಿಜನರು ಎಲ್ಲರಿಗೂ ಇದರಲ್ಲಿ ಅವಕಾಶ ಸಿಗಬೇಕು ಅನ್ನುವ ಅರ್ಥ. ಇದರಲ್ಲಿ ಒಂದೇ ವರ್ಗದ ಅಧಿಕಾರಿಗಳು ಆಗಿದ್ದರೆ ಕೆಲಸವಾಗುವುದಿಲ್ಲ ಅಂತಲ್ಲ, ಅವರೂ ಕೂಡ ನಿಷ್ಪಕ್ಷಪಾತರೂ ಮತ್ತು ಕಾರ್ಯತತ್ಪರರೂ ಆಗಿರುತ್ತಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ವಿಧಾನಸೌಧದಲ್ಲಿ ಇರತಕ್ಕಂಥಾ ಅಧಿಕಾರಿಗಳಲ್ಲಿ Ninety percent are men of capacity and integrity. ಅವರಿಗೆ ಕೊಟ್ಟಿದ್ದೀರಿ. ಅದರ ಬಗ್ಗೆ ನಾನು ಹೇಳುವುದಿಲ್ಲ. ಇತರೇ ವರ್ಗದವರು ಇದ್ದರೆ ಸರಿಯಾಗಿ ಕೆಲಸ ವಾಗುವುದಿಲ್ಲ ಎಂದು ಹೇಳಬಹುದು, ಆಗುತ್ತದೆ ಇಲ್ಲ ಎಂತಲ್ಲ, ಆದರೂ ಕೂಡ ರಾಷ್ಟ್ರದಲ್ಲಿ ಸಾಮಾಜಿಕ ವಾಗಿ ಒಂದು ನ್ಯಾಯವನ್ನು ತರಬೇಕಾದರೆ ಬೇರೆ ಬೇರೆ ಸಮಾಜದವರಿಗೂ ಕೂಡ ಸರ್ಕಾರದಲ್ಲಿ ಪ್ರಾತಿನಿಧ್ಯ ಇರಬೇಕು, ಆವಾಗ ಸರ್ಕಾರ ನಮ್ಮದು ಅನ್ನುವ ದೃಷ್ಟಿ ಬರುತ್ತದೆ, ಈ ಒಂದು ದೃಷ್ಟಿ ಯಿಂದ ನಾವು ಇದರ ಅಂಕಿಸಂಖ್ಯೆಗಳನ್ನು ನೋಡಿದಾಗ ನನಗೆ ಬಹಳ ಆಶ್ಚರ್ಯವಾಯಿತು, ದಯ ವಿಟ್ಟು ನಾನು ಈ ಮಾತನ್ನು ಹೇಳುವಾಗ ಯಾರೂ ಕೂಡ ಅಪಾರ್ಥ ಮಾಡಿಕೊಳ್ಳುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದು ಎಲ್ಲರಿಗೂ ಗೊತ್ತಾಗಬೇಕು, ಆದುದರಿಂದ ಇದರಲ್ಲಿ ಸೂಕ್ತ ಬದಲಾವಣೆ ಯಾಗಬೇಕು ಅನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆಯೋ ಹೊರತು ಯಾವುದೋ ಜಾತಿ ಭಾವನೆಯನ್ನು ಇಟ್ಟುಕೊಂಡು ಹೇಳುತ್ತಾ ಇಲ್ಲ. ನಾನು ಇದರ ಬಗ್ಗೆ ಸ್ಪಷ್ಟವಾದ ವಿವರಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಇದು ಎಲ್ಲರಿಗೂ ಗೊತ್ತಾಗಬೇಕು. In Vidhana Soudha the total number of Secretaries to Government is 16 out of which 11 are Brahmins, 2 Christians, 1 Scheduled Caste, 1 Lingayat and 1 Jain. ಇದರಲ್ಲಿ ಒಬ್ಬ ಲಿಂಗಾಯಿತರು ಈಗ್ಗೆ ಒಂದು ತಿಂಗಳ ಹಿಂದೆ ಬಂದಿದ್ದಾರೆ. ಇದುವರೆಗೂ ಈಗ್ಗೆ ಒಂದು ತಿಂಗಳು ಮೊದಲು ನೋಡಿದರೆ ಮೇಜರ್ ಕಮ್ಯೂನಿಟಿ ಲಿಂಗಾಯಟ್ಸ್ ಮತ್ತು ಒಕ್ಕಲಿಗರು ಇದ್ದಾರೆ ಎಲ್ಲಾ ಅಧಿಕಾರಿಗಳನ್ನೂ ನೋಡಿದರೆ ಅವರ ಕಮ್ಯೂನಿಟಿಯೇ ಜಾಸ್ತಿ, ಎಲ್ಲಾ ಸ್ಥಾನಗಳಲ್ಲೂ ಕೂಡ ಅವರೇ ತುಂಬಿದ್ದಾರೆ, ಸರ್ಕಾರದಲ್ಲಿ ನೋಡಿದರೆ ಅವರದೇ ಸಂಖ್ಯೆ ಜಾಸ್ತಿ ಎನ್ನುವ ಭಾವನೆ ಬಂದು ಇದರ ಬಗ್ಗೆ ಚರ್ಚೆಯೂ ಆಗಿದೆ, ಈಪೊತ್ತು ಏನು ಇದೆ ನೋಡಿ ಸ್ವಾಮಿ At the Joint/Additional Secretaries level there are 9 Brahmins, 3 Scheduled Castes, 1 B C., 1 Lingayat and on other backward community, Among Deputy Secretaries there are 22 Brahmins, 4 Scheduled Castes. 17 Backwards, I Scheduled Tribe, 5 Lingayats, 1 Muslim, 8 others and one Christian and 2 Vokkaligas. There are 23 persons at the level of Deputy Commissioners and Divisional Commisslners. Among them 13 are Brahmins, 2 Scheduled Castes, 2 B.Cs, 2 Scheduled Tribes, 1 Christian, 1 Lingayat and one Bant.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ರಾಜ್ಯದಲ್ಲಿ ಸೆಕ್ರಿಟರಿಗಳು ಬೇಕಾದಷ್ಟು ಇದ್ದಾರೆ. ಈ ಎಲೆಕ್ಷನ್‌ಗೆ ಜಾತಿ ಆಧಾರದ ಮೇಲೆ ಟಿಕೆಟ್ ಕೊಡುವ ಹಾಗೆ ಇದರಲ್ಲೂ ಕೂಡ ಜಾತಿ ಆಧಾರದ ಮೇಲೆ ಇಂತಿಷ್ಟು ಕೋಟಾ ಕೊಡಬೇಕು ಎನ್ನುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಅದೇ ಪಾಯಿಂಟ್‌ಗೆ ಬರುತ್ತೇನೆ. ಆದೇರೀತಿ ಯಾಗಿ ನಮ್ಮ ರಾಜ್ಯದಲ್ಲಿರುವ ಚೀಫ್ ಇಂಜಿನೀಯರ್ಸ್ ಮತ್ತು ಅನೇಕ ಬೋರ್ಡ್‌ಗಳಲ್ಲಿರುವ ಅಧಿಕಾರಿ ಗಳ ಸಂಖ್ಯೆಗಳನ್ನು ನೋಡಿದರೆ ಶ್ರೀಮಾನ್ ಹೆಚ್. ಡಿ. ದೇವೇಗೌಡರು ಹೇಳಿದ ಹಾಗೆ ಬಹುಶಃ ಇಷ್ಟೊಂದು ಹುದ್ದೆಗಳಿರುವುದು ಅವಶ್ಯಕವಿಲ್ಲ. ಸುಮಾರು ೧೦–೧೫ ವರ್ಷಗಳಿಂದಲೂ ಕೂಡ ಬಹು ಸಂಖ್ಯೆಯಲ್ಲಿ ಈ ಕಮ್ಯೂನಿಟಿಯವರೇ ಬಂದು ಎಲ್ಲಾ ಸ್ಥಾನಗಳಲ್ಲೂ ಇವರೇ ಇದ್ದಾರೆ ಎನ್ನುವ ಒಂದು ಇತ್ತು, ಈಗಲಾದರೂ ಇತ್ತೀಚೆಗೆ ಹರಿಜನ ಗಿರಿಜನ ಮತ್ತು ಬ್ಯಾಕ್‌ವರ್ಡ್ ಬಗ್ಗೆ ಏನು ಒಂದು ರೋಸ್ಟರ್ ಇವರು ತಯಾರು ಮಾಡಿದ್ದಾರೆ ಆ ರೋಸ್ಟರ್ ಸಿಸ್ಟಂ ಪ್ರಕಾರವಾದರೂ ಕೂಡ ಕೆಲಸ ಕೊಟ್ಟಿದ್ದಾರೆಯೋ ಎಂದು ನಾನು ಕೇಳಬಯಸುತ್ತೇನೆ.

ಎರಡೂವರೆ ವರ್ಷಗಳಿಂದ ರೋಸ್ಟರ್ ಏನು ಇದೆ ಇದಕ್ಕೆ ತಾವು ತಡೆ ಕೊಟ್ಟಿದ್ದೀರಿ, ಈ ವ್ಯವಸ್ಥೆ ಜಾರಿಯಲ್ಲಿರಬೇಕು. ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ ತೀವ್ರಗತಿಯಲ್ಲಿ ನಿರ್ಣಯ ಆಗದೆ ಈ ವರ್ಷಕ್ಕೆ ಸಿಕ್ಕಬೇಕಾದ ಪ್ರಮೋಷನ್ ಸಿಕ್ಕುತ್ತಿಲ್ಲ. ಅವರಿಗೆ ಸಿಕ್ಕಬೇಕಾದ ಸ್ಥಾನಮಾನಗಳು ಸಿಕ್ಕುತ್ತಿಲ್ಲ. ಇದು ಬಹಳ ಮಹತ್ವದ್ದು, ಒಂದೇ ವರ್ಗದವರು ಅಧಿಕಾರಿಗಳು ಇದ್ದಾರೆ ಜಾತಿಯ ಆಧಾರದ ಮೇಲೆ ನೇಮಕಗಳು ಆಗುತ್ತವೆ ಎಂದರೆ ಅವರು ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆ ಆದ್ದರಿಂದ ಬರುತ್ತಾರೆ. ಇದಕ್ಕೆ ನಮ್ಮ ಮುಖ್ಯ ಮಂತ್ರಿಗಳು ಜವಾಬ್ದಾರರು ಎಂದು ನಾನು ಹೇಳುವುದಿಲ್ಲ. ಐ ಎ ಎಸ್, ಐ ಪಿ ಎಸ್ ಕೇಡರ್‌ನ ಒಂದು ನೀತಿ ಏನು ಇದೆ ಅದನ್ನು ರೇಷಿಯೋ ಪ್ರಕಾರ ಕೊಡುತ್ತಿರುವುದನ್ನು ಕಡಿಮೆ ಮಾಡಬೇಕಾಗುತ್ತದೆ. ಜೊತೆಗೆ ರೋಸ್ಟರ್‌ನ್ನು ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡಿ ಜಾರಿಗೆ ಕೊಟ್ಟು ಯಾವ ಯಾವ ಸಮಾಜದವರಿಗೆ ಅನ್ಯಾಯವಾಗಿದೆ ಅವರಿಗೆ ನ್ಯಾಯವನ್ನು ದೊರಕಿಸಿಕೊಡತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು. ಇದನ್ನು ನಾನು ರಾಜಕೀಯವಾಗಿ ಹೇಳುತ್ತಿಲ್ಲ.

ಶ್ರೀ ವೈ. ರಾಮಕೃಷ್ಣ.—ತಮಗೆ ಗೊತ್ತಿದೆ, ಈ ವಿಷಯ ಹೈಕೋರ್ಟಿನಲ್ಲಿದ್ದು ಏನೋ ವಿಚಾರಗಳು ಬಂದು ಕೊನೆಗೆ ಒಂದು ತೀರ್ಮಾನವಾಗಿ ಅದರ ಪ್ರಕಾರ ಅಪಾಯಿಂಟ್‌ಮೆಂಟ್‌ಗಳು ಆದುವು, ತಾವು ನಾವುಗಳು ಇವರಿಗೆ ಅವಕಾಶ ಕೊಡದೆ ತಡೆಹಿಡಿದಿದ್ದೇವೆನ್ನುವ ರೀತಿಯಲ್ಲಿ ಹೇಳುತ್ತಿದ್ದೀರಿ, ನಾವು ಹಿಂದುಳಿದ ವರ್ಗಗಳಿಗೆ ಅವಕಾಶ ಕೊಡದೆ ಇದ್ದ ಪಕ್ಷದಲ್ಲಿ ಈ ವಿಷಯದಲ್ಲಿ ವಿಫಲರಾಗಿದ್ದೇವೆಂದು ಹೇಳುವ ಪಕ್ಷದಲ್ಲಿ ಇದರ ಬಗ್ಗೆ ಬೇರೆ ಯಾವುದಾದರೂ ಆರ್ಡರನ್ನು ನಾವು ಮಾಡಿದ್ದೇವೆಯೇ, ತಾವು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದುಳಿದವರಿಗೆ ಸಮಾನ ಅವಕಾಶ ಕೊಡುವ ವಿಷಯದಲ್ಲಿ ಡಿಲೇ ಆಗಿದೆ. ಆದರೆ ಇದನ್ನು ತೀವ್ರಗತಿಯಿಂದ ಮಾಡತಕ್ಕ ಕೆಲಸ ಆಗಬೇಕು. ಸರ್ಕಾರದಲ್ಲಿ ಸುಮಾರು ೫೦ ಸಾವಿರ ಜಾಗಗಳು ಖಾಲಿ ಇವೆಯೆಂದು ಮತ್ತು ಅವುಗಳನ್ನು ತುಂಬತಕ್ಕ ವ್ಯವಸ್ಥೆಯಾಗಬೇಕು.

ರೋಸ್ಟರ್ ಸಿಸ್ಟಂ ಏನು ಇದೆ ಅದು ಬೇಗ ಜಾರಿಯಲ್ಲಿ ಬರಬೇಕಾಗುತ್ತದೆ. ಹೈಕೋರ್ಟ್‌ನಲ್ಲಿ ಇದಕ್ಕೆ ಸ್ಟೇ ಇದ್ದರೆ ಅದನ್ನು ಬೇಗ ತೆಗೆಯತಕ್ಕ ವ್ಯವಸ್ಥೆಯಾಗಬೇಕು ಎಂದು ನಾನು ಹೇಳುತ್ತೇನೆ. ನಾನು ಇನ್ನೊಂದು ಮಾತನ್ನು ಈ ಸಭೆಯಲ್ಲಿ ಹೇಳಬೇಕು, ನಾನು ಜವಾಬ್ದಾರಿ ಸ್ಥಾನದಲ್ಲಿದ್ದೇನೆ, ಮತ್ತು ಶಾಸಕನಾಗಿದ್ದೇನೆ, ನಾನು ಜಾತಿವಾದಿಯಲ್ಲ, ಜಾತಿಯಲ್ಲಿ ನನಗೆ ನಂಬಿಕೆ ಇಲ್ಲ. ಒಂದು ಮಾತನ್ನು ನಾನು ದಿವಂಗತ ದೇವರಾಜ ಅರಸ್ ಅವರಿಗೂ ಹೇಳಿದ್ದೆ ಅದನ್ನು ಇಲ್ಲಿಯೂ ಹೇಳುತ್ತೇನೆ.

ನಾವು ಜಾತಿಯ ಮೇಲೆ ಆಡಳಿತವನ್ನು ನಡೆಸುತ್ತಾ ಹೋದರೆ, ರಾಜ್ಯಕ್ಕೆ ದೇಶಕ್ಕೆ ಉಳಿಗಾಲ ಇಲ್ಲ. ಮಾನ್ಯ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಒಕ್ಕಲಿಗರ ಬಡತನ ಹೋಯಿತೇ, ವೀರೇಂದ್ರ ಪಾಟೀಲರು, ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಲಿಂಗಾಯಿತರ ಬಡತನ ಹೋಯಿತೇ ಲಿಂಗಾಯತರಲ್ಲಿ ಅತಿ ಬಡವರು ದೇಶದಲ್ಲಿ ಇಲ್ಲವೇ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಮೇಲೆ ಯಾರು ಪ್ರಧಾನ ಮಂತ್ರಿಗಳಾಗಿದ್ದಾರೆ ? ಒಂದು ಕಾಲದಲ್ಲಿ ಶ್ರೀಮತಿ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಎಲ್ಲಾ ನಾಯಕರು ಬ್ರಾಹ್ಮಣರು ಇದ್ದರು. ಮಾನ್ಯ ಬೇಪೂರ್ ಅವರು, ಸುಬ್ರಹ್ಮಣ್ಯ ಅವರು, ಆದರೆ ಬ್ರಾಹ್ಮಣರಲ್ಲಿ ಬಡತನ ಹೋಯಿತೇ ? ಯಾರೋ ಒಬ್ಬರು ಜಾತಿಯಲ್ಲಿ ಮುಖ್ಯಸ್ಥರು ಅಧಿಕಾರಕ್ಕೆ ಬಂದರೆ ಆ ಜಾತಿಯಲ್ಲಿ ಬಡತನ ಹೋಗಲಿಕ್ಕೆ ಸಾಧ್ಯವಿಲ್ಲ. ಜಾತೀಯ ಆಧಾರದ ಮೇಲೆ ಅಧಿಕಾರಿಗಳನ್ನು ನೇಮಕ ಮಾಡುವುದಾದರೆ ಆಯಾ ಜಾತಿಯ ಬಡತನ ಹೋಗುವುದಿಲ್ಲ. ಈ ಸಮಸ್ಯೆ ಬಗೆಹರಿಯಬೇಕಾದರೆ ಸಮಾಜದಲ್ಲಿಯೇ ಆಮೂಲಾಗ್ರವಾಗಿ ಬದಲಾವಣೆಯಾಗಬೇಕಾಗಿದೆ. ಸರ್ವರಿಗೂ ಸಮಾನವಾದ ಅವಕಾಶಗಳು ಸಿಕ್ಕಬೇಕಾದರೆ ರಾಜಕೀಯ ಪಕ್ಷಗಳು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತವೆಯೋ ಆ ಕ್ರಮಗಳ ಮತ್ತು ನೀತಿಯಿಂದ ಮಾತ್ರ ಇದು ಸಾಧ್ಯ. ಜಾತಿಯಿಂದಲ್ಲ ಎನ್ನುವುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕಾಗಿದೆ. ಆದರೂ ಕೂಡ ಇದಕ್ಕೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನು ಹೇಳುವುದು ಏಕೆಂದರೆ, ನಮ್ಮ ಜನರಲ್ಲಿ ಏನೊಂದು ಭಾವನೆ ಮೂಡಿದೆ ಅದನ್ನು ತಾವು ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮತ್ತು

ಯಾವ ರೀತಿಯಲ್ಲಿ ಮುಖ್ಯ ಮಂತ್ರಿಗಳು ಕಾರ್ಯಾಚರಣೆ ನಡೆಸುತ್ತಾರೆ ಅದನ್ನು ನಾವು ಈ ದೃಷ್ಟಿಯಿಂದ ಅಳೆಯಬೇಕಾಗುತ್ತದೆ.

ವಿಶ್ವವಿದ್ಯಾನಿಲಯಗಳಲ್ಲಿ ವೈಸ್ ಚಾನ್ಸಲರ್‌ಸ್ನು ನೇಮಕ ಮಾಡತಕ್ಕ ವಿಚಾರದಲ್ಲಿ ಇವತ್ತು ಶಿಕ್ಷಣ ತಜ್ಞರುಗಳನ್ನು ಅಲ್ಲಿ ನೇಮಕ ಮಾಡಿದ್ದಾರೆ. ಈಗ ಅಲ್ಲಿಯ ವಾತಾವರಣವೇ ಬದಲಾವಣೆಯಾಗಿದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಯಾವ ರೀತಿಯಲ್ಲಿ ನಾವು ನೀತಿಯನ್ನು ಹಾಕಿಕೊಳ್ಳುತ್ತೇವೆಂಗೋ ಅದರ ಮೇಲೆ ಅಲ್ಲಿಯ ಆಡಳಿತ ನಡೆಯುತ್ತದೆ. ಎಲ್ಲರಿಗೂ ಇಲ್ಲಿ ಅವಕಾಶವನ್ನು ಕೊಡಲಾಗಿದೆ, ಈ ರೀತಿ ಆಗಬೇಕು. ಎಲ್ಲಾ ಜಾತಿಯಲ್ಲಿಯೂ ೯೦ ಪರ್ಸೆಂಟ್ ಜನ ಬಡವರು ಇದ್ದಾರೆ, ಇದಕ್ಕೆ ಸರಿಯಾದಂಥ ಪ್ರೂಫ್ ಸರ್ಕಾರದಲ್ಲಿ ಸಿಕ್ಕಬೇಕಾಗುತ್ತದೆ. ಇವತ್ತು ಹಿಂದುಳಿಗವರಿಗೆ ಹರಿಜನ ಗಿರಿಜನರಿಗೆ ರಾಜ್ಯಾಂಗದಲ್ಲಿ ಕೊಟ್ಟಂಥ ಹಕ್ಕುಗಳನ್ನು ಕೊಡುವಾಗ ನಾವು ತ್ವರಿತ ಗತಿಯಿಂದ ಕೆಲಸ ಮಾಡಬೇಕಾಗಿದೆ.

ಇವತ್ತು ಗುಂಡೂರಾಯರ ಸರ್ಕಾರ ಬಂದ ಮೇಲೆ, ಅವರ ಸರ್ಕಾರ ಏನು ಸಾಧನೆ ಮಾಡಿದೆ ಆ ಸಾಧನೆಯ ಬಗ್ಗೆ ನಾನು ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಲು ಸಮಯವಿಲ್ಲ, ಒಂದು ವಿಚಾರವನ್ನು ಮಾತ್ರ ನಾನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ವಿಷಯವನ್ನು ನಾನು ಅನೇಕ ಸಲ ಇಲ್ಲಿ ಹೇಳಿದ್ದೇನೆ. ಕರಪ್ಷನ್ ಚಾರ್ಜಸ್ಸ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯಕ್ಕೆ ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ಆತ್ಮ ಸಂಶೋಧನೆ ಮಾಡಬೇಕಾಗುತ್ತದೆ. ಇವತ್ತು ದಕ್ಷ ಆಡಳಿತದ ಬಗ್ಗೆ ಅವರು ಹೇಳಿದ್ದಾರೆ. ಆದರೆ ಸ್ವಚ್ಛ ಆಡಳಿತದ ಬಗ್ಗೆ ಹೇಳುವುದಾದರೆ ನನಗಂತೂ ಇದರ ಬಗ್ಗೆ ನಂಬಿಕೆ ಇಲ್ಲ. ಕೆಲವು ವಿಚಾರಗಳನ್ನು ನಾವು ನೋಡಿದಾಗ ನಮಗೆ ನಂಬಿಕೆ ಬರುತ್ತಿಲ್ಲ. ಈ ಭ್ರಷ್ಟಾಚಾರ ಇವತ್ತಿನಿಂದ ಬಂದಿಲ್ಲ ಎಂದು ನನಗೆ ಗೊತ್ತು. ಹಿಂದೆಯೂ ಇತ್ತು, ಇಂದೂ ಇದೆ, ಮುಂದೆಯೂ ಬರುತ್ತದೆ. ಆದರೆ ಇಂದು ಯಾವ ತರಹದ್ದು ಇದೆಯೆನ್ನುವುದನ್ನು ಯಾವ ಹಂತದಲ್ಲಿ, ಯಾವ ರೀತಿಯಲ್ಲಿ ಇದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ರಾಜಕೀಯ ಪಕ್ಷಗಳು ಇವತ್ತು, ಎಲೆಕ್ಷನ್ ಮಾಡಬೇಕಾದರೆ ಯಾರೂ ಸ್ವಂತ ಜೇಬಿನಿಂದ ಹಣವನ್ನು ಖರ್ಚು ಮಾಡಿಕೊಂಡು ಎಲೆಕ್ಷನ್ ಮಾಡುವುದಿಲ್ಲ. ನಾನೂ ಜನರ ಹತ್ತಿರ ಹೋಗಬೇಕಾಗುತ್ತದೆ. ಹಣ ಕೂಡಿಸಬೇಕಾಗುತ್ತದೆ, ಈ ರೀತಿಯಲ್ಲಿ ಹಣವನ್ನು ಕೂಡಿಸುವಾಗ, ಅದನ್ನು ಪಡೆಯುವ ರೀತಿ, ನೀತಿಯಲ್ಲಿ ಮಾತ್ರ ಬಹಳ ಕಟ್ಟುನಿಟ್ಟು ಬೇಕಾಗುತ್ತದೆ, ಈ ಕಟ್ಟುಪಾಡು ಇಲ್ಲದೇ ಹೋದರೆ ರಾಷ್ಟ್ರ, ರಾಜ್ಯಗಳು ಉಳಿಯುವುದಿಲ್ಲ, ಉಳಿಯುವುದು ಕಷ್ಟ ಎನ್ನುವ ಮಾತನ್ನು ಅಧ್ಯಕ್ಷರ ಮೂಲಕ ತಮಗೆ ಹೇಳಬಯಸುತ್ತೇನೆ. ಪೊಲಿಟಿಕಲ್ ಕರಪ್ಷನ್ ಹೋಗದ ಹೊರತು ಉಳಿದ ಹಂತದಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡಿ ಏನು ಪ್ರಯೋಜನ? ಡೆಲ್ಲಿಯಿಂದ ವಿಧಾನ ಸೌಧದವರೆಗೆ ಮಾತನಾಡಿದರೂ ವ್ಯರ್ಥವೇ? ಇದು ಕೇವಲ ಅರಣ್ಯರೋಧನವಾಗುತ್ತದೆ. ಪೊಲಿಟಿಕಲ್ ಕರಪ್ಷನ್ ಮಾಸ್ಟರ್ಸ್ ಸರಿಯಾದ ರೀತಿಯಲ್ಲಿ ನಡೆದುಕೊಂಡರೆ, ನಮ್ಮಲ್ಲಿ ಒಂದು ರೀತಿಯಲ್ಲಿ ನೀತಿ ಬಂದರೆ ಇದು ಹೋಗುತ್ತದೆ. ನಾನು ಇನ್ನೂ ಒಂದು ಮಾತನ್ನು ಇಲ್ಲಿ ಹೇಳುತ್ತೇನೆ. ತಾವು ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ದೇವರಾಜ ಅರಸ್ ಅವರ ಕಾಲಕ್ಕೆ ಕರಪ್ಷನ್ ವಿಚಾರದಲ್ಲಿ ಗ್ರೋವರ್ ಕಮಿಷನ್‌ನ್ನು ನೇಮಿಸಿದ್ದರು. ಮಾನ್ಯ ನಿಜಲಿಂಗಪ್ಪನವರು ಇದ್ದಾಗ ನಾನು ಈ ಮಾತನ್ನು ಹೇಳಿದ್ದೆ, ಎಲ್ಲಾ ಕಾಲದಲ್ಲಿಯೂ ಇದು ಇದ್ದೆ ಇದೆ. ಇದು ದೇವರಾಜ ಅರಸ್ ಅವರ ಕಾಲದಲ್ಲಿ ಇದು ಡೀಸೆಂಟ್ರಲೈಸ್ ಆಯಿತು. ಈ ಸರ್ಕಾರದಲ್ಲಿ ಇದು ಸೆಂಟ್ರಲೈಸ್ ಆಗಿದೆ. ಮಾನ್ಯ ದೇವರಾಜ ಅರಸ್ ಅವರು ತಮ್ಮ ಕೊನೆಯ ಕಾಲದಲ್ಲಿ ಅವರೇ ಕೊಟ್ಟಂಥ ಪತ್ರಿಕಾ ಹೇಳಿಕೆಯಲ್ಲಿ ಏನೇನೋ ಹೇಳಿದ್ದಾರೆ ಇದಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಅದಕ್ಕೆ ತೆಗೆದುಕೊಳ್ಳಬೇಕಾಗಿತ್ತು ರಾಜಕೀಯ ಪಕ್ಷಗಳು ದೇಣಿಗೆ ವಸೂಲು ಮಾಡತಕ್ಕದ್ದು ಇದರ ಬಗ್ಗೆಯೂ ಹೇಳಿದ್ದಾರೆ. ರಾಜಕೀಯ ಪಕ್ಷಗಳು ದೇಣಿಗೆ ವಸೂಲು ಮಾಡುವುದಕ್ಕೆ ನನ್ನ ವಿರೋಧವಿಲ್ಲ. ಆದರೆ ರಾಜ್ಯದಲ್ಲಿ ಅದರಲ್ಲಿಯೂ ಮೆಡಿಕಲ್ ಇಂಜನಿಯರಿಂಗ್ ಪ್ರವೇಶದ ವಿಷಯದಲ್ಲಿ ವಿದ್ಯಾ ಖಾತೆಯಲ್ಲಿ ಆಗತಕ್ಕಂಥದ್ದಕ್ಕೆ ನಾನು ನೊಂದು ಹೇಳುತ್ತಿದ್ದೇನೆ. ಇವತ್ತು ನಮ್ಮಲ್ಲಿರತಕ್ಕ ಎಂಜನಿಯರಿಂಗ್ ಕಾಲೇಜುಗಳು ಸಂಖ್ಯೆ ಮೆಡಿಕಲ್ ಕಾಲೇಜುಗಳು ಸಂಖ್ಯೆ ಎಷ್ಟು?

ಇವತ್ತು ನಾನು ಮಾನ್ಯ ಮುಖ್ಯಮಂತ್ರಿಯವರಿಂದ ಈ ಮೆಡಿಕಲ್ ಕಾಲೇಜುಗಳ ಬಗ್ಗೆ ವಿವರವನ್ನು ಕೇಳಬಯಸುತ್ತಿದ್ದೇನೆ. ಈ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಬಗ್ಗೆ ನಾನು ಒಂದು ದೊಡ್ಡ ಆಪಾದನೆಯನ್ನು ಮಾಡಿದ್ದೇನೆ. ಅದನ್ನು ನಾನು ಬಹಳ ಜವಾಬ್ದಾರಿಯಿಂದ ಮಾಡಿದ್ದೇನೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ನಾನು ಏನೋ ಹಾರಿಕೆಯ ಮಾತಿನಿಂದ ಈ ಸದನದಲ್ಲಿ ಮತ್ತು ಆ ಸದನದಲ್ಲಿ ಇದ್ದಾಗ ಆ ರೀತಿ ಆಪಾದನೆ ಮಾಡುವುದಕ್ಕೆ ಹೋಗಲಿಲ್ಲ. ಮಾನ್ಯ ಅಧ್ಯಕ್ಷರೇ, ಈ ಪ್ರವೇಟ್ ಮೆಡಿಕಲ್ ಕಾಲೇಜುಗಳ ವಿಚಾರ ತಮಗೆ ಗೊತ್ತಿದೆ. ಹೊಸದಾಗಿ ಆದಂತಹ ಮೆಡಿಕಲ್ ಕಾಲೇಜುಗಳ ಬಗ್ಗೆ ಕೂಡ ತಮಗೆ ಗೊತ್ತಿದೆ. ಈ ಬಗ್ಗೆ ಸರ್ಕಾರದ ನೋಟಿಫಿಕೇಷನ್ ಕೂಡ ಇದೆ. ಆ ನೋಟಿಫಿಕೇಷನ್ ಪ್ರಕಾರ ಯಾವ್ಯಾವ ಕಾಲೇಜಿಗೆ ಎಷ್ಟೆಷ್ಟು ಸೀಟುಗಳು ಇವೆ ಎಂಬುದನ್ನು ಸಹ ಅದರಲ್ಲಿ ಹೇಳಿದ್ದಾರೆ. ಈ ಗೌರ್ನಮೆಂಟ್ ಕಾಲೇಜುಗಳನ್ನು ಬಿಟ್ಟು ಪ್ರವೇಟ್ ಮೆಡಿಕಲ್ ಕಾಲೇಜುಗಳಲ್ಲಿರತಕ್ಕಂಥ ಸೀಟುಗಳ ಸಂಖ್ಯೆಯನ್ನು ಸರ್ಕಾರದವರು ಇದರಲ್ಲಿ ಕೊಟ್ಟಿದ್ದಾರೆ. ಇನ್‌ಟೇಕ್ ಬಗ್ಗೆ ಬೇರೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಅವಕ್ಕೆ ದುಡ್ಡು ಎಷ್ಟೆಷ್ಟು ಕೊಟ್ಟಿದ್ಧಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ವಿವರ ಇಲ್ಲ. ಈ ಸರ್ಕಾರದ ನೋಟಿಫಿಕೇಷನ್ ಪ್ರಕಾರ ದಾವಣಗೆರೆ ಕಾಲೇಜಿನಲ್ಲಿ ೧೦೦ ಸೀಟುಗಳು ಇವೆ, ಅವರು ೧೩೫ ಸೀಟು ತೆಗೆದುಕೊಂಡಿದ್ದಾರೆ. ಅಂದರೆ ೩೫ ಹೆಚ್ಚು ಸೀಟುಗಳಿಗೆ ತೆಗೆದುಕೊಂಡಿದ್ದಾರೆ. ಬೆಳಗಾಂ ಕಾಲೇಜಿನಲ್ಲಿ ೧೦೦ ಸೀಟುಗಳು ಇದ್ದರೆ ೧೧೦ ಸೀಟುಗಳಿಗೆ ತೆಗೆದುಕೊಂಡಿದ್ದಾರೆ. ಗುಲ್ಬರ್ಗದಲ್ಲೂ ಕೂಡ ೧೦೦ ಸೀಟುಗಳು ಇದ್ದರೆ ೧೧೦ ಸೀಟುಗಳಿಗೆ ತೆಗೆದುಕೊಂಡಿದ್ದಾರೆ.

ಶ್ರೀ ಸಿ. ಎಂ ಇಬ್ರಾಹಿಂ.—ಮಾನ್ಯ ಬೊಮ್ಮಾಯಿಯವರೇ, ಆ ಮೂರು ಕಾಲೇಜುಗಳೂ ಲಿಂಗಾಯತರ ಕಾಲೇಜುಗಳು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಅದನ್ನೂ ಹೇಳುತ್ತೇನೆ. ಮಂಗಳೂರು ಕಾಲೇಜಿನಲ್ಲಿ ೧೦೦ ಸೀಟುಗಳು ಇದ್ದರೆ ಅಲ್ಲಿ ೧೦೭ ಸೀಟುಗಳಿಗೆ ತೆಗೆದುಕೊಂಡಿದ್ದಾರೆ. ಡಾ|| ಅಂಬೇಡ್ಕರ್ ಮೆಡಿಕಲ್ ಕಾಲೇಜಿನಲ್ಲಿ ೧೦೦ ಸೀಟುಗಳು ಇದ್ದರೆ ೧೧೭ ಸೀಟುಗಳಿಗೆ ತೆಗೆದುಕೊಂಡಿದ್ದಾರೆ. ಶ್ರೀ ಕೆಂಪೇಗೌಡ ಮೆಡಿಕಲ್ ಕಾಲೇಜಿನಲ್ಲಿ ೧೦೦ ಸೀಟುಗಳು ಇದ್ದರೆ ೧೧೦ ಸೀಟುಗಳಿಗೆ ತೆಗೆದುಕೊಂಡಿದ್ದಾರೆ. ಈ ಮಾತನ್ನು ಹೇಳತಕ್ಕಂಥ ಸಂದರ್ಭದಲ್ಲಿ ನಾನು ಒಂದು ಮಾತನ್ನು ಜ್ಞಾಪಿಸಿಕೊಳ್ಳಬೇಕಾತ್ತದೆ. ಹೊಸ ಮೆಡಿಕಲ್ ಕಾಲೇಜುಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಆ ವಿಷಯದಲ್ಲಿ ನಾವು ಮತ್ತು ಮಾನ್ಯ ಮುಖ್ಯಮಂತ್ರಿಯವರೂ ಚರ್ಚೆ ಮಾಡಿದ್ದೇವೆ. ಹಾಗೆ ಚರ್ಚೆ ಮಾಡುವಾಗ ಒಂದು ಮಾತು ಬಂತು. ಅದು ಮಾನ್ಯ ಮುಖ್ಯಮಂತ್ರಿಯವರಿಗೆ ನೆನಪು ಇದೆಯೋ ಇಲ್ಲವೋ ಗೊತ್ತಿಲ್ಲ. ಆ ಸಮಯದಲ್ಲಿ ಶ್ರೀಮಾನ್ ದೇವೇಗೌಡರು ಮತ್ತು ಶ್ರೀ ಆರ್ಮುಗಂರವರೂ ಸಹ ಇದ್ದರು ಈ ಹೊಸ ಮೆಡಿಕಲ್ ಕಾಲೇಜುಗಳನ್ನು ಮಾಡುವುದರ ಬಗ್ಗೆ ನನ್ನನ್ನು ಕೇಳಿದಾಗ 'ಈಗಾಗಲೇ ಬೇರೆ ಬೇರೆ ಜನಾಂಗದವರಿಗೆ ಕಾಲೇಜುಗಳು ಇವೆ ; ಈ ಹರಿಜನಗಿರಿಜನರಿಗೆ ಇಲ್ಲ, ಒಕ್ಕಲಿಗರಿಗೆ ಇಲ್ಲ, ಮುಸ್ಲಿಂ ಜನರಿಗೆ ಇಲ್ಲ ; ಅವರಿಗೆ ಕೊಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಈ ಮೂರು ಕಾಲೇಜುಗಳನ್ನು ಕೊಟ್ಟುಬಿಟ್ಟರೆ ಎಲ್ಲಾ ಸಮಾಜದವರಿಗೂ ಕೊಟ್ಟಹಾಗೆ ಆಗುತ್ತದೆ ಎನ್ನುವ ಬಗ್ಗೆ ಚರ್ಚೆ ಆಯಿತು. ಈ ಹೊಸ ಕಾಲೇಜುಗಳನ್ನು ಕೊಡುವ ಬಗ್ಗೆ ನಾನು ವಿರೋಧವಾಗಿರಲಿಲ್ಲ. ಆದರೆ ಈ ಮೆಡಿಕಲ್ ಕಾಲೇಜುಗಳು ಆಗಿದೆಯಲ್ಲ ಇದರಲ್ಲಿ ಎಷ್ಟು ಜನ ಕರ್ನಾಟಕದವರು ಇದ್ದಾರೆ ? ಇದು ಬಹಳ ಮುಖ್ಯವಾದುದು. ಇದರಲ್ಲಿ ನಮ್ಮ ಜನಕ್ಕೆ ಹೆಚ್ಚು ಸೀಟುಗಳು ಸಿಕ್ಕಬೇಕು ; ಆದರೆ ಇದರಲ್ಲಿ ಆ ತರಹ ಆಗಿಲ್ಲ. ಈ ಬಗ್ಗೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಕೆಲವರು ಹೈಕೋರ್ಟಿಗೆ ಹೋಗಿದ್ದಾರೆ. ಅದೂ ಕೂಡ ನನಗೆ ಗೊತ್ತು. ಇಂಜಿನಿಯರಿಂಗ್ ಕಾಲೇಜು ವಿಚಾರದಲ್ಲಿ ಕೂಡ ಇದೇ ರೀತಿ ಆಗಿದೆ ಅಲ್ಲಿ ಇನ್‌ಟೇಕ್ ಎಷ್ಟಿದೆ ಅದಕ್ಕಿಂತ ಹೆಚ್ಚು ಸೀಟುಗಳನ್ನು ತೆಗೆದುಕೊಂಡಿದ್ದಾರೆ. ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಈ ಬಗ್ಗೆ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್‌ನವರಿಗೆ ಇನ್‌ಟೆಕ್ ಪ್ರಕಾರ ಎಷ್ಟು ಸೀಟುಗಳಿಗೆ ಅಡ್ಮಿಟ್ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ಪತ್ರ ಬರೆದರು. ನಾನೂ ಕೂಡ ಇಲ್ಲಿ ಈ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಪ್ರಶ್ನೆ

ಕೇಳಿ ೬ ತಿಂಗಳಾಯಿತು ಇದುವರೆಗೆ ನನಗೆ ಉತ್ತರ ಬರಲಿಲ್ಲ. ಆ ಮೇಲೆ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್‌ನವರಿಂದ ಸೆಕ್ರೆಟರಿಯವರಿಗೆ ಸೀಟು ಕೊಡಕೂಡದು ಎಂದು ಆದೇಶ ಹೋಗಿದೆ. ಮಾನ್ಯ ವಿರೋಧಪಕ್ಷದನಾಯಕರು ಸೆಕ್ರೆಟರಿಯವರಿಗೂ ಪತ್ರ ಬರೆದರು. ಇದರಲ್ಲಿ ಮುಚ್ಚಿಡತಕ್ಕಂಥ ಪ್ರಶ್ನೆ ಏನಿದೆ ? ಗೌರ್ನಮೆಂಟ್ ಆರ್ಡರ್ ಪ್ರಕಾರ ಇನ್‌ಟೇಕ್‌ನಲ್ಲಿ ಎಷ್ಟು ವಿದ್ಯಾರ್ಥಿಗಳನ್ನು ನೀವು ಅಡ್ಮಿಟ್ ಮಾಡಿಕೊಂಡಿದ್ದೀರಿ ಎನ್ನುವ ಬಗ್ಗೆ ಅವರು ಅಂಕಿ ಅಂಶ ಕೊಡಕೂಡದೇ ? ನಾವು ಕಾಲೇಜ್ ವೈಸ್ ಫಿಗರ್ಸ್ ಕೇಳಿದ್ದೇವೆ. ಅವರು ಕೊಟ್ಟಿಲ್ಲ. ಇದನೆಲ್ಲಾ ನಾನು ಮಾನ್ಯ ಮುಖ್ಯಮಂತ್ರಿಯವರ ಅವಗಾಹನೆಗೆ ತರುತ್ತಿದ್ದೇನೆ. ಇವತ್ತು ಆ ಅಧಿಕಾರಿಗಳು ಆ ರೀತಿ ನಡೆದುಕೊಂಡರೆ ಹೇಗೆ ? ಅವರಿಗೆ ಸರಿಯಾದ ರೀತಿಯಲ್ಲಿ ಆದೇಶ ಕೊಡಬೇಕು. ಈ ಕಾಲೇಜುಗಳಲ್ಲಿ ಹೆಚ್ಚಾದ ಸೀಟುಗಳನ್ನು ಸರ್ಕಾರದ ಆದೇಶದ ಪ್ರಕಾರ ಮ್ಯಾನೇಜ್‌ಮೆಂಟ್‌ನವರು ತುಂಬಿದ್ದಾರೆ ಎಂದು ಹೇಳುತ್ತಾರೆ, ಕೆಲವು ಸೀಟುಗಳನ್ನು ಸರ್ಕಾರದವರೇ ತುಂಬಿದ್ದಾರೆ ಎಂದು ಹೇಳುತ್ತಾರೆ. ಅದು ಮಾನ್ಯ ಮುಖ್ಯಮಂತ್ರಿಯವರ ಆದೇಶವೋ ? ಅಥವಾ ಸಂಬಂಧಪಟ್ಟಂತಹ ಮಾನ್ಯ ಮಂತ್ರಿಯವರ ಆದೇಶವೋ ? ಅದರಲ್ಲಿ ೯೦ ಪರ್ಸೆಂಟ್‌ನಷ್ಟು ಸೀಟುಗಳು ಎಲ್ಲಾ ಹೊರಗಿನವರಿಗೆ ಹೋಗಿದೆ. ಅವರಿಂದ ಮ್ಯಾನೇಜ್‌ಮೆಂಟ್‌ನವರಿಗೆ ೧ ಲಕ್ಷ ೩೦ ಸಾವಿರ ರೂಪಾಯಿಗಳು ಬರಬೇಕು. ಆ ಹಣ ಅಲ್ಲಿ ಜಮಾ ಆಗಿದೆಯೋ ? ನಾನು ನೇರವಾಗಿ ಹೇಳುತ್ತಿದ್ದೇನೆ ಅಲ್ಲಿ ೨೦-೩೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಸರ್ಕಾರದ ವತಿಯಿಂದ ಸೀಟುಗಳನ್ನು ಆ ಮ್ಯಾನೇಜ್‌ಮೆಂಟ್‌ನವರು ಕೊಟ್ಟಿದ್ದಾರೆ. ಅದರ ಲೆಕ್ಕವನ್ನು ಅವರು ಕೊಡಬೇಕಾಗುತ್ತದೆ. ಮ್ಯಾನೇಜ್‌ಮೆಂಟ್‌ನವರ ಲೆಕ್ಕಾಚಾರ ನೋಡಿದರೆ, ಒಂದೊಂದು ಸೀಟಿಗೆ ೨೦ ಸಾವಿರ ತೆಗೆದುಕೊಂಡಿದ್ದರೂ ೧ ಲಕ್ಷ ೧೫ ಸಾವಿರ ರೂಪಾಯಿಗಳಾಗುತ್ತದೆ. ಆ ಹಣ ಎಲ್ಲೋ ಹೋಗಿದೆ ಎಂದು ಅರ್ಥವಾಗುತ್ತಿದೆ. ನನ್ನ ಆತ್ಮೀಯ ಸ್ನೇಹಿತರಾದ ಶ್ರೀ ಆರ್ಮುಗಂರವರು ಈ ಸದನದಲ್ಲಿ ಡಿಕ್ಲೇರ್ ಮಾಡಿದ್ದಾರೆ, ಏನೆಂದರೆ, ನನ್ನ ಸೊಸೈಟಿಯ ಲೆಕ್ಕವನ್ನು ಬೇಕಾದವರು ಬಂದು ನೋಡಲಿ, ಅದನ್ನು ನಾನು ಅಸೆಂಬ್ಲಿಯ ಮುಂದೆ ಕೂಡ ಇಡುತ್ತೇನೆ, ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆ ರೀತಿ ಆ ಮ್ಯಾನೇಜ್‌ಮೆಂಟಿನ ಲೆಕ್ಕವನ್ನು ತೆಗೆಯಬೇಕು. ಹಾಗೆ ತೆಗೆದರೆ ಎಲ್ಲಾ ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರಿಂದ ಎಷ್ಟು ಜನ ಸೀಟುಗಳನ್ನು ತೆಗೆದುಕೊಂಡಿದ್ದಾರೆ ? ಅದಕ್ಕೆ ಎಷ್ಟು ಹಣ ಸೊಸೈಟಿಗೆ ಸಂದಾಯವಾಗಿವೆ ? ಸೊಸೈಟಿಗೆ ಸಂದಾಯವಾಗದಿದ್ದರೆ ಯಾರಿಗೆ ಸಂದಾಯವಾಗಿದೆ ? ಇದೆಲ್ಲಾ ಮಹತ್ವದ ವಿಚಾರಗಳು. ಇವತ್ತು ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಂದ ವಿವರಗಳನ್ನು ತಿಳಿಯಬಯಸುತ್ತೇನೆ. ಮಂಗಳೂರು ಕಾಲೇಜಿನಲ್ಲಿ ಎಷ್ಟು ಸೀಟುಗಳು ಇವೆ ? ಬೆಂಗಳೂರು ಕಾಲೇಜಿನಲ್ಲಿ ಎಷ್ಟು ಸೀಟುಗಳು ಇವೆ ? ದಾವಣಗೆರೆ ಕಾಲೇಜಿನಲ್ಲಿ ಅವರ ಸೀಟುಗಳು ಎಷ್ಟು ಇವೆ ? ಬೇರೆ ಬೇರೆ ಕಾಲೇಜುಗಳಲ್ಲಿ ಎಷ್ಟೆಷ್ಟು ಸೀಟುಗಳು ಇವೆ ? ಆ ಸೀಟುಗಳೆಲ್ಲಾ ಕರ್ನಾಟಕ ಬಡವರಿಗೆ ಹೋಗಿದೆಯೋ ? ಅಥವಾ ಉತ್ತರಭಾರತದ ಬೇರೆ ಬೇರೆ ರಾಜ್ಯಗಳ ಶ್ರೀಮಂತ ಹುಡುಗರಿಗೆ ಹೋಗಿದೆಯೋ ? ಇವೆಲ್ಲಾ ನಾವು ಅವಶ್ಯವಾಗಿ ತಿಳಿದುಕೊಳ್ಳಬೇಕಾದ ವಿಚಾರಗಳು. ಆ ಹುಡುಗರು ಯಾರು ? ಆ ಸ್ಟೂಡೆಂಟ್ಸ್ ಹೆಸರು, ಅವರ ಬಗ್ಗೆ ಪರ್ಟಿಕ್ಯುಲರ್ಸ್ ಮತ್ತು ಅವರು ಕೊಟ್ಟಿರತಕ್ಕಂಥ ಹಣದ ಮೊತ್ತ--ಇವೆಲ್ಲಾ ವಿವರಗಳನ್ನೂ ಅವರು ಕೊಡಬೇಕಾಗುತ್ತದೆ. ಆ ಸೀಟುಗಳನ್ನು ನಮ್ಮ ಕರ್ನಾಟಕದ ಹುಡುಗರಿಗೆ ಕೊಟ್ಟಿದ್ದರೆ ನನಗೆ ಚಿಂತೆ ಇರಲಿಲ್ಲ. ನಮ್ಮ ಕರ್ನಾಟಕ ರಾಜ್ಯದ ಬಡಹುಡುಗರನ್ನು ಕರೆದು ಅವರಿಗೆ ನಮ್ಮ ಸರ್ಕಾರದವರು ಸೀಟುಗಳನ್ನು ಕೊಟ್ಟಿದ್ದರೆ ನಾನು ಅದನ್ನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಆದರೆ ಅದು ಆ ರೀತಿಯಲ್ಲಿ ನಡೆದಿಲ್ಲ. ಅದರಲ್ಲಿ ನನ್ನ ಲೆಕ್ಕಾಚಾರದ ಪ್ರಕಾರ ಕೋಟ್ಯಾಂತರ ರೂಪಾಯಿಗಳ ಹಣದ ವ್ಯವಹಾರ ನಡೆದಿದೆ. ಈ ವರ್ಷ ಕೂಡ ಅಲ್ಲೆಲ್ಲಾ ಅದೇ ರೀತಿಯಾಗಿ ಆಗುತ್ತಿದೆ. ಆ ರೀತಿ ಆಗಕೂಡದು ಈ ಎಲ್ಲಾ ವಿವರಗಳನ್ನು ನಾನು ಮಾನ್ಯ ಮುಖ್ಯಮಂತ್ರಿಯವರಿಂದ ತಿಳಿದುಕೊಳ್ಳ ಬಯಸುತ್ತೇನೆ. ನಾನು ಈ ಬಗ್ಗೆ--ಈಗಾಗಲೇ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರದವರಿಂದ ಉತ್ತರ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಎಷ್ಟು ಜನ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜಿನಲ್ಲಿ ಮತ್ತು ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟುಗಳನ್ನು ಕೊಡಿಸಿದ್ದಾರೆ ? ಸಂಬಂಧಪಟ್ಟ ಮಾನ್ಯ ಮಂತ್ರಿಯವರು ಎಷ್ಟು ಸೀಟುಗಳನ್ನು ಕೊಡಿಸಿದ್ದಾರೆ ? ಆ ವಿದ್ಯಾರ್ಥಿಗಳು ಯಾವ ರಾಜ್ಯದವರು ? ಅವರ ಶ್ರೀಮಂತಿಕೆ ಎಷ್ಟು ? ಇದೆಲ್ಲಾ ನನಗೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಯವರಿಗೆ ಗೆಳೆಯರು ಇರುತ್ತಾರೆ, ಅವರು ಡೆಲ್ಲಿಯಿಂದ ಬರಬಹುದು. ಅವರಿಗೆಲ್ಲಾ ಸೀಟುಗಳು ಹೋಗಿದೆ

ಅವರೆಲ್ಲಾ ಫ್ರೀಡಂ ಫೈಟರ್ಸ್ ಮಕ್ಕಳು ಇರಬಹುದು. ಬೇರೆ ಬೇರೆ ರಾಜ್ಯಗಳ ಶ್ರೀಮಂತರ ಮಕ್ಕಳಿಗೆ ಆ ಸೀಟುಗಳೆಲ್ಲಾ ಹೋಗಿದೆ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಚಲಾವಣೆ ಆಗಿದೆ, ಅದು ಈಗಲೂ ನಡೆಯುತ್ತಾ ಇದೆ. ನಾನು ಇಲ್ಲಿ ೨ ಕೋಟಿ ರೂಪಾಯಿಗಳ ವ್ಯವಹಾರದ ಬಗ್ಗೆ ಪ್ರಶ್ನೆ ಎತ್ತಿದ್ದೇನೆ ಮತ್ತು ಇಲ್ಲಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಬಗ್ಗೆ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಪಕ್ಷದ ಸಭೆಯಲ್ಲಿ ಮಾತನಾಡುವಾಗ 'ಶ್ರೀ ಬೊಮ್ಮಾಯಿಯವರು ಯಾವ ಸ್ವಾಮಿಗಳನ್ನಾದರೂ ಕರೆದುಕೊಂಡು ಬಂದು ಸೀಟು ಕೊಡಿ ಎಂದರೂ ನಾನು ಕೊಡುತ್ತೇನೆ' ಎಂದು ಹೇಳಿದರು ಹೌದು ನನಗೆ ಕೇಳತಕ್ಕಂಥ ಹಕ್ಕು ಇದೆ. ಮಾನ್ಯ ಮುಖ್ಯಮಂತ್ರಿಯವರು ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜು ಕೊಟ್ಟಿದ್ದಾರೆ. ಧಾರವಾಡ ಬಹಳ ದೊಡ್ಡ ಜಿಲ್ಲೆ. ಬೇರೆ ಜಿಲ್ಲೆಗಳಿಗಿಂತ ಇದು ೪ ಪಟ್ಟು ದೊಡ್ಡದು, ಇಲ್ಲಿ ದಕ್ಷಿಣ ಭಾಗದಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜು ಇಲ್ಲ, ಕೊಡಿ ಎಂದು ನಾನು ಕೇಳಿದ್ದೆ. ನಾನು ಕೇಳಿದ್ದೂ ನಿಜ, ಅವರು ಕೊಟ್ಟದ್ದು ನಿಜ, ಏಕೆಂದರೆ ಅದು ಬ್ಯಾಕ್‌ವರ್ಡ್ ಏರಿಯಾ ಆಗಿದೆ. ಅವರು ಇಂಜಿನಿಯರಿಂಗ್ ಕಾಲೇಜನ್ನು ಕೊಟ್ಟಿದ್ದಾರೆ. ಆದರೆ ದುಡ್ಡು ಮಾಡುವುದಕ್ಕೆ ಕಾಲೇಜು ಕೊಡಿ ಎಂದು ನಾನು ಯಾವತ್ತೂ ಕೇಳಲಿಲ್ಲ. ಮ್ಯಾನೇಜ್‌ಮೆಂಟ್ ಆಗಲೀ, ಸರ್ಕಾರವಾಗಲೀ, ಮಂತ್ರಿಗಳಾಗಲಿ ದುಡ್ಡು ಮಾಡುವುದಕ್ಕೆ ನಾನು ಅದನ್ನು ಕೇಳಲಿಲ್ಲ. ಜನರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ನಾನು ಕೇಳಿದ್ದೇನೆ. ಅವರು ಕೊಟ್ಟಿದ್ದಾರೆ. ಆದರೆ ಆ ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾದಾನ ಮಾಡತಕ್ಕಂಥಾದರಲ್ಲಿ ಈ ಒಂದು ಅವ್ಯವಹಾರ ನಡೆಯುತ್ತಿದೆ. ಇದು ನಿಲ್ಲಬೇಕು. ಬೇರೆ ಬೇರೆ ಇಂಡಸ್ಟ್ರಿಯಾಲಿಸ್ಟ್ಸ್‌ನಿಂದ ಡೊನೇಷನ್ ತೆಗೆದುಕೊಳ್ಳತಕ್ಕಂಥ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಅವರಿಗೆ ಅಧಿಕಾರವಿದೆ, ವರ್ಚಸ್ಸು ಇದೆ, ಅವರ ಪಕ್ಷಕ್ಕೆ ಹಣ ಶೇಖರಣೆ ಮಾಡತಕ್ಕಂಥ ಶಕ್ತಿ ಇದೆ, ಅದರ ಬಗ್ಗೆ ನಾನು ಇಲ್ಲಿ ಹೇಳುವುದಿಲ್ಲ. ಆದರೆ ಆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾದಾನ ಮಾಡತಕ್ಕಂಥಾದರಲ್ಲಿ ನಡೆಯುತಕ್ಕಂಥ ಈ ಒಂದು ಅವ್ಯವಹಾರ ನಿಲ್ಲಬೇಕು, ಅದು ನಿಲ್ಲದಿದ್ದರೆ ಈ ಇಂಜಿನಿಯರಿಂಗ್ ಕಾಲೇಜುಗಳಿಂದ, ವಿಶ್ವವಿದ್ಯಾನಿಲಯಗಳಿಂದ ಅಂತಹವರೇ ಹೊರಗೆ ಬರುತ್ತಾರೆ ಎನ್ನತಕ್ಕಂಥ ಮಾತನ್ನು ಅವರು ತಿಳಿದುಕೊಳ್ಳಬೇಕು. ಇವತ್ತು ಅನೇಕ ವಿಚಾರಗಳನ್ನು ಹೇಳಬೇಕಾಗಿತ್ತು. ಆದರೆ ಅದಕ್ಕೆಲ್ಲಾ ಸಮಯವಿಲ್ಲ. ಇನ್ನು ಕೊನೆಯದಾಗಿ, ಮಾನ್ಯ ಮುಖ್ಯಮಂತ್ರಿ ಶ್ರೀ ಗುಂಡೂರಾಯರ ಸರ್ಕಾರದ ಬಗ್ಗೆ ಹೇಳುವುದಾದರೆ, ಅವರ ನಡೆನುಡಿಯಲ್ಲಿ ಭೂಮಿ–ಆಕಾಶ ದಷ್ಟು ಅಂತರವಿದೆ. ಅವರು ಇಲ್ಲಿ ಅನೇಕ ವಿಚಾರಗಳನ್ನು ಸಾರ್ವಜನಿಕವಾಗಿ ಹೇಳಿದ್ದಾರೆ. ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ಹೇಳಿದ್ದಾರೆ, ಕಾರವಾರದ ಬಂದರು ಬಗ್ಗೆ ಹೇಳಿದ್ದಾರೆ, ಬ್ರಾಡ್‌ಗೇಜ್ ಬಗ್ಗೆ ಹೇಳಿದ್ದಾರೆ. ಆದರೆ ಅದರಲ್ಲಿ ಒಂದೂ ಆಗಲಿಲ್ಲ.

ನಮ್ಮ ಕರ್ನಾಟಕ ರಾಜ್ಯಕ್ಕೆ ವಿಜಯನಗರದ ಉಕ್ಕಿನ ಕಾರ್ಖಾನೆ ಬರುತ್ತದೆ ಎನ್ನುವ ವಿಷಯವನ್ನು ನಾವು ಬರೀ ಕನಸಿನಲ್ಲಿ ತಿಳಿದುಕೊಳ್ಳಬೇಕು, ಅದು ಕನಸಾಗುವ ಪರಿಸ್ಥಿತಿ ಇಲ್ಲ. ಇನ್ನು ಕಾಳೀ ನದಿಯ ಮೇಜರ್ ಇರಿಗೇಷನ್‌ಗೆ ಕೇಂದ್ರ ಸರ್ಕಾರದಿಂದ ಹಣ ಬಂದಿದ್ದರೂ ಕೂಡ ಅದನ್ನು ಅದಕ್ಕೆ ಉಪಯೋಗ ಮಾಡಿಕೊಳ್ಳದೆ ಆ ಹಣವನ್ನು ಟಿ. ವಿ. ಗೆ ಕೊಟ್ಟಿದ್ದಾರೆ. ನಾವು ಟಿ. ವಿ. ಯಲ್ಲಿ ಮರಾಠಿ ಮತ್ತು ತಮಿಳು ಭಾಷೆಯನ್ನು ಈಗ ಯಾರು ಕೇಳುತ್ತಾರೆ. ನೀವು ಟಿ. ವಿ. ಯನ್ನು ತಂದಿರುವುದು ನೋಡಿದರೆ ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ ಅದು ಏನೆಂದರೆ ಹೊಟ್ಟೆಗೆ ಊಟ ಇಲ್ಲ ಜುಟ್ಟಿಗೆ ಮಲ್ಲಿಗೆ ಹೂವು ಎಂದು ಹಾಗೆ ಆಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರತಿ ದಿನ ಸಮಸ್ಯೆಗಳು ಸರಪಳಿಯಾಗುವಂತಹ ಪರಿಸ್ಥಿತಿಗೆ ಬಂದಿದೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ, ಒಂದು ಕಡೆ ಸ್ಟೈಪೆಂಡರಿ ಪದವೀಧರರ ಸಮಸ್ಯೆ ಮತ್ತೊಂದು ಕಡೆ ರೈತರ ಸಮಸ್ಯೆ, ಮತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಂದು ಉತ್ತರವನ್ನು ಕೊಡಬಹುದು ಅದು ಏನೆಂದರೆ ನಾವು ರೈತರ ಸಮಸ್ಯೆಯನ್ನು ಬಗೆಹರಿಸಿದ್ದೇವೆ ಮತ್ತು ರಾಜ್ಯದಲ್ಲಿ ಉಂಟಾದಂತಹ ಭಾಷಾ ಸಮಸ್ಯೆಯನ್ನು ಪರಿಹಾರ ಮಾಡಿದ್ದೇವೆ ಮತ್ತು ಗೋಕಾಕ್ ವರದಿಯನ್ನು ಜಾರಿಗೆ ತಂದಿದ್ದೇವೆ ಎನ್ನುವ ಮಾತನ್ನು ಅವರು ಹೇಳಿದರೂ ಹೇಳಬಹುದು, ಆದರೆ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಎಲ್ಲಾ ಹಂತಗಳಲ್ಲಿಯೂ ಕೂಡ ವಿರೋಧಪಕ್ಷದವರು ಸಹಕರಿಸಿದ್ದರಿಂದ ಮಾತ್ರ ತಾವು ಬಗೆಹರಿಸುವುದಕ್ಕೆ ಸಾಧ್ಯವಾಯಿತು, ಮತ್ತು ಇದರಲ್ಲಿ ನಮ್ಮದು ಸಹ ಕಿಂಚಿತ್ತು ಪಾತ್ರ ಇದೆ ಎನ್ನುವ ಮಾತನ್ನು ನಾನು ಈ

ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ರೈತರಿಗೆ ಅವರು ತೆಗೆದುಕೊಂಡಿರುವ ಬೆಟರ್‌ಮೆಂಟ್ ಲೆವಿಯನ್ನು ರದ್ದು ಮಾಡುತ್ತೇವೆಂದು ಹೇಳಿದಿರಿ ಆದರೆ ಇದುವರೆವಿಗೂ ಅದನ್ನು ತಾವು ರದ್ದು ಮಾಡುವುದಕ್ಕೆ ಆಗಲಿಲ್ಲ. ಮತ್ತೆ ರಾಜ್ಯದಲ್ಲಿ ಪಾರ್ಟೀನಿ ನಂ ಸಮಸ್ಯೆ ಹೆಚ್ಚಾಗಿದೆ ಅದನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ರಾಜ್ಯದಲ್ಲಿ ಇವತ್ತು ಅಲಸ್ಯತನ ಜಾಸ್ತಿಯಾಗಿದೆ ಆಡಳಿತದಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಳ್ಳುವುದು ಕಡಿಮೆಯಾಗಿದೆ, ಈ ಎಲ್ಲಾ ವಿಷಯಗಳಿಗೂ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ನಾನು ತಿಳಿದುಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಸನ್ಮಾನ್ಯ ಅಧ್ಯಕ್ಷರೇ ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳ ಖಾತೆಗಳಿಗೆ ಸಂಬಂಧಪಟ್ಟ ಹಾಗೆ ಹಾಗೂ ಅವರು ಕೊಟ್ಟಿರುವಂತಹ ಅಂಕಿಅಂಶಗಳಿಗೆ ನಾನು ವಿವರಣೆಯನ್ನು ಕೊಡುವುದಕ್ಕೆ ನಿಂತಿಲ್ಲ. ಆದರೆ ನಮ್ಮ ವಿರೋಧ ಪಕ್ಷದ ಸದಸ್ಯರು ಮಾತನಾಡು ವಂತಹ ಸಂದರ್ಭದಲ್ಲಿ ಅವರು ಮಾಡಿದಂಥ ರಾಜಕೀಯ ಭಾಷಣಕ್ಕೆ ನಾನು ಉತ್ತರ ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಮಾನ್ಯ ವಿರೋಧ ಪಕ್ಷದ ಸದಸ್ಯರಾದಂತಹ ಶ್ರೀಮಾನ್ ಎಸ್. ಬಂಗಾರಪ್ಪನವರು ನಮ್ಮ ಆಳುವ ಪಕ್ಷ ಬಿಟ್ಟು ವಿರೋಧ ಪಕ್ಷಕ್ಕೆ ಸೇರಿದ ಮೇಲೆ ಮೊಟ್ಟಮೊದಲನೆಯದಾಗಿ ಮಾಡಿದಂತಹ ಭಾಷಣ. ಮಾನ್ಯ ವಿರೋಧ ಪಕ್ಷದ ಸದಸ್ಯರಾದಂತಹ ಶ್ರೀಮಾನ್ ಎಸ್. ಬಂಗಾರಪ್ಪನವರು ಮಾಡಿದಂತಹ ಭಾಷಣವನ್ನು ನಾನು ಸಂಪೂರ್ಣವಾಗಿ ಕುಳಿತು ಕೊಂಡು ಕೇಳಿದ್ದೇನೆ. ಅವರ ಭಾಷಣವನ್ನು ನಾನು ಕೇಳಿದ ಮೇಲೆ ಅದರ ಮೇಲೆ ನಾನು ಎರಡು ಮಾತುಗಳನ್ನು ಮಾತನಾಡಬೇಕು ಎಂದು ನನಗೆ ಮನಸ್ಸು ಆಗಿದೆ. ನಾನು ವಿರೋಧಪಕ್ಷದ ಸದಸ್ಯನಾಗಿ ಆ ಕಡೆ ಕುಳಿತುಕೊಂಡಿದ್ದ ಸಂದರ್ಭದಲ್ಲಿ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಂಗಾರಪ್ಪನವರು ಕಂದಾಯ ಇಲಾಖೆಯ ಮಂತ್ರಿಗಳಾಗಿದ್ದರು. ಆಗ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಂಗಾರಪ್ಪ ನವರು ಶ್ರೀಮತಿ ಇಂದಿರಾಗಾಂಧಿಯವರನ್ನು ಹೊಗಳಿ ಅವರ ಪಕ್ಷಕ್ಕೆ ಸೇರಿ ಅವರ ಪಕ್ಷದ ಚಿಹ್ನೆಯ ಮೇಲೆ ಆರಿಸಿ ಬಂದು ಅವರ ಪಕ್ಷದಲ್ಲಿ ಮಂತ್ರಿಗಳಾಗಿದ್ದರು, ಆದರೆ ಕಳೆದ ಕೆಲವು ದಿನಗಳ ನಂತರ ಅವರು ಆಳುವ ಪಕ್ಷವನ್ನು ಬಿಟ್ಟು ವಿರೋಧ ಪಕ್ಷಕ್ಕೆ ಹೋಗಿದ್ದಾರೆ. ಅವರು ತಮ್ಮದೆ ಆದಂಥ ಒಂದು ಸ್ವಂತ ಪಕ್ಷವನ್ನು ಸ್ಥಾಪನೆ ಮಾಡಿಕೊಂಡಿಲ್ಲ. ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಂಗಾರಪ್ಪ ನವರು ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷರಾಗಿದ್ದರು, ಮತ್ತು ಆ ನಂತರ ಮಂತ್ರಿಗಳಾಗಿದ್ದರು, ಆಗ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವವನ್ನು ಒಪ್ಪಿಕೊಂಡು ಅವರು ಎಲ್ಲಾ ಕಡೆಗಳಲ್ಲಿ ಭಾಷಣ ವನ್ನು ಸಹ ಮಾಡಿದ್ದಾರೆ. ಮತ್ತು ಈ ಸದನದಲ್ಲಿಯೂ ಕೂಡ ಭಾಷಣ ಮಾಡಿದ್ದಾರೆ, ಅಂದ ಮೇಲೆ ಅವರ ನಾಯಕತ್ವವನ್ನು ಅವರು ಸಂಪೂರ್ಣವಾಗಿ ಒಪ್ಪಿಕೊಂಡ ಹಾಗೆ ಆಯಿತು. ಆದರೆ ಕೆಲವು ದಿವಸ ಗಳ ಹಿಂದೆ ಅವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟು ಆ ಕಡೆ ಹೋಗಿದ್ದಾರೆ. ಆದರೆ ಮಾನ್ಯ ಅಧ್ಯಕ್ಷರೆ ನನ್ನ ಅನುಭವದ ಪ್ರಕಾರ ನಾನು ಹೇಳುವುದಾದರೆ ನಾವು ಯಾವ ಪಕ್ಷದ ನಾಯಕ ರನ್ನು ನಾಯಕರೆಂದು ಒಪ್ಪಿಕೊಂಡಿರುತ್ತೇವೆಯೋ ಆ ನಾಯಕರು ಇರುವವರೆವಿಗೂ ನಾವು ನಾಯಕ ರಾಗುವುದಕ್ಕೆ ಸಾಧ್ಯವಾಗುವುದಿಲ್ಲ ಆ ನಾಯಕರನ್ನು ನಾವು ಎಂದಿಗೂ ಅಲ್ಲಗಳೆಯುವುದಕ್ಕೆ ಆಗುವು ದಿಲ್ಲ, ಅದು ಯಾರಿಗೂ ಸಲ್ಲದ ವಿಷಯ. ಅದೇ ಶ್ರೀಮಾನ್ ದೇವರಾಜ ಅರಸ್‌ರವರು ತಮ್ಮ ನಾಯಕಿ ಯನ್ನು ಅಲ್ಲಗೆಳೆದು ಹೊರಗಡೆ ಬಂದ ಮೇಲೆ ಹೇಳಿದರು ಶ್ರೀಮತಿ ಇಂದಿರಾಗಾಂಧಿಯವರು ನನಗೆ ನಾಯಕಿಯಲ್ಲ ನನಗೆ ನಾನೇ ನಾಯಕ ಎಂದು ಹೇಳಿದರು ..

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಸವಲಿಂಗಪ ನವರು ದೇವರಾಜ ಅರಸರು ನಾಯಕರಾಗಿದ್ದಾಗ ಅವರ ಪಕ್ಷದಲ್ಲಿ ಇದ್ದರು. ಆಗ ಅವರನ್ನು ತಮ್ಮ ನಾಯಕರೆಂದು ಒಪ್ಪಿಕೊಂಡ ಹಾಗೆ ಆಗಲಿಲ್ಲವೇ ?

ಶ್ರೀ ಎಸ್. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ನಾನು ದೇವರಾಜ ಅರಸ್‌ರವರನ್ನು ನಾಯಕ ರೆಂದು ಯಾವಾಗಲು ಒಪ್ಪಿಕೊಂಡಿಲ್ಲ. ಅದರ ವಿಷಯವಾಗಿ ನಾನು ಕೆಲವಾರು ಬಾರಿ ಸ್ಪಷ್ಟಪಡಿಸಿ ದ್ದೇನೆ. ಅದೇ ರೀತಿಯಲ್ಲಿ ಶ್ರೀಮಾನ್ ಬಂಗಾರಪ್ಪನವರು ಇವತ್ತು ಶ್ರೀಮತಿ ಇಂದಿರಾಗಾಂಧಿಯವರು ನನ್ನ ನಾಯಕಿಯಲ್ಲ ನಾನೇ ನಾಯಕನೆಂದು ಸಿಡಿದು ಹೊರ ಬಂದಿದ್ದಾರೆ. ಆದರೆ ನಮ್ಮ ದೇಶದಲ್ಲಿ

ಶ್ರೀಮತಿ ಇಂದಿರಾಗಾಂಧಿಯವರು ನಾಯಕರಾಗಿ ಇರುವ ತನಕ ಬೇರೆ ಯಾರು ನಾಯಕರಾಗುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ದೇವರಾಜ ಅರಸ್‌ರವರು ನಾನೇ ನಾಯಕನೆಂದು ಹೇಳಿಕೊಂಡು ಅವರು ಕಲ್ಲಹಳ್ಳಿಗೆ ಹೋದರು. ಶ್ರೀಮಾನ್ ಬಂಗಾರಪ್ಪನವರು ನಮ್ಮ ನಾಯಕಿ ಶ್ರೀಮತಿ ಇಂದಿರಾಗಾಂಧಿ ಎಂದು ಎಲ್ಲಾ ಕಡೆಗಳಲ್ಲಿಯೂ ಪ್ರಚಾರ ಮಾಡಿದ್ದಾರೆ. ಪ್ರತಿಯೊಬ್ಬರ ಬಾಗಿಲ ಬಳಿ ಹೋಗಿ ಶ್ರೀಮತಿ ಇಂದಿರಾಗಾಂಧಿ ನನ್ನ ನಾಯಕಿ ಎಂದು ಹೇಳಿಕೊಂಡು ಅವರು ಮತವನ್ನು ಪಡೆದಿದ್ದಾರೆ ಆದ್ದರಿಂದ ಅವರು ನನ್ನ ನಾಯಕರಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಬಂಗಾರಪ್ಪನವರನ್ನು ಎಲ್ಲಾ ಜನರ ಮನ್ನಣೆಯನ್ನು ಪಡೆದಿಲ್ಲ. ಆದರೆ ಶ್ರೀಮತಿ ಇಂದಿರಾಗಾಂಧಿಯವರು ಎಲ್ಲಾ ಜನತೆಯ ಮೆಚ್ಚಿಗೆ ಹಾಗೂ ಮನ್ನಣೆ ಪಡೆದಿದ್ದಾರೆ, ಆದ್ದರಿಂದ ಈಗ ಯಾರು ನಾಯಕರಾಗುತ್ತಾರೆ ಎಂದು ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರೇ ಹೇಳಲಿ ?

ಶ್ರೀ ಸಿ. ಎಂ. ಇಬ್ರಾಹಿಂ.—ಶ್ರೀಮಾನ್ ಜೆ. ಹೆಚ್. ಪಟೇಲ್ ಅವರಿಗೆ ತಲೆನೋವು.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಬಂಗಾರಪ್ಪನವರನ್ನು ಒಂದು ಕಡೆ ಕ್ರಾಂತಿರಂಗದವರು ಕರೆಯುತ್ತಿದ್ದಾರೆ. ಬಿ.ಜೆ.ಪಿ. ಯವರು ಒಂದು ಕಡೆ ಕರೆಯುತ್ತಿದಾರೆ. ಶ್ರೀಮಾನ್ ಚಂದ್ರೇಗೌಡರು ಶ್ರೀಮಾನ್ ಬಂಗಾರಪ್ಪನವರನ್ನು ಸ್ವಾಗತ ಮಾಡಿದ್ದಾರೆ.

೪–೩೦ ಪಿ.ಎಂ.

ಶ್ರೀಮಾನ್ ಜಗಜೀವನ್‌ರಾಮ್ ಅವರು ಪಾರ್ಟಿ ಬಿಟ್ಟು ಒಳ್ಳೆ ಕೆಲಸ ಮಾಡಿದರು. ನಿಮಗೆ ಒಳ್ಳೆಯದಾಗುತ್ತದೆ, ನಮ್ಮ ಪಾರ್ಟಿಗೆ ಬನ್ನಿ. ಎಂದು ಹೇಳಿದರು. ಅವರು ಪ್ರಖ್ಯಾತಿಯನ್ನು ಏನೋ ಗಳಿಸಿದ್ದಾರೆ. ಆದರೆ, ಇದುವರೆಗೆ ಅವರು ತಮ್ಮದೇ ಆದ ಪಾರ್ಟಿಯನ್ನು ಸ್ಥಾಪನೆ ಮಾಡಿಲ್ಲ. ಯಾರಿಗೂ ಕೂಡ ಅವರು ಮನ್ನಣೆ ಕೊಟ್ಟಿಲ್ಲ. ತಮ್ಮದೇ ಆದಂತಹ ವ್ಯಕ್ತಿತ್ವವನ್ನು ಕೈಬಿಟ್ಟು ರಾಜಕೀಯ ಮಾಡಲಿಕ್ಕೆ ಹೊರಟಿದ್ದಾರೆ. ಸ್ವಾಮಿ, ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ವಿರೋಧ ಪಕ್ಷದಲ್ಲಿ ಛಿದ್ರಛಿದ್ರವಾಗಿ ಕುಳಿತುಕೊಂಡಿರತಕ್ಕಂಥ ಜನ ಇದೇ ರೀತಿಯಾಗಿ ಮುಂದಕ್ಕೂ ಕೂಡ ಛಿದ್ರ ವಾಗಿಯೇ ಇರುತ್ತೀರಿ. ಅವರು ನಾಯಕತ್ವವನ್ನು ಒಪ್ಪಲಿ, ಒಪ್ಪಿಕೊಳ್ಳದೇ ಹೋಗಲಿ. ಆದರೆ ಶ್ರೀಮಾನ್ ಬಂಗಾರಪ್ಪನವರು ವೈಯಕ್ತಿಕವಾಗಿಯೇ ಉಳಿಯುತ್ತಾರೆ...

ಶ್ರೀ ಹೆಚ್. ಗಂಗಾಧರನ್.—ಬಸವಲಿಂಗಪ್ಪನವರೇ, ನೀವು ನಿಮ್ಮ ವಿಶ್ಲೇಷಣೆಯನ್ನು ನೀವೇ ವಿರೋಧ ಮಾಡುತ್ತಿದ್ದೀರಿ. ಜನತೆ ಯಾರನ್ನು ನಾಯಕರೆಂದು ಒಪ್ಪಿಕೊಳ್ಳುತ್ತಾರೆ, ಅವರೇ ನಾಯಕರು ಎಂದು ನೀವು ಹೇಳಿದಿರಿ. ಶ್ರೀಮತಿ ಇಂದಿರಾಗಾಂಧಿಯವರು ನಾಯಕರು ಎಂದು ಜನತೆ ಒಪ್ಪಿಕೊಂಡಿರುವುದರಿಂದ ಅವರು ನಾಯಕರಾಗಿಯೇ ಉಳಿಯುತ್ತಾರೆ. ಬಸವಲಿಂಗಪ್ಪನವರು ನಾಯಕ ರಾಗುವುದಿಲ್ಲ, ಅವರು ಹರಿಹರಕ್ಕೆ ಹೋಗುತ್ತಾರೆ ಎಂಬುದು ನಿಮ್ಮ ಮಾತಿನ ಅರ್ಥ, ವಿರೋಧ ಪಕ್ಷ ದವರನ್ನು ಜನ ಯಾರನ್ನೇ ನಾಯಕರೆಂದು ಆರಿಸಿಕೊಳ್ಳಲಿ. ಅದರ ಬಗ್ಗೆ ನಿಮಗೆ ಚಿಂತೆ ಏಕೆ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನನಗೆ ಚಿಂತೆಯೇ ಇಲ್ಲ. ಅದು ಜನಗಳಿಗೇ ಬಿಟ್ಟಿದ್ದು. ಇವತ್ತಿನ ದಿವಸ ಬೈ ಎಲೆಕ್ಷನ್ ಆಗಲಿ, ಯಾವುದೇ ಆಗಲಿ, ಅದು ಜನಗಳಿಗೇ ಬಿಟ್ಟಿದ್ದು. ಜನರು ತೀರ್ಮಾನ ಕೊಟ್ಟರೆ ಎಲ್ಲರೂ ಅದನ್ನು ಒಪ್ಪಬೇಕಾಗುತ್ತದೆ ಆದರೆ, ನನ್ನ ಸಂಕಟ ಏನು ಅಂದರೆ ವಿರೋಧ ಪಕ್ಷದಲ್ಲಿ ನೀವು ಎಷ್ಟು ಜನ ಇದ್ದೀರಿ. ಸ್ವತಂತ್ರರಾಗಿ ಇದ್ದೀರಿ, ಸ್ವತಂತ್ರ ಪಾರ್ಟಿ ಗಳನ್ನು ಕಟ್ಟಿಕೊಂಡು ಇದ್ದೀರಿ, ಯಾರೋ ಒಬ್ಬ ಮನುಷ್ಯರು ನಮ್ಮ ಪಾರ್ಟಿಯನ್ನು ಬಿಟ್ಟು ಹೋದರೆ ನೀವೆಲ್ಲರೂ ಅವರ ಸಭೆ ಮಾಡಿದಾಗ ಹೋಗಿ ಭಾಷಣ ಮಾಡಿದ್ದೀರಲ್ಲ, ನಿಮ್ಮ ಪರಿಸ್ಥಿತಿ ಏನಾದೀತು ?......

(ಗೊಂದಲ)

ಶ್ರೀ ಜೆ.ಹೆಚ್ ಪಟೇಲ್.—ಬಂಗಾರಪ ನವರು ಹೊರಗೆ ಬಂದರೆ, ಇವತ್ತು ಜನತೆ ನಿಮ್ಮ ಪಾರ್ಟಿ ಬಗ್ಗೆ ಎಷ್ಟು ಸೀಟು ಹೊಂದಿದ್ದಾರೆ ಎಂದು ತೋರಿಸುವುದಕ್ಕೆ ಒಂದು ನೆಪ ಮಾತ್ರ. ಆದ್ದರಿಂದ, ಪ್ರಖ್ಯಾತಿ ಬಂದಿದೆ ಎಂದರೆ ಅದು ಯಾರೋ ಒಬ್ಬ ವ್ಯಕ್ತಿಯಿಂದ ಅಲ್ಲ, ಜನರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತೋರಿಸಿದ್ದೇನೆ. ಎಂದು ಸ್ವಯಂ ಬಂಗಾರಪ್ಪನವರೇ ಹೇಳಿದ್ದಾರೆ......

